ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 8 ಭಾನುವಾರ 2023
ಸಂಪುಟ: 44 | ಸಂಚಿಕೆ: 173 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಅವಕಾಶ ವಂಚಿತರಿಗೆ ಸೌಲಭ್ಯ; ಸಮಸಮಾಜ ನಿರ್ಮಾಣಕ್ಕೆ

ಜಾತಿಗಣತಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ
- ಜಾತಿಗಣತಿ ಸಮಾಜವನ್ನು ಎಂದಿಗೂ ವಿಭಜಿಸಲ್ಲ
- ನವೆಂಬರ್‌ನಲ್ಲಿ ರಾಜ್ಯದ ಜಾತಿಗಣತಿ ವರದಿ ಪ್ರಕಟ

ಮೈಸೂರು, ಅ.7(ಎಂಟಿವೈ)– ಅವಕಾಶ ವಂಚಿತರಿಗೆ ಸೌಲಭ್ಯ ಕಲ್ಪಿಸುವುದರೊಂದಿಗೆ ಸಮ ಸಮಾಜ ನಿರ್ಮಾಣ ಮಾಡುವುದಕ್ಕೆ ಜಾತಿಗಣತಿ ಅನಿವಾರ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಲವಾಗಿ ಪ್ರತಿಪಾದಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಾತಿಗಣತಿ ಸಮಾಜವನ್ನು ಎಂದಿಗೂ ವಿಭಜಿಸುವುದಿಲ್ಲ. ಸಮಾಜವನ್ನು ವಿಭಜಿಸುತ್ತದೆ ಎಂದು ಪ್ರಧಾನಿ ನೀಡಿರುವ ಹೇಳಿಕೆ ಖಂಡನೀಯ. ಬಡತನ ನಿವಾರಣೆ ಕಾರ್ಯಕ್ರಮ ರೂಪಿಸಿ, ಆ ಮೂಲಕ ಸಮ ಸಮಾಜ ನಿರ್ಮಾಣ ಮಾಡಬೇಕು. ಸ್ವಾತಂತ್ರ್ಯ ಬಂದು 76 ವರ್ಷಗಳಾದರೂ ಯಾವ ಜಾತಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಯಾವ ಸ್ಥಿತಿಗತಿಯಲ್ಲಿದೆ ಎಂದು ತಿಳಿಯಬೇಕು. ನಮ್ಮದು ಜಾತಿ ವ್ಯವಸ್ಥೆಯ ಸಮಾಜವಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಸಮಾನತೆ ಇರುವ ಜಾತಿಗಳನ್ನು ಮುಖ್ಯವಾಹಿನಿಗೆ ತರಲು ಅಂಕಿ ಅಂಶಗಳು ಅಗತ್ಯ. ಅದಕ್ಕಾಗಿ ಜಾತಿಗಣತಿ ಮಾಡಬೇಕು. ಸಾಮಾಜಿಕ– ಆರ್ಥಿಕ ಹಾಗೂ ಜಾತಿ ಸಮೀಕ್ಷೆ ಆಗ ಬೇಕು ಎಂದು ಅಭಿಪ್ರಾಯಪಟ್ಟರು.

ನವೆಂಬರ್‌ನಲ್ಲಿ ಸಮೀಕ್ಷಾ ವರದಿ ಸಲ್ಲಿಕೆ: ಈ ಹಿಂದೆ ನಾನು ಸಿಎಂ ಆಗಿದ್ದಾಗ ಜಾತಿ ಜನಗಣತಿ ಸಮೀಕ್ಷೆಗೆ ಕ್ರಮ ಕೈಗೊಂಡಿದ್ದೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಗಣತಿಯ ವರದಿ ಸಿದ್ಧಪಡಿಸಿದ್ದರು. ಅಷ್ಟರಲ್ಲಿ ನಮ್ಮ ಸರ್ಕಾರದ ಅವಧಿ ಮುಗಿಯಿತು. ನಂತರ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ವರದಿ ಸ್ವೀಕರಿಸಲಿಲ್ಲ. ಈಗ ಆಯೋಗಕ್ಕೆ ಬೇರೆ ಅಧ್ಯಕ್ಷರಿದ್ದು, ಅವರಿಗೆ ಕಾಂತರಾಜು ನೀಡಿದ್ದ ವರದಿಯನ್ನು ಯಥಾಸ್ಥಿತಿಯಲ್ಲೇ ಸಲ್ಲಿಸುವಂತೆ ಸೂಚಿಸಿದ್ದೇನೆ. ನವೆಂಬರ್‌ನಲ್ಲಿ ವರದಿ ನೀಡುವುದಾಗಿ ಹೇಳಿದ್ದಾರೆ ಎಂದರು.

ಹೊಸ ಮದ್ಯದಂಗಡಿಗೆ ಪರವಾನಗಿ ನೀಡಲ್ಲ: ಗ್ರಾಪಂ ● 9ನೇ ಪುಟಕ್ಕೆ

ಮಹಿಷ ದಸರಾ ಸರ್ಕಾರದ ಕಾರ್ಯಕ್ರಮವಲ್ಲ, ಜಿಲ್ಲಾಡಳಿತದಿಂದ ಸೂಕ್ತ ಕ್ರಮ

ಮೈಸೂರಲ್ಲಿ ದಲಿತಪರ ಸಂಘಟನೆಗಳು ನಡೆಸಲು ಉದ್ದೇಶಿಸಿರುವ ಮಹಿಷಾ ದಸರಾ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲ ಸಂಘಟನೆಗಳು ಮಹಿಷ ದಸರಾ ಆಚರಿಸುತ್ತಾ ಬಂದಿವೆ. ಮೊದಲು ಹೊರಗೆ ಆಚರಿಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಬೆಟ್ಟದ ಮೇಲೆ ಆಚರಿಸಲು ಮುಂದಾಗಿದ್ದಾರೆ. ಮಹಿಷ ದಸರಾ ಸರ್ಕಾರದ ಕಾರ್ಯಕ್ರಮವಲ್ಲ. ಅ.13ರಂದು ಚಾಮುಂಡಿಬೆಟ್ಟ ಚಲೋ ಹಾಗೂ ಮಹಿಷ ದಸರಾ ಆಚರಣೆಗೆ ಮುಂದಾಗಿರುವ ಕುರಿತು ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದರು.

ಮೈಸೂರಿನ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಲವಾದ ಪ್ರತಿಪಾದನೆ

ಕೃಷಿಯಲ್ಲಿ ಬೆಳವಣಿಗೆಯಾಗದೆ ಭಾರತದ ಅಭಿವೃದ್ಧಿ ಸಾಧ್ಯವಾಗದು

- ಬಸವಾದಿ ಶರಣರ ಬಗ್ಗೆ ನನಗೆ ಮೊದಲಿನಿಂದಲೂ ಅಪಾರ ಗೌರವವಿದೆ
- ನನ್ನ ಯೋಜನೆ ಸಾಕಾರಗೊಳ್ಳಲು ಬಸವ ತತ್ವಾದರ್ಶಗಳೇ ಕಾರಣ
- ವೈಚಾರಿಕ, ಚಲನಶೀಲ ಸಮಾಜ ರೂಪುಗೊಳ್ಳುವುದು ಅನಿವಾರ್ಯ
- ಗ್ಯಾರಂಟಿ ಯೋಜನೆಗಳು ಜಾತ್ಯಾತೀತ, ಧರ್ಮಾತೀತದ ಪ್ರತೀಕ



ಮೈಸೂರು, ಅ.7(ಬಿಎಲ್‌ಯು)– ಕೃಷಿ ಕ್ಷೇತ್ರ ಬೆಳವಣಿಗೆಯಾಗದಿದ್ದರೆ ಭಾರತದ ಅಭಿವೃದ್ಧಿ ಸಾಧ್ಯವಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಅಭಿವೃದ್ಧಿಯಲ್ಲಿ ಕೃಷಿ ಕ್ಷೇತ್ರದ ಪಾಲು ಹೆಚ್ಚಾಗಿದೆ. ಶೇಕಡ 60ರಷ್ಟು ಪ್ರಗತಿ ಕೃಷಿ ಮೇಲೆ ಅವಲಂಬಿತವಾಗಿದೆ. ಹೀಗಿರುವಾಗ ರೈತರು ಉದ್ಧಾರವಾಗದೆ, ಕೃಷಿ ಕ್ಷೇತ್ರ ಬೆಳವಣಿಗೆ ಆಗದಿದ್ದರೆ ದೇಶದ ಅಭಿವೃದ್ಧಿ ಸಾಧ್ಯವೇ ಆಗದು ಎಂದರು. ಒಟ್ಟಾರೆ ಜಿಡಿಪಿಯಲ್ಲಿ ಕೃಷಿ ಕ್ಷೇತ್ರದ ಪಾಲು ಹೆಚ್ಚಿದೆ. ಕೃಷಿ ಕ್ಷೇತ್ರದ ಕೊಡುಗೆ ಕಡಿಮೆಯಾದರೆ ದೇಶದ ಜಿಡಿಪಿ ಕೂಡ ಕಡಿಮೆಯಾಗುತ್ತದೆ. ಆದ್ದರಿಂದ ಕೃಷಿ ಕ್ಷೇತ್ರ ಬೆಳವಣಿಗೆ ಸಾಧಿಸುವ ಮೂಲಕ ರೈತ ಬಾಂಧವರು ಉದ್ಧಾರವಾಗಬೇಕು. ಈ ಮೂಲಕ ಭಾರತ ಅಭಿವೃದ್ಧಿ ಪಥದಲ್ಲಿ ಸಾಗಬೇಕು ಎಂದು ತಿಳಿಸಿದರು.

ಬಸವ ಮಾರ್ಗದಲ್ಲಿ ನಡೆಯುವ ಪ್ರಯತ್ನ: ಇದೇ ವೇಳೆ 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ಸಾಮಾಜಿಕ ಕ್ರಾಂತಿ ವಿಚಾರವನ್ನು ಸಂದರ್ಭೋಚಿತವಾಗಿ ಸಿದ್ದರಾಮಯ್ಯ ಎಳೆ ಎಳೆಯಾಗಿ ಬಿಡಿಸಿಟ್ಟರು. ಜೊತೆಗೆ ಈಗಲೂ ಇರುವ ಅಸಮಾನತೆಯನ್ನು ಪ್ರಸ್ತಾಪಿಸಿದರು. ಬಸವಾದಿ ಶರಣರ ತತ್ವಾದರ್ಶ ಹಾಗೂ ● 9ನೇ ಪುಟಕ್ಕೆ

ಇಂದು ಭಾರತ– ಆಸ್ಟ್ರೇಲಿಯಾ ಪಂದ್ಯ



ಅ.8, ಸಮಯ: ಮಧ್ಯಾಹ್ನ 2 ಗಂಟೆಗೆ ಆರಂಭ
ಸ್ಥಳ: ಎಂ.ಎ.ಚಿದಂಬರಂ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ, ಚೆನ್ನೈ

ಇಸ್ರೇಲ್ ಮೇಲೆ ಹಮಾಸ್ ಉಗ್ರರ ಹಠಾತ್ ದಾಳಿ; 200ಕ್ಕೂ ಅಧಿಕ ಸೇನಾ ಸಿಬ್ಬಂದಿ, ನಾಗರಿಕರ ಹತ್ಯೆ

ಹಮಾಸ್ ಮೇಲೆ ಯುದ್ಧ ಸಾರಿದ ಇಸ್ರೇಲ್

200ಕ್ಕೂ ಅಧಿಕ ಉಗ್ರರು ಬಲಿ

ಹಲವು ಗ್ರಾಮಗಳು ಉಗ್ರರ ವಶದಲ್ಲಿ; ಸಾವಿರಾರು ಮಂದಿ ಒತ್ತೆಯಾಳು



ಜೆರುಸಲೇಂ: ಪ್ಯಾಲೆಸ್ಟೈನ್ ಮೂಲದ ಹಮಾಸ್ ಉಗ್ರರು ಶನಿವಾರ ಬೆಳಗ್ಗೆ ಇಸ್ರೇಲ್ ಮೇಲೆ ಭಯಾನಕ ದಾಳಿ ನಡೆಸಿದ್ದು, ಇಸ್ರೇಲ್ ಸೈನಿಕರು ಸೇರಿ ಕನಿಷ್ಠ ಪಕ್ಷ 200ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ. ಸಾವಿರಾರು ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾದ ಪ್ಯಾಲೆಸ್ಟೈನ್ ಆರೋಗ್ಯ ಸಚಿವಾಲಯ ಹೇಳಿದೆ ಎಂದು ಎಎಫ್‌ಪಿ ಸುದ್ದಿ ಸಂಸ್ಥೆ ವರದಿ ಮಾಡಿದೆ. ಉಗ್ರರ ದಾಳಿಗೆ ಇಸ್ರೇಲ್ ಸೈನಿಕರು ಪ್ರತಿ ದಾಳಿ ನಡೆಸಿದ್ದು, ಈ ದಾಳಿಯಲ್ಲಿ 200ಕ್ಕೂ ಹೆಚ್ಚು ಉಗ್ರರು ಬಲಿಯಾಗಿದ್ದಾರೆ ಎಂದು ತಿಳಿದುಬಂದಿದೆ.

ಇಂದು ಬೆಳಗ್ಗೆ ಪ್ಯಾಲೆಸ್ಟೈನ್‌ನ ಗಾಜಾ ಪಟ್ಟಿಯಿಂದ ಗ್ಲೈಡರ್‌ಗಳ ಮೂಲಕ ಅತ್ಯಾಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಹಮಾಸ್ ಉಗ್ರರು ಇಸ್ರೇಲ್‌ನ ಗಡಿ ಗ್ರಾಮಗಳಿಗೆ ನುಸುಳಿದರೆ, ದೋಣಿ ಮೂಲಕ ಜಲ ಮಾರ್ಗ ಹಾಗೂ ಜೀಪ್‌ಗಳು, ದ್ವಿಚಕ್ರ ವಾಹನಗಳಲ್ಲೂ ರಸ್ತೆ ಮೂಲಕ ಲಗ್ಗೆ ಇಟ್ಟ ಉಗ್ರರು ಕೇವಲ 20 ನಿಮಿಷದಲ್ಲಿ ಸುಮಾರು 5 ಸಾವಿರ ರಾಕೆಟ್‌ಗಳನ್ನು ಹಾರಿಸುವ ಮೂಲಕ ಭಯಾನಕ ದಾಳಿ ನಡೆಸಿದ್ದಲ್ಲದೇ ಇಸ್ರೇಲ್‌ನ ಕೆಲವು ಗ್ರಾಮಗಳಿಗೆ ದಾಳಿ ನಡೆಸಿದ್ದಾರೆ. ದಾಳಿ ವೇಳೆ ಇಸ್ರೇಲ್ ಸೈನಿಕರು ಹಾಗೂ ನಾಗರಿಕರು ಭಾರಿ ಸಂಖ್ಯೆಯಲ್ಲಿ ಸಾವಿಗೀಡಾಗಿದ್ದಾರೆ. ಹಲವಾರು ಸೈನಿಕರು ಹಾಗೂ ನಾಗರಿಕರನ್ನು ಒತ್ತೆ ಇರಿಸಿಕೊಂಡಿರುವ ಉಗ್ರರು ಅವರನ್ನು ಗುರಾಣಿಗಳಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ತಿಳಿದು ಬಂದಿದೆ. ಮಹಿಳಾ ಸೇನಾಧಿಕಾರಿಯನ್ನು ಹತ್ಯೆ ಮಾಡಿದ ಬಳಿಕ ಶವವನ್ನು ವಿವಸ್ತ್ರಗೊಳಿಸಿ ಕೇಕೆ ಹಾಕುತ್ತಾ ಮೆರವಣಿಗೆ ಮಾಡುವ ಮೂಲಕ ಉಗ್ರರು ಅಟ್ಟಹಾಸ ಮೆರೆದಿದ್ದಾರೆ. ● 6ನೇ ಪುಟಕ್ಕೆ

ಆನೇಕಲ್ ಬಳಿ ಪಟಾಕಿ ಗೋಡೌನ್‌ಗೆ ಬೆಂಕಿ:

13ಕ್ಕೂ ಅಧಿಕ ಮಂದಿ ಸಜೀವ ದಹನ



ಆನೇಕಲ್, ಅ. 7– ತಮಿಳುನಾಡಿನಿಂದ ಬಂದ ಪಟಾಕಿಯನ್ನು ಲಾರಿಯಿಂದ ಇಳಿಸುವ ವೇಳೆ ಗೋಡೌನ್‌ಗೆ ಬೆಂಕಿ ಹೊತ್ತಿಕೊಂಡಿದ್ದು, 13ಕ್ಕೂ ಅಧಿಕ ಮಂದಿ ಸಜೀವ ದಹನವಾದ ಘಟನೆ ಆನೇಕಲ್ ತಾಲೂಕು ಅತ್ತಿಬೆಲೆಯಲ್ಲಿ ಶನಿವಾರ ಸಂಜೆ ಸಂಭವಿಸಿದೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಗೋಡೌನ್‌ನಲ್ಲಿ ಸುಮಾರು ಐದು ಕೋಟಿ ರೂ. ಮೌಲ್ಯದ ಪಟಾಕಿಗಳ ಸಂಗ್ರಹ ಇತ್ತು ಎನ್ನಲಾಗಿದ್ದು, ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ದುರಂತ ಸಂಭವಿಸಿದಾಗ ಗೋಡೌನ್‌ನಲ್ಲಿ 30ರಿಂದ 40 ಮಂದಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಹಿಂಬಾಗಿಲಿನಿಂದ ಹೊರಬಂದಿದ್ದರಿಂದ ನಾಲ್ವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಕ್ಷಣಾ ತಂಡ 13 ಶವಗಳನ್ನು ಪತ್ತೆಹಚ್ಚಿದ್ದು ಇನ್ನುಳಿದವರ ಸ್ಥಿತಿ ಗೊತ್ತಾಗಿಲ್ಲ.

ಗೋಡೌನ್‌ನಲ್ಲಿದ್ದ ಅಪಾರ ಪ್ರಮಾಣದ ಪಟಾಕಿ, ಒಂದು ಲಾರಿ, ಒಂದು ಸರಕು ಸಾಗಣೆ ವಾಹನ ಮತ್ತು ನಾಲ್ಕು ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿವೆ. ಬೆಂಕಿಯ ಜ್ವಾಲೆ ಹಾಗೂ ದಟ್ಟ ಹೊಗೆ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದ್ದು, ಸುತ್ತಲೂ ದಟ್ಟವಾದ ಬೆಂಕಿ ಮತ್ತು ಹೊಗೆ ಆವರಿಸಿದೆ. ಘಟನಾ ಸ್ಥಳಕ್ಕೆ 10ಕ್ಕೂ ಹೆಚ್ಚು ಅಗ್ನಿಶಾಮಕ ದಳ ವಾಹನಗಳು ಆಗಮಿಸಿದ್ದು, ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಡುತ್ತಿದ್ದಾರೆ. ಗೋಡೌನ್‌ನಿಂದ ಹೊರತರಲ್ಪಟ್ಟ, ಸುಟ್ಟು ಕರಕಲಾಗಿರುವ ಶವಗಳನ್ನು ಆಂಬುಲೆನ್ಸ್‌ಗಳ ಮೂಲಕ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲ್ಪಡುತ್ತಿದೆ. ದುರಂತದಲ್ಲಿ ಗಾಯಗೊಂಡಿರುವವರನ್ನು ರಕ್ಷಣಾ ತಂಡ ಗೋಡೌನ್‌ನಿಂದ ಹೊರತಂದರೆ ತುರ್ತು ಚಿಕಿತ್ಸೆ ನೀಡಲು ವೈದ್ಯರ ತಂಡವೊಂದನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ.

ದುರಂತದಿಂದಾಗಿ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಭಾರಿ ಸಂಖ್ಯೆಯ ಜನ ಜಮಾಯಿಸಿರುವುದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಬೆಂಗಳೂರಿನಿಂದ ತಮಿಳುನಾಡಿನ ಹೊಸೂರಿನತ್ತ ತೆರಳುತ್ತಿದ್ದ ವಾಹನಗಳು ಗಂಟೆಗಟ್ಟಲೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾದು ನಿಲ್ಲಬೇಕಾಯಿತು. ಅತ್ತಿಬೆಲೆಯಿಂದ ಸುಮಾರು 2 ಕಿ.ಮೀ.ಗೂ ಹೆಚ್ಚು ದೂರ ವಾಹನಗಳ ಸಾಲುಗಳು ಕಂಡುಬಂದವು. ಸ್ಥಳದಲ್ಲಿ ಜಮಾಯಿಸಿರುವ ಜನರನ್ನು ಚದುರಿಸಲು ಪೊಲೀಸರು ಪರದಾಡುತ್ತಿದ್ದದ್ದು ಕಂಡುಬಂತು. ಘಟನಾ ಸ್ಥಳಕ್ಕೆ ಅಗ್ನಿಶಾಮಕ ವಿಭಾಗದ ಡಿಜಿಪಿ ಕಮಲ್ ಪಂಥ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್ಪಿ, ಆನೇಕಲ್ ತಾಲೂಕು ತಹಸೀಲ್ದಾರರು ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿದ್ದಾರೆ. ● 6ನೇ ಪುಟಕ್ಕೆ

ಅಮೋಘ ನೃತ್ಯದ ಜೊತೆಗೆ ಭಾವೈಕ್ಯತೆ ಬಿಂಬಿಸಿದ 'ಯುವ ಸಂಭ್ರಮ' ಅಂಗಳ

ಬಯಲು ರಂಗಮಂದಿರದಲ್ಲಿ ಯುವ ಸಮೂಹದ ಹರ್ಷದ ಹೊನಲು





ಮೈಸೂರು, ಅ.7(ಎಂಕೆ)– ಸುಂದರ ಇಳಿಸಂಜೆ... ಹಸಿರಿನ ಮಡುವಿನಲ್ಲಿ... ಕನ್ನಡ ನಾಡು–ನುಡಿಯ ಹಿರಿಮೆ–ಗರಿಮೆಯನ್ನು ಅಮೋಘ ನೃತ್ಯ ವೈಭವದೊಂದಿಗೆ ಸಾರುವುದಲ್ಲದೆ ಜಾನಪದ ಪರಂಪರೆ, ಕಲೆ–ಸಾಹಿತ್ಯ, ರಾಷ್ಟ್ರೀಯ ಭಾವೈಕ್ಯತೆಯ ಜೊತೆಗೆ 'ಜೈ ಕಿಸಾನ್' ಘೋಷಣೆ ಮೊಳಗಿತು...!

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ದಸರಾ ಯುವ ಸಂಭ್ರಮ'ದ ವರ್ಣರಂಜಿತ ವೇದಿಕೆಯಲ್ಲಿ ಕನ್ನಡದ ಕಂಪನ್ನು ಪಸರಿಸಲಾಯಿತು. ಹೆಚ್.ಡಿ.ಕೋಟೆಯ ಸೆಂಟ್‌ಮೇರಿಸ್ ಪಿಯು ಕಾಲೇಜು ವಿದ್ಯಾರ್ಥಿಗಳು, ಮದ್ದೂರು ಭಾರತೀನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು, ಬಿಳಿಕೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಅತ್ಯಾಕರ್ಷಕ ನೃತ್ಯದೊಂದಿಗೆ ಕರುನಾಡಿನ ಗತವೈಭವವನ್ನು ಸಾರಿದರು.

ಹಾಗೆಯೇ ಗುಂಡ್ಲುಪೇಟೆ ಕಬ್ಬಹಳ್ಳಿಯ ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು, ಮೈಸೂರಿನ ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು, ಮಂಡ್ಯ ನಾಗಮಂಗಲದ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಡ್ಯ ಭಾರತೀನಗರದ ● 6ನೇ ಪುಟಕ್ಕೆ



ಕಾಂತಾರ ಕ್ಲೈಮ್ಯಾಕ್ಸ್...!



ಯುವ ಸಂಭ್ರಮ ವೇದಿಕೆಯಲ್ಲಿ ಅಪಾರ ಮೆಚ್ಚುಗೆ ಪಡೆದ 'ಕಾಂತಾರ' ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಾವಳಿ ವಿಶೇಷಿತರಿಂದ ಮನಮೋಹಕವಾಗಿ ಪ್ರಸ್ತುತವಾಯಿತು. ಮೈಸೂರಿನ ಕರುಣಾಮಯಿ ಫೌಂಡೇಶನ್ ವಿಶೇಷ ಮಕ್ಕಳ ತರಬೇತಿ ಶಾಲೆಯ ವಿಶೇಷಚೇತನ ಮಕ್ಕಳು, ವರ್ಣಮಯ ವೇಷಭೂಷಣ ಹಾಗೂ ಅಮೋಘ ನೃತ್ಯ ಪ್ರದರ್ಶನದ ಮೂಲಕ 'ಕಾಂತಾರ' ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಾವಳಿಯನ್ನು ಪ್ರಸ್ತುತ ಪಡಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರಲ್ಲದೆ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು. 'ವರಾಹ ರೂಪಂ' ಹಾಡಿನ ಜೊತೆ ಜೊತೆಗೆ ಶತ್ರು ಸಂಹಾರದ ದೃಶ್ಯಾವಳಿ ಮನಮೋಹಕವಾಗಿತ್ತು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 101.22 ಅಡಿ	ಇಂದಿನ ಮಟ್ಟ 2,276.51 ಅಡಿ	ಇಂದಿನ ಮಟ್ಟ 2,855.82 ಅಡಿ
ಹಿಂದಿನ ವರ್ಷದ ಮಟ್ಟ 123.56 ಅಡಿ	ಹಿಂದಿನ ವರ್ಷದ ಮಟ್ಟ 2,282.22 ಅಡಿ	ಹಿಂದಿನ ವರ್ಷದ ಮಟ್ಟ 2,854.08 ಅಡಿ
ನಿನ್ನೆಯ ಮಟ್ಟ 101.08 ಅಡಿ	ನಿನ್ನೆಯ ಮಟ್ಟ 2,276.42 ಅಡಿ	ನಿನ್ನೆಯ ಮಟ್ಟ 2,855.62 ಅಡಿ
ಇಂದಿನ ಒಳಹರಿವು 2,962 ಕ್ಯುಸೆಕ್	ಇಂದಿನ ಒಳಹರಿವು 1,655 ಕ್ಯುಸೆಕ್	ಇಂದಿನ ಒಳಹರಿವು 1,966 ಕ್ಯುಸೆಕ್
ಇಂದಿನ ಹೊರಹರಿವು 1,491 ಕ್ಯುಸೆಕ್	ಇಂದಿನ ಹೊರಹರಿವು 1,000 ಕ್ಯುಸೆಕ್	ಇಂದಿನ ಹೊರಹರಿವು 1,150 ಕ್ಯುಸೆಕ್

ಪ್ರಾದೇಶಿಕವಾರು ಉತ್ಪನ್ನಗಳ ಪ್ರದರ್ಶನ ಉದ್ದೇಶಿತ
'ಯೂನಿಟಿ ಮಾಲ್' ನಿರ್ಮಾಣ ಸಂಬಂಧ ಸಚಿವದ್ವಯರಿಂದ ಸ್ಥಳ ಪರಿಶೀಲನೆ



ಮೈಸೂರು, ಅ.7(ಎಸ್‌ಬಿಡಿ)– ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಸಿದ್ಧ ಉತ್ಪನ್ನಗಳ ಮಾರಾಟ ಹಾಗೂ ಪ್ರದರ್ಶನಕ್ಕಾಗಿ ಶಾಶ್ವತ 'ಯೂನಿಟಿ ಮಾಲ್' ನಿರ್ಮಾಣಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಶನಿವಾರ ಸ್ಥಳ ಪರಿಶೀಲಿಸಿದರು.

ಈ ವೇಳೆ ಯೂನಿಟಿ ಮಾಲ್ ನೀಲನಕ್ಷೆ ವೀಕ್ಷಿಸಿದ ಸಚಿವದ್ವಯರು, ಸುಮಾರು 6.5 ಎಕರೆ ಜಾಗದಲ್ಲಿ ವ್ಯವಸ್ಥಿತವಾಗಿ ಕಟ್ಟಡ ನಿರ್ಮಿಸುವ ರೂಪುರೇಷೆ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು. ರಾಜ್ಯದ ಉತ್ಪನ್ನಗಳಿಗೆ ಪ್ರಮುಖ ವಾಣಿಜ್ಯ ಕೇಂದ್ರವಾಗಲಿರುವ ಯೂನಿಟಿ ಮಾಲ್ ಅನ್ನು ತುಂಬಾ ಅಚ್ಚುಕಟ್ಟಾಗಿ ನಿರ್ಮಾಣ ಮಾಡಬೇಕು. ಇದು ಪಾರಂಪರಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದು, ಒಂದು ಜಿಲ್ಲೆ ಒಂದು ಉತ್ಪನ್ನ ಹಾಗೂ ಕರಕುಶಲ ವಸ್ತುಗಳ ಮಾರಾಟಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಬೇಕು ಎಂದು ಇದೇ ವೇಳೆ ಸೂಚನೆ ನೀಡಿದರು.

ಮೈಸೂರಿನ ಪ್ರವಾಸಿ ತಾಣಗಳ ಪಟ್ಟಿಗೆ ಯೂನಿಟಿ ಮಾಲ್ ಸೇರ್ಪಡೆಯಾಗಬೇಕು. ದೇಶ ಹಾಗೂ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುವಂತೆ ನಿರ್ಮಾಣ ಮಾಡಬೇಕು. ಅತ್ಯುತ್ತಮ ಗುಣಮಟ್ಟದ ಆಹಾರ ಮಾರಾಟ ಕೇಂದ್ರ, ಆಟೋಟ, ಮನರಂಜನಾ ಕೇಂದ್ರಗಳು, ಶಿಶುವಿಹಾರವನ್ನು ಒಳಗೊಂಡಿರಬೇಕು. ಒಮ್ಮೆ ಭೇಟಿ ನೀಡಿದವರು ಮತ್ತೆ ಮತ್ತೆ ಬರುವಂತೆ ಅತ್ಯಾಕರ್ಷಕವಾಗಿ ರೂಪುಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಜೇಶ್ ಜಿ.ಗೌಡ ಹಾಗೂ ಸಣ್ಣ ಕೈಗಾರಿಕೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.


ಅ.19ರಂದು ಶಿವರಾಜ್‌ಕುಮಾರ್ ಅಭಿನಯದ 'ಘೋಸ್ಟ್' ಬಿಡುಗಡೆ



ಮೈಸೂರು,ಅ.7(ಪಿಎಂ)– ಪ್ರತಿಷ್ಠಿತ ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ನಾಗರಾಜ್ ಅವರು ಅರ್ಪಿಸುವ, ಸಂದೇಶ್. ಎನ್ ನಿರ್ಮಾಣದ ಹಾಗೂ ಶ್ರೀನಿ ನಿರ್ದೇಶನದಲ್ಲಿ ಕರುನಾಡ ಚಕ್ರವರ್ತಿ ಶಿವರಾಜಕುಮಾರ್ ನಾಯಕರಾಗಿ ಅಭಿನಯಿಸಿರುವ ಬಹು ನಿರೀಕ್ಷಿತ 'ಘೋಸ್ಟ್' ಚಿತ್ರ ಅ.19ರಂದು ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

ಇದೇ ಮೊದಲ ಬಾರಿಗೆ ಕೆಜಿ ರಸ್ತೆಯ ಪ್ರಮುಖ ಚಿತ್ರಮಂದಿರದಲ್ಲಿ ಅ.18ರ ಮಧ್ಯರಾತ್ರಿ 12ಕ್ಕೆ ಭರ್ಜರಿ ಫ್ಯಾನ್ ಶೋ ಆಯೋಜಿಸಲಾಗಿದೆ. ಬಹು ನಿರೀಕ್ಷಿತ ಈ ಚಿತ್ರವನ್ನು ಅಭಿಮಾನಿಗಳು ಅದ್ದೂರಿಯಾಗಿ ಸ್ವಾಗತಿಸಲು ಅಣಿಯಾಗುತ್ತಿದ್ದಾರೆ. ಶಿವಣ್ಣ ಅಭಿನಯದ 'ಭಜರಂಗಿ' ಚಿತ್ರದ ಪ್ರದರ್ಶನ ಬೆಳಗ್ಗೆ 6ರಿಂದ ಆರಂಭವಾಗಿತ್ತು. ಆದರೆ 'ಘೋಸ್ಟ್' ಮಧ್ಯರಾತ್ರಿಯಿಂದಲೇ ಪ್ರದರ್ಶನ ಕಾಣುತ್ತಿರುವ ಮೊದಲ ಚಿತ್ರ.

ಶಿವಣ್ಣ ಅವರ ಹುಟ್ಟು ಹಬ್ಬಕ್ಕೆ 'ಬಿಗ್ ಡ್ಯಾಡಿ' ಟೀಸರ್ ಬಿಡುಗಡೆಯಾಗಿ, ಸಾಕಷ್ಟು ಜನಪ್ರಿಯವಾಗಿದೆ. 'ಘೋಸ್ಟ್' ಚಿತ್ರವನ್ನು ನೋಡಲು ಕೇವಲ ಭಾರತೀಯರಷ್ಟೇ ಅಲ್ಲದೇ ವಿದೇಶಿಗರು ಕಾತುರದಿಂದ ಕಾಯುತ್ತಿದ್ದಾರೆ. ಇತ್ತೀಚೆಗೆ ವಿದೇಶಿ ಅಭಿಮಾನಿಗಳು, ತಾವೂ ಈ ಚಿತ್ರದ ಬಿಡುಗಡೆಗೆ ಕಾತುರ ಹೊಂದಿರುವುದಾಗಿ ವಿಡಿಯೋ ಮೂಲಕ ಹೇಳಿಕೊಂಡಿದ್ದಾರೆ. ಶಿವರಾಜಕುಮಾರ್, ಅನುಪಮ್ ಖೇರ್, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್, ಶ್ರೀನಿ ಮುಂತಾದವರು 'ಘೋಸ್ಟ್' ಚಿತ್ರದ ತಾರಾ ಬಳಗದಲ್ಲಿದ್ದಾರೆ.




ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಿಂಡಿಕೇಟ್ ಸದಸ್ಯ ಕೆ.ಗೋಕುಲ್ ಗೋವರ್ಧನ್ ಅವರು ವಿವಿಯ ಕುಲಪತಿಗಳನ್ನು ಭೇಟಿ ಮಾಡಿ, ಅಭಿನಂದಿಸಿದರು. ಈ ವೇಳೆ ವಕೀಲರಾದ ಇಂದ್ರೇಶ್, ಸೋಮಣ್ಣ, ಗುರುರಾಜ್, ನವೀನ್ ಉಪಸ್ಥಿತರಿದ್ದರು

ಹೃದಯಾಘಾತದಿಂದ ಕಾರಲ್ಲೇ ಪ್ರಾಣಬಿಟ್ಟ ಆರ್‌ಎಸ್‌ಎಸ್ ಮುಖಂಡ

ಬಾಗಲಕೋಟೆ, ಅ.7– ಹೃದಯಾಘಾತದಿಂದ ಕಾರಲ್ಲೇ ಆರ್‌ಎಸ್‌ಎಸ್ ಮುಖಂಡ ಪ್ರಾಣಬಿಟ್ಟ ಘಟನೆ ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಲೋಕಾಪುರ ಪಟ್ಟಣದಲ್ಲಿ ನಿನ್ನೆ ರಾತ್ರಿ ನಡೆದಿದೆ. ಮೃತಪಟ್ಟ ಸಿದ್ದು ಚಿಕ್ಕದಾನಿ(45) ಆರ್‌ಎಸ್‌ಎಸ್ ಜಿಲ್ಲಾ ಮುಖಂಡರಾಗಿದ್ದರು. ರಾತ್ರಿ ಕಾರಿಗೆ ಡೀಸೆಲ್ ಹಾಕಿಸಿ, ಪೆಟ್ರೋಲ್ ಪಂಪ್‌ನಿಂದ ಹೊರಡಲು ಕಾರು ಸ್ಟಾರ್ಟ್ ಮಾಡಿದರು. ಆದರೆ ಪೆಟ್ರೋಲ್ ಪಂಪ್ ಆವರಣದಲ್ಲೇ ಹೃದಯಾಘಾತವಾಗಿದೆ. ಕಾರು ಬಾಗಿಲು ತೆರೆದು ನೋಡಿದಾಗ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಸಿದ್ದು ಚಿಕ್ಕದಾನಿ ಮುಧೋಳ ನಗರದ ನಿವಾಸಿಯಾಗಿದ್ದಾರೆ.

ಸೌದೆ ಡಿಪೋ ರಾಜಣ್ಣ ನಿಧನ



ಮೈಸೂರು,ಅ.7– ಮೂಲತಃ ಮೈಸೂರು ತಾಲೂಕು ಮಾವಿನಹಳ್ಳಿ ಗ್ರಾಮದ ಮೈಸೂರಿನ ಶ್ರೀರಾಂಪುರ ನಿವಾಸಿ ಸೌದೆ ಡಿಪೋ ರಾಜಣ್ಣ (54) ಹೃದಯಾಘಾತದಿಂದ ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅ.8ರಂದು ಮಾವಿನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮೂಲದ ಕೇನ್ಸ್ ಟೆಕ್ನಾಲಜಿಯಿಂದ ತೆಲಂಗಾಣದಲ್ಲೂ ಉದ್ದಿಮೆ ವಿಸ್ತರಣೆ

ಸೆಮಿಕಂಡಕ್ಟರ್ ಪ್ಲಾಂಟ್‌ಗೆ 2,800 ಕೋಟಿ ರೂ. ಹೂಡಿಕೆ; 200 ಮಂದಿಗೆ ನೇರ ಉದ್ಯೋಗ ಸೃಷ್ಟಿ



ತೆಲಂಗಾಣದ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್ ಅಂಡ್ ಇಂಡಸ್ಟ್ರೀಸ್ ಸಚಿವ ಕೆ.ಟಿ.ರಾಮರಾವ್ (ಬಲದಿಂದ ಐದನೆಯವರು), ಕೇನ್ಸ್ ಅಧ್ಯಕ್ಷೆ ಸವಿತಾ ರಮೇಶ್ ಹಾಗೂ ಇತರರು ಹೈದರಾಬಾದ್‌ನಲ್ಲಿ ಶುಕ್ರವಾರ ತೆಲಂಗಾಣದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಘಟಕ ಸ್ಥಾಪನೆ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದರು.

ಮೈಸೂರು, ಅ.7(ಆರ್‌ಕೆ)–ಮೈಸೂರು ಮೂಲದ ಕೇನ್ಸ್ ಟೆಕ್ನಾಲಜಿಯು ತನ್ನ ಉದ್ದಿಮೆಯನ್ನು ತೆಲಂಗಾಣ ರಾಜ್ಯದಲ್ಲೂ ವಿಸ್ತರಿಸಲು ಮುಂದಾಗಿದ್ದು, ಅಲ್ಲಿನ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ತೆಲಂಗಾಣ ರಾಜ್ಯದಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪಿಸಲು 2,800 ಕೋಟಿ ರೂ. ಹೂಡಿಕೆ ಮಾಡುವ ಸಂಬಂಧ ಒಪ್ಪಂದ ಮಾಡಿಕೊಂಡಿರುವ ಕಂಪನಿಯು, 200 ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲಿದೆ. ಅಲ್ಲಿ ಔಟ್ ಸೋರ್ಸ್ಡ್ ಸೆಮಿ ಕಂಡಕ್ಟರ್ ಅಸೆಂಬ್ಲಿ ಅಂಡ್ ಟೆಸ್ಟಿಂಗ್ ಅಂಡ್ ಕಾಂಪೌಂಡ್ ಸೆಮಿಕಂಡಕ್ಟರ್ ತಯಾರಿಸಲು ಆಸಕ್ತಿ ತೋರಿದೆ.

ಈ ಸಂಬಂಧ ತೆಲಂಗಾಣ ರಾಜ್ಯ ಸರ್ಕಾರದೊಂದಿಗೆ ಕೇನ್ಸ್ ಟೆಕ್ನಾಲಜಿಯು ಶುಕ್ರವಾರ ಒಡಂಬಡಿಕೆ (MOU)ಗೆ ಸಹಿ ಮಾಡಿದೆ. ಕೇನ್ಸ್ ಟೆಕ್ನಾಲಜೀಸ್ ಮ್ಯಾನೇಜಿಂಗ್ ಡೈರೆಕ್ಟರ್ ರಮೇಶ್ ಕುನ್ನಿಕಣ್ಣನ್ ಮತ್ತು ಅಧ್ಯಕ್ಷೆ ಸವಿತಾ ರಮೇಶ್ ಅವರು ತೆಲಂಗಾಣದ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್ ಅಂಡ್ ಇಂಡಸ್ಟ್ರೀಸ್ ಸಚಿವ ಕೆ.ಟಿ.ರಾಮರಾವ್ ಅವರನ್ನು ಭೇಟಿ ಮಾಡಿದ ಸಂದರ್ಭ ಉದ್ದಿಮೆ ಸ್ಥಾಪನೆ ಕುರಿತು ಅಧಿಕೃತವಾಗಿ ಘೋಷಿಸಿದರು.

2023ರ ಆಗಸ್ಟ್ ಮಾಹೆಯಲ್ಲಿ ಕೇನ್ಸ್ ಟೆಕ್ನಾಲಜಿಯು ಒಎಸ್‌ಎಟಿ ಮತ್ತು ಪಿಸಿಬಿ ಯೂನಿಟ್‌ಗಳನ್ನು ನಂಜನಗೂಡು ಸಮೀಪದ ಕೋಚನಹಳ್ಳಿ ಬಳಿ 3,750 ಕೋಟಿ ರೂ. ಹೂಡಿಕೆ ಮಾಡಿ ಸ್ಥಾಪಿಸಲು ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ಬೆನ್ನಲ್ಲೇ ಇದೀಗ ತೆಲಂಗಾಣದಲ್ಲೂ ತನ್ನ ಉದ್ದಿಮೆ ವಿಸ್ತರಿಸಲು ಆಸಕ್ತಿ ತೋರಿದೆ.

ಶುಕ್ರವಾರದ ಸಭೆಯಲ್ಲಿ ತೆಲಂಗಾಣ ಕೈಗಾರಿಕೆಗಳು ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಜಯೇಶ್ ರಂಜನ್, ಟಿಎಸ್‌ಐಐಸಿ ಮ್ಯಾನೇಜಿಂಗ್ ಡೈರೆಕ್ಟರ್ ನರಸಿಂಹರೆಡ್ಡಿ, ಎಲೆಕ್ಟ್ರಾನಿಕ್ಸ್ ಡೈರೆಕ್ಟರ್ ಸುಜಯ್ ಕರಂಪುರಿ, ಕೇನ್ಸ್ ಸೆಮಿಕಾನ್ ಸಿಇಓ ರಘು ಫಣಿಕರ್ ಅವರು ಪಾಲ್ಗೊಂಡಿದ್ದರು.

ಸ್ಥಳಾಂತರವಲ್ಲ, ವಿಸ್ತರಣೆ: ಕೇನ್ಸ್ ಟೆಕ್ನಾಲಜಿಯು ಕರ್ನಾಟಕದಿಂದ ತೆಲಂಗಾಣಕ್ಕೆ ಸೆಮಿಕಂಡಕ್ಟರ್ ಘಟಕವನ್ನು ಸ್ಥಳಾಂತರಿಸಲಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಹರಿದಾಡುತ್ತಿರುವುದಕ್ಕೆ ಸ್ಪಷ್ಟೀಕರಣ ನೀಡಿರುವ ಕಂಪನಿಯ ಮಾರುಕಟ್ಟೆ ಮುಖ್ಯಸ್ಥ ಕರ್ನಲ್ ಶರತ್ ಭಟ್, ಈ ರೀತಿಯ ವರದಿಯನ್ನು ತಳ್ಳಿ ಹಾಕಿದ್ದಾರೆ. ಸೆಮಿಕಂಡಕ್ಟರ್ ಉದ್ದಿಮೆಯಲ್ಲಿ ಹಲವಾರು ಅಂಶಗಳಿವೆ. ತಯಾರಿಕಾ ಘಟಕಗಳನ್ನು ಬೇರೆ ಬೇರೆ ಕಡೆಯೂ ಸ್ಥಾಪಿಸಲು ಅವಕಾಶವಿದೆಯಾದ್ದರಿಂದ ಕೇನ್ಸ್ ಟೆಕ್ನಾಲಜಿ ಘಟಕವನ್ನು ಬೇರೆಡೆಗೆ ಸ್ಥಳಾಂತರಿಸುವುದಿಲ್ಲ. ಅದು ಕರ್ನಾಟಕದಲ್ಲೇ ಇರುತ್ತದೆ. ಅದರ ಉದ್ದಿಮೆಯನ್ನು ಬೇರೆಡೆಯೂ ವಿಸ್ತರಿಸಲಾಗುತ್ತಿದೆಯಷ್ಟೇ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ದಸರಾ ಪ್ರಾಯೋಜಕತ್ವ ಪಡೆಯಲು ನೋಡಲ್ ಅಧಿಕಾರಿಗಳ ನೇಮಕ

ಮೈಸೂರು, ಅ.7(ಆರ್‌ಕೆ)–2023ರ ದಸರಾ ಮಹೋತ್ಸವ ಆಚರಣೆಗೆ ಪ್ರಾಯೋಜಕತ್ವ ಪಡೆಯುವ ಸಂಬಂಧ ಐವರು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಈ ಸಂಬಂಧ ಇಂದು ಜಿಲ್ಲಾಧಿಕಾರಿಗಳು ಅಧಿಕೃತ ಜ್ಞಾಪನ ಹೊರಡಿಸಿದ್ದು, ಅಬಕಾರಿ ಉಪ ಆಯುಕ್ತ ರವಿಶಂಕರ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ದಿನೇಶ್, ಮುಡಾ ನಗರ ಯೋಜಕ ಸದಸ್ಯ ಶೇಷ, ಚೆಸ್ಕಾಂ ಸೂಪರಿಂಟೆಂಡಿಂಗ್ ಇಂಜಿನಿಯರ್ ಸುನಿಲ್ ಹಾಗೂ ಸಮಾಲೋಚಕ ಸ್ವರೂಪ್ ಅವರನ್ನು ದಸರಾ ಪ್ರಾಯೋಜಕತ್ವ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಕ್ಟೋಬರ್ 15ರಿಂದ 24ರವರೆಗೆ ನಡೆಯಲಿರುವ ನವರಾತ್ರಿ ಉತ್ಸವಕ್ಕೆ ಖಾಸಗಿ ಸಂಸ್ಥೆಗಳು, ಕೈಗಾರಿಕೋದ್ಯಮಿಗಳಿಂದ ಪ್ರಾಯೋಜಕತ್ವ ನಿರೀಕ್ಷಿಸಲಾಗಿದ್ದು, ಅವರಿಂದ ವಿವಿಧ ಕಾರ್ಯಕ್ರಮಗಳಿಗೆ ಪಡೆಯುವ ಪ್ರಾಯೋಜಕತ್ವದ ಮೊಬಲಗನ್ನು ಜಿಲ್ಲಾಧಿಕಾರಿ ಹಾಗೂ ದಸರಾ ವಿಶೇಷಾಧಿಕಾರಿಗಳ ಕೆನರಾ ಬ್ಯಾಂಕ್‌ನ ಇಟ್ಟಿಗೆಗೂಡು ಶಾಖಾ ಉಳಿತಾಯ ಖಾತೆಗೆ ಜಮಾ ಮಾಡಿಸಬೇಕೆಂದು ಡಾ. ರಾಜೇಂದ್ರ ಆದೇಶದಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.10.2023 ಭಾನುವಾರ, ಮಳೆ ನಕ್ಷತ್ರ: ಹಸ್ತ, 28.09.2023 ರಿಂದ 10.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ– ಸೈಬರ್ ಮಿತ್ರ –ಸೈಬರ್ ಸುರಕ್ಷೆವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಬಿ.ವಿ.ವಸಂತಕುಮಾರ್, 9.05 ವನ್ಯ ಜೀವಿ ಸಪ್ತಾಹದ ಅಂಗವಾಗಿ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯರಾದ ಮಲ್ಲೇಶಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು ಜಿ. ಶಾಂತಕುಮಾರ್, 9.40 ನಮ್ಮ ಆರೋಗ್ಯ–ಸುಗಮ ಸಂಧ್ಯಾ–ಋತುಬಂಧದ ಆಸುಪಾಸಿನ ವಿಚಾರಗಳು ಕುರಿತು ಡಾ. ಶಿಲ್ಪಾ ಎನ್. ವಿಜಯ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ ಕತೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ–ವಾಜಮಂಗಲದ ರೋಟರಿ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ : 12.30 ದೇವರನಾಮ–ಸಿ.ಎಸ್. ಲಕ್ಷ್ಮಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಶೈಲಜಾ ಚಂದ್ರಶೇಖರ್, 3.45 ಯಕ್ಷಗಾನ ತಾಳ ಮದ್ದಳೆ, ಪ್ರಸಂಗ– ಭಕ್ತ ಚಂದ್ರಹಾಸ, ಪ್ರಸ್ತುತಿ–ಸುರತ್ಕಲ್ ತಂಡಂಬೈಲಿನ ವಿನಾಯಕ ಯಕ್ಷಗಾನ ಮಂಡಳಿಯ ಸದಸ್ಯರು, 6.50 ಕೃಷಿರಂಗ–ಪಶುರಂಗ, 8.00 ವಿಶಿಷ್ಟವ್ಯಕ್ತಿ –ವಿಶೇಷ ಯತ್ನ–ಬಾನುಲಿ ಸರಣಿ–ಸಸ್ಯಾಹಾರ್ದ ಪ್ರತಿಪಾದಕ, ಉದ್ಯಮಿ ವಿಶ್ವ ಪ್ರಸಾದ್ ಆಳ್ವ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ವಿ. ಸತ್ಯನಾರಾಯಣ– ನಾದಸ್ವರಂ

■ **ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ :** ಬಸವ ಜಯಂತಿ–2023, ಬೆಳಗ್ಗೆ 9ಕ್ಕೆ ಸಮೂಹ ವಚನಗಾಯನ, ಬೆಳಗ್ಗೆ 10ಕ್ಕೆ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಆಹ್ವಾನಿತರು : ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉದ್ಘಾಟನೆ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಅಧ್ಯಕ್ಷತೆ : ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ವಿ. ಸುಮಂಗಲ, ಮುಖ್ಯ ಅತಿಥಿಗಳು : ಸಂಸದೆ ಶ್ರೀಮತಿ ಸುಮಲತಾ ಅಂಬರೀಶ್, ಮಧ್ಯಾಹ್ನ 12ಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಮೈಸೂರು ಜಿಲ್ಲಾ ಘಟಕದಿಂದ ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮಹಾಸಭಾ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಉದ್ಘಾಟನೆ : ಮಹಾಸಭಾ ಹಿರಿಯ ಉಪಾಧ್ಯಕ್ಷ ಬಿ.ಎಸ್. ಸಚ್ಚಿದಾನಂದಮೂರ್ತಿ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಮಹಾಸಭಾ ಅಧ್ಯಕ್ಷ ಎಸ್. ಶಿವಮೂರ್ತಿ ಕಾನ್ಯ, ಕೋಶಾಧ್ಯಕ್ಷ ವರುಣಾ ಮಹೇಶ್, ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಟಿ.ಎಸ್. ಲೋಕೇಶ್, ಹೆಚ್.ವಿ. ಬಸವರಾಜು ಹಿನಕಲ್, ಹೆಚ್.ಎಸ್. ಸೋಮಶೇಖರ್, ಸಿ. ಗುರುಸ್ವಾಮಿ, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಮ್ಮುಖ : ಶ್ರೀ ಸಿದ್ಧಲಿಂಗ ಸ್ವಾಮೀಜಿ, ಶ್ರೀ ಮಹಾಂತ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಮಾರೋಪ ಭಾಷಣ : ಮಾಜಿ ಸಚಿವ ವಿ. ಸೋಮಣ್ಣ, ಕರ್ನಾಟಕ ಶರಣ ಕಥಾಮೃತ ಕೃತಿ ಬಿಡುಗಡೆ : ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಚಲನಚಿತ್ರ ನಟ ಡಾಲಿ ಧನಂಜಯ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಅಪರ ಜಿಲ್ಲಾಧಿಕಾರಿ ಪಿ. ಶಿವರಾಜ್, ಸಂಜೆ 6 ರಿಂದ ಡಾ. ಕೃಪಾಪಡ್ಕೆ ಮತ್ತು ತಂಡದವರಿಂದ ವಚನ ವೈಭವ ನೃತ್ಯ ರೂಪಕ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯಿಡ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ರಾಜ್ಯ ದಸರಾ ಸಿ.ಎಂ. ಕಪ್ ಕ್ರೀಡಾಕೂಟ, ಮೈಸೂರು ವಿಭಾಗದ ಚೆಸ್ ಆಯ್ಕೆ ಪ್ರಕ್ರಿಯೆ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 9ಕ್ಕೆ.

■ **ಓಂಕಾರ್ ಪಬ್ಲಿಷರ್ಸ್, ಬೆಂಗಳೂರು :** ಉಮಾ ರಾವ್ ಮತ್ತು ಕೆ.ಎಸ್. ರಾಮ್ ಅವರ ಸರ್ವಜ್ಞ ವಚನಗಳು ಪುಸ್ತಕ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಪ್ರೊ. ಪ್ರಧಾನ್ ಗುರುದತ್ತ, ಡಾ. ಸಿ.ಎನ್. ಶ್ರೀನಾಥ್, ಭಾಷಣಕಾರರು : ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಪ್ರೊ. ಚಂದ್ರಶೇಖರಯ್ಯ, ಅಧ್ಯಕ್ಷತೆ : ಎಸ್‌ಡಿಎಂ–ಐಎಂಡಿ ನಿರ್ದೇಶಕ ಡಾ. ಎಸ್.ಎನ್. ಪ್ರಸಾದ್, ಸ್ಥಳ: ಎಸ್‌ಡಿಎಂ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್, ಚಾಮುಂಡಿಬೆಟ್ಟದ ರಸ್ತೆ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ರಿಫಾ ತಸ್ಕೀನ್ :** ವಿಶ್ವ ದಾಖಲೆಯ ಸಂಭ್ರಮ ಕಾರ್ಯಕ್ರಮ, ಸ್ಥಳ: ಹಳೇ ಕೆಸರೆ ಹುಡ ಪಬ್ಲಿಕ್ ಶಾಲೆ, ಬೆಳಗ್ಗೆ 10ಕ್ಕೆ.

■ **ಆದರ್ಶ ಸೇವಾ ಸಂಘ, ವಿಶ್ವ ವಿಪ್ರತ್ರಯೀ ಪರಿಷತ್, ಬೆಂಗಳೂರು :** ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎನ್. ಕುಮಾರ್, ಅತಿಥಿಗಳು : ಮಾಜಿ ಸಚಿವ ಆರ್.ವಿ. ದೇಶಪಾಂಡೆ, ಸಂಸದ ಪ್ರತಾಪ್ ಸಿಂಹ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ವಿಧಾನಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಸ್.ಎ.ರಾಮದಾಸ್, ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್. ರಘುನಾಥ್, ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದಮೂರ್ತಿ, ಅಧ್ಯಕ್ಷತೆ : ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್. ನಾಗರಾಜ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಅಂಕಾಳ ಪರಮೇಶ್ವರಿ ನೌಕರರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಈಜುಕೊಳ ರಸ್ತೆಯ 24 ಮನೆ ತೆಲುಗು ಶೆಟ್ಟರ ವಿದ್ಯಾರ್ಥಿ ನಿಲಯ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ, ಸಂಜನಾ ಬಳಗ ಪ್ರತಿಷ್ಠಾನ :** ಶಿಕ್ಷಕರ, ವೈದ್ಯರ, ಅಭಿಯಂತರರ ದಿನಾಚರಣೆ ಮತ್ತು ಸಂಜನಾ ಸ್ಮಾರಕ 15ನೇ ವರ್ಷದ ಸ್ಮರಣಾರ್ಥ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶೇ. 90ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನಗದು ಪ್ರೋತ್ಸಾಹ ಧನ ವಿತರಣೆ, ಉದ್ಘಾಟನೆ : ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಶೇಷ ಆಹ್ವಾನಿತರು : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಹೆಚ್.ಕೆ. ಪಾಂಡು, ಲಯನ್ ಡಾ. ನಾಗರಾಜ ವಿ. ಬೈರಿ, ಶ್ರೀ ವಿಜಯ ವಿಠ್ಠಲ ವಿದ್ಯಾಶಾಲೆ ಕಾರ್ಯದರ್ಶಿ ವಾಸುದೇವಭಟ್, ಆರಕ್ಷಕ ನಿರೀಕ್ಷಕ ರವೀಂದ್ರ, ಕೆ.ವಿ. ನಾಗರಾಜು, ಸಂಜನಾ ಬಳಗ ಪ್ರತಿಷ್ಠಾನ ಅಧ್ಯಕ್ಷ ಎನ್. ಚಂದ್ರಪ್ಪ, ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ ಅಧ್ಯಕ್ಷ ಲಯನ್ ಎ.ಸಿ. ರವಿ, ಸ್ಥಳ: ಶ್ರೀ ವಿಜಯ ವಿಠ್ಠಲ ವಿದ್ಯಾಶಾಲೆ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಹಿರಿಯ ಹಾಸ್ಯ ಕಲಾವಿದ ಎಸ್. ರಾಜಗೋಪಾಲಾಚಾರಿ ಅವರ 'ಅಣಕುಗೀತೆ ಒಂದಿಷ್ಟು ಕವಿತೆ' ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಲೋಕಾರ್ಪಣೆ : ಚಲನಚಿತ್ರ ನಟ ಸುಂದರ್ ವೀಣಾ, ಕೃತಿ ಕುರಿತು ಮಾತನಾಡುವವರು : ಹಿರಿಯ ಲೇಖಕ ಪ್ರೊ. ಆರ್.ಎ. ಕುಮಾರ್, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್. ಸತೀಶ್, ಹಿರಿಯ ಹಾಸ್ಯ ಕಲಾವಿದ ಎಸ್. ರಾಜಗೋಪಾಲಾಚಾರಿ, ರಂಗನಾಥ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ :** ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಸ್ಥಳ: ಸೆನೆಟ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಸಾಧಕ ಶಿಕ್ಷಕರಿಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರಧಾನ ಭಾಷಣ : ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ, ಸನ್ಮಾನಿಸುವವರು : ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಡಾ. ಕಾ. ರಾಮೇಶ್ವರಪ್ಪ, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಆದಿಲ್ ಪಾಷಾ, ಎಸ್. ಬಾಲಕೃಷ್ಣ, ಸಾಲುಂಡಿ ಎಸ್. ದೊರೆಸ್ವಾಮಿ, ನಾಲಾಬೀದಿ ರವಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ವಿಶ್ವ ಚೇತನ ಬಳಗ :** ನಾಡ ದಸರಾ ಪ್ರಯುಕ್ತ ನೃತ್ಯ, ಭರತನಾಟ್ಯ, ಗೀತಗಾಯನ, ಉಪನ್ಯಾಸ, ಕವಿಗೋಷ್ಠಿ, ಉದ್ಘಾಟನೆ : ನಾಟಕ ಭಾರ್ಗವ ಕೆಂಪರಾಜು, ಅಧ್ಯಕ್ಷತೆ : ಸಾಹಿತಿ ಶ್ರೀಮತಿ ಎ.ಎನ್. ವಾಣಿಸುಬ್ಬಯ್ಯ, ಮುಖ್ಯ ಅತಿಥಿಗಳು : ಆರ್.ಎಸ್. ಚಂದ್ರಶೇಖರ್, ಕಣ್ಣೂರು ವಿ. ಗೋವಿಂದಾಚಾರಿ, ಪ್ರಾಸ್ತಾವಿಕ ನುಡಿ : ಡಾ. ಎಂ. ಶಿವಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 1.30ಕ್ಕೆ.

■ **ಸ್ನೇಹ ಸಂಗಮ ಹಾಡುಗಳ ಸಂಭ್ರಮ ತಂಡ :** ಸ್ನೇಹ ಸಂಗಮ ಹಾಡುಗಳ ಸಂಭ್ರಮ, ಮಧುರ ಗೀತೆಗಳ ಸುಮಧುರ ಸಂಜೆ, ಪ್ರಪ್ರಥಮ ಕರೋಕೆ ಗಾಯನ ಕಾರ್ಯಕ್ರಮ, ಉದ್ಘಾಟನೆ : ಬಿಜೆಪಿ ಯುವ ಮುಖಂಡ ಕವೀಶ್‌ಗೌಡ, ಉಪಸ್ಥಿತರು : ಕೂರ್ಗಳ್ಳಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಬಿ. ರಾಮು, ಸನ್ಮಾನಿತರು : ಉಮೇಶ್ ಎಂ.ಪಿ., ಪೆಮ್ಮಯ್ಯ, ಎಸ್.ಕೆ. ರಕ್ಷಿತಾ, ಸ್ಥಳ: ನಾದಬ್ರಹ್ಮ ಸಂಗೀತಾ ಸಭಾ, ನಂಜು ಮಳಿಗೆ ವೃತ್ತ, ಮಧ್ಯಾಹ್ನ 3.30ಕ್ಕೆ.

■ **ಸಕ್ಷಮ, ಸಮದೃಷ್ಟಿ, ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ :** ಅಷ್ಟಾವಕ್ರ ಜಯಂತಿ, ವಿಶ್ವ ಕಿವುಡರ ದಿನಾಚರಣೆ ಅಂಗವಾಗಿ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ವಿತರಣೆ, ಮುಖ್ಯ ಅತಿಥಿಗಳು : ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಅಧ್ಯಕ್ಷ ಡಾ. ಎಸ್. ಮುರಳಿ, ಎನ್‌ಐಇ ಸಹಾಯಕ ಪ್ರಾಧ್ಯಾಪಕ ವೇದಮೋಹನ್, ಮೈಸೂರು ಜಿಲ್ಲಾ ಕಿವುಡರ ಸಂಘದ ಉಪಾಧ್ಯಕ್ಷ ಮಹೇಶ್ ವರ್ಮ, ಸ್ಥಳ: ಸಕ್ಷಮದ ಆವರಣ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರ ಮಠ, ಜಯಲಕ್ಷ್ಮಿಪುರಂ :** ಪಂಡಿತ್ ಕಪಿಲಾಚಾರ್ಯ ಗಲಿಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಅಶೋಕ ಫುಟ್‌ಬಾಲ್ ಕ್ಲಬ್ :** ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ, ಸ್ಥಳ: ಹಾರ್ಡ್‌ವಿಕ್ ಶಾಲಾ ಮೈದಾನ, ಸಂಜೆ 5ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ದೃಷ್ಟಿ ವಿಕಲಚೇತನರು, ವಿಶೇಷ ವಿಕಲಚೇತನರು, ವೃದ್ಧರು ಅಥವಾ ಅನಾಥಾಶ್ರಮಗಳು ಮತ್ತು ಕಿವುಡರು ಮತ್ತು ಮೂಗರ ಶಾಲೆಗಳಿಗೆ ಸಾಮಗ್ರಿ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಪೋಲ್ ವ್ಯವಸ್ಥಾಪಕ ನಿರ್ದೇಶಕ ನಾಗರಾಜನ್, ವಿಶೇಷ ಅತಿಥಿಗಳು : ಸಿ.ವಿ. ಪಾರ್ಥಸಾರಥಿ, ಶ್ರೀಮತಿ ಪರಿಮಳ ಮತ್ತು ಶ್ರೀಮತಿ ಪೂರ್ಣಿಮಾ ಅವರಿಂದ ದೇವರನಾಮ ಸಂಕೀರ್ತನಾ, ವಿದ್ವಾನ್ ತುಮಕೂರು ಯಶಸ್ವಿ–ವಯೋಲಿನ್, ವಿದ್ವಾನ್ ಪ್ರಹ್ಲಾದರಾವ್ –ಮೃದಂಗ, ಸ್ಥಳ: ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್, ಶ್ರೀರಾಂಪೇಟೆ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅದಮ್ಯ ರಂಗಶಾಲೆ :** ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ನಾಟಕ ಪ್ರದರ್ಶನ, ನಾಟಕ ಪ್ರದರ್ಶನಕ್ಕೆ ಚಾಲನೆ : ಕವಯತ್ರಿ ಶ್ರೀಮತಿ ಮಂಜುಳಾ ಮಾನಸ, ಅಧ್ಯಕ್ಷತೆ : ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಆಶಯ ನುಡಿ : ಅದಮ್ಯ ರಂಗಶಾಲೆ ಕಾರ್ಯದರ್ಶಿ ಬಿ. ಸತೀಶ್ ಜವರೇಗೌಡ, ಪ್ರಮಾಣ ಪತ್ರ ವಿತರಣೆ : ಪೊಲೀಸ್ ಸಹಾಯಕ ಆಯುಕ್ತ ಜಿ.ಎಸ್. ಗಜೇಂದ್ರ ಪ್ರಸಾದ್, ಸ್ಥಳ: ಕುವೆಂಪು ರಂಗ ಮಂದಿರ, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ

■ **ರಂಗಾಯಣ :** ಬಿ.ವಿ. ಕಾರಂತ ಕಾಲೇಜು ರಂಗೋತ್ಸವ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾಸಭಾದಿಂದ ಒಥೆಲೋ ನಾಟಕ ಪ್ರದರ್ಶನ, ನಿರ್ದೇಶನ : ಪಿ. ಚಾಂದಿನಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಚಿನ್ಮಯ ಮಿಷನ್ :** ಪಂಡಿತ್ ದತ್ತಪಾದಾನಂದ ಅವರಿಂದ ಗೀತಾ ಜ್ಞಾನ ಯಜ್ಞ ಕರ್ಮಸಂನ್ಯಾಸಯೋಗ (ಭಗವದ್ಗೀತೆಯ 5ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಚಿನ್ಮಯ ಮಿಷನ್, ರಾಮಕ್ಷೇತ್ರ, ಸಾರ್ವಜನಿಕ ಹಾಸ್ಟೆಲ್ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30 ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ಕಪಿಲಾಚಾರ್ಯ ಗಲಿಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಾಯದ ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

■ **ರಂಗವಲ್ಲಿ ತಂಡ :** ರಂಗವಲ್ಲಿ ತಂಡದ ಕಲಾವಿದರಿಂದ ಪಾರ್ಶ್ವ ಸಂಗೀತ ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣದ ಹಿರಿಯ ಕಲಾವಿದ ಪ್ರಶಾಂತ್ ಹಿರೇಮಠ, ಸಂಗೀತ ನಿರ್ವಹಣೆ : ಎಚ್.ಕೆ. ದ್ವಾರಕಾನಾಥ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

ಮೈಸೂರು ಮಿತ್ರ ಭಾನುವಾರ 8 ಅಕ್ಟೋಬರ್ 2023

ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆದಾಡುವ ಬಸವಣ್ಣ: 'ಭಾರತ ರತ್ನ' ನೀಡಿ



ಮೈಸೂರು, ಅ.7(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆದಾಡುವ ಬಸವಣ್ಣ. ಅವರಿಗೆ 'ಭಾರತ ರತ್ನ' ನೀಡುವಂತೆ ಮಾಜಿ ಶಾಸಕ ಅಶೋಕ್ ಖೇಣಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಗೆ ಸಾವಿರಾರು ಕೋಟಿ ವೆಚ್ಚವಾಗುತ್ತಿದ್ದರೂ ಅದನ್ನು ತೆರಿಗೆ ಮೂಲಕ ಸಂಗ್ರಹ ಮಾಡುವ ಮಾರ್ಗವನ್ನು ಸಿದ್ದರಾಮಯ್ಯ ಕಂಡುಕೊಂಡಿದ್ದಾರೆ. ಈ ಮೂಲಕ ಜನಪರ ಯೋಜನೆಗಳನ್ನು ಸಾಕಾರಗೊಳಿಸಿ ರಾಜ್ಯದ ಆರ್ಥಿಕತೆಯನ್ನು ಸಿದ್ದರಾಮಯ್ಯ ಮತ್ತಷ್ಟು ಬಲಪಡಿಸಿದ್ದಾರೆ ಎಂದು ಹೇಳಿದರು. ಹಣಕಾಸು ಖಾತೆ ಹೊಂದಿರುವ ಸಿದ್ದರಾಮಯ್ಯ ತಮ್ಮದೇ ಆದ ಉತ್ತಮ ಹಣಕಾಸು ನೀತಿ ಮೂಲಕ ರಾಜ್ಯವನ್ನು ಮತ್ತಷ್ಟು ಅಭಿವೃದ್ಧಿ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿತ್ವದ ಸಿದ್ದರಾಮಯ್ಯ ನಡೆದಾಡುವ ಬಸವಣ್ಣ ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯಗೆ ಭಾರತ ರತ್ನ ಬಿರುದು ನೀಡಬೇಕು ಎಂದು ಅಶೋಕ್ ಖೇಣಿ ಆಗ್ರಹಿಸಿದರು.

ಭಾರತದ ಪ್ರಜಾಪ್ರಭುತ್ವ ಇಡೀ ವಿಶ್ವಕ್ಕೆ ಮಾದರಿ

ಮೈಸೂರು, ಅ.7(ಬಿಎಲ್‌ಯು)– ಇಡೀ ಪ್ರಪಂಚಕ್ಕೆ ಭಾರತ ಮಾದರಿ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆ ಹೇಗಿರಬೇಕು ಎಂದು ಭಾರತ ಇಡೀ ವಿಶ್ವಕ್ಕೆ ಪಾಠ ಮಾಡಿದೆ.

ಜಾತಿಯತೆಯಿಂದ ಸಮಾಜವನ್ನು ಮುಕ್ತ ಮಾಡಲು ಬಸವಣ್ಣನವರ 12ನೇ ಶತಮಾನದ ಕ್ರಾಂತಿ ಕಡೆಗೆ ಈಗ ಆಕರ್ಷಿತರಾಗುತ್ತಿದ್ದೇವೆ. ಈ ಬಗ್ಗೆ ಇಂದು ಹೆಚ್ಚು ಚರ್ಚೆಗಳು ನಡೆಯುತ್ತಿವೆ ಎಂದು ಹೇಳಿದರು. ಶ್ರೇಣಿಕೃತ ವ್ಯವಸ್ಥೆ ವಿರುದ್ಧ ಬಸವಣ್ಣನವರು ಕ್ರಾಂತಿಕಾರಕ ತೀರ್ಮಾನಗಳನ್ನು ಮಾಡಿದರು. ಸಮಾಜದಲ್ಲಿದ್ದ ಕಂದಾಚಾರ ಹಾಗೂ ಮೌಢ್ಯತೆ ವಿರುದ್ಧ ಹೋರಾಟ ಮಾಡಿದರು. ಲಿಂಗ ತಾರತಮ್ಯದ ವಿರುದ್ಧ ಸ್ಪಷ್ಟ ನಿಲುವು ತಳೆದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಇವೆಲ್ಲಾ ವಿಚಾರಗಳು ಚರ್ಚೆಯಾಗುತ್ತಿತ್ತು ಎಂದು ತಿಳಿಸಿದರು.



ಜಾತಿ ವ್ಯವಸ್ಥೆಯಲ್ಲಿ ಹಿಂದುಳಿದಿದ್ದ ಕಾಯಕ ವರ್ಗದ ಮಹತ್ವವನ್ನು ಸಾರಿ ಹೇಳಿದರು. ಅವರ ಪರವಾದ ಹೋರಾಟ ಮಾಡಿದರು. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು, ತೆರಿಗೆ ಹಣ ಸಾರ್ವಜನಿಕರಿಗೆ ಸೇರಬೇಕು ಎಂದು ಪ್ರತಿಪಾದಿಸುತ್ತಿದ್ದರು. ಬಸವಣ್ಣನಂತೆ ಸಿದ್ದರಾಮಯ್ಯ ಕೂಡ ತೆರಿಗೆ ಹಣ ಸಾರ್ವಜನಿಕರ ಶ್ರೇಯೋಭಿವೃದ್ಧಿಗೆ ಬಳಕೆ ಆಗಬೇಕೆಂದು ಹಲವು ಯೋಜನೆ ರೂಪಿಸಿದ್ದಾರೆ ಎಂದು ಡಾ.ಮಹದೇವಪ್ಪ ಹೇಳಿದರು.

ಸಿದ್ದರಾಮಯ್ಯ ಯಾರನ್ನೂ ಕಡೆಗಣಿಸಿಲ್ಲ; ಕಡೆಗಣಿಸಲೂ ಬಿಡಲ್ಲ



ಮೈಸೂರು, ಅ.7(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಯಾರನ್ನೂ ಕಡೆಗಣಿಸಿಲ್ಲ, ತಮ್ಮ ಸರ್ಕಾರದಲ್ಲಿ ಯಾರನ್ನು ಕಡೆಗಣಿಸಲೂ ಬಿಡುವುದಿಲ್ಲ ಎಂದು ಅರಣ್ಯ ಸಚಿವರೂ ಆದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಸಿದ್ದರಾಮಯ್ಯ ಯಾರನ್ನೂ ಕಡೆಗಣಿಸಿಲ್ಲ ಎಂದು ಹೇಳಿದರು. ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳನ್ನು ಕಡೆಗಣಿಸಲಾಗಿದೆ ಎಂಬ ಶಾಸಕ ಶಾಮನೂರು ಶಿವಶಂಕರಪ್ಪ ಆರೋಪಕ್ಕೆ ಪರೋಕ್ಷವಾಗಿ ಪ್ರತಿಕ್ರಿಯಿಸಿದ ಈಶ್ವರ ಖಂಡ್ರೆ, ಯಾರನ್ನೂ ಕಡೆಗಣಿಸದ ಸಿದ್ದರಾಮಯ್ಯ ಜಾತ್ಯಾತೀತ ಹಾಗೂ ಧರ್ಮಾತೀತವಾಗಿ ನಡೆದುಕೊಳ್ಳುತ್ತಾರೆ ಎಂದರು.

ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಬಸವಣ್ಣನವರ ಭಾವಚಿತ್ರ ಹಾಕುವಂತೆ ಆದೇಶ ಹೊರಡಿಸಿದ್ದಾರೆ ಎಂದು ಸಿದ್ದರಾಮಯ್ಯ ಆಡಳಿತವನ್ನು ಈಶ್ವರ ಖಂಡ್ರೆ ಸಮರ್ಥನೆ ಮಾಡಿಕೊಂಡರು. ಪುರಾಣದಿಂದ ಇಲ್ಲಿ ತನಕ ಹಣಕ್ಕಾಗಿ, ಹೆಣ್ಣಿಗಾಗಿ ಹಾಗೂ ಅಧಿಕಾರಕ್ಕಾಗಿ ಕ್ರಾಂತಿಯಾಗಿದೆ. ಆದರೆ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದರೂ ನಾನು ಎಲ್ಲರಿಗಿಂತ ಕಿರಿಯ ಎಂಬ ಸರಳ ಮನೋಭಾವ ಹೊಂದಿದ್ದರು. ಜಾತ್ಯಾತೀತ ಸಮಾಜ ನಿರ್ಮಾಣ ಮಾಡಲು ಕ್ರಾಂತಿ ಮಾಡಿದರು. ಸ್ವಾತಂತ್ರ್ಯ, ಸಮಾನತೆ ತಳಹದಿ ಮೇಲೆ ಸಮಾಜ ಕಟ್ಟುವ ಕೆಲಸ ಮಾಡಿದರು ಎಂದು ಹೇಳಿದರು. 12 ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ವಿರುದ್ಧ ನಡೆದ ದೊಡ್ಡ ಕ್ರಾಂತಿ ಅದಾಗಿತ್ತು. ಆದರೆ ಸ್ವಾತಂತ್ರ್ಯ ಬಂದು 76 ವರ್ಷವಾದರೂ ಇನ್ನೂ ಕೂಡ ಅಸಮಾನತೆ, ಜಾತಿ ವ್ಯವಸ್ಥೆ ಇರುವುದು ಬೇಸರದ ಸಂಗತಿ ಎಂದು ಈಶ್ವರ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದರು.

ಅರಣ್ಯ, ವನ್ಯಜೀವಿ ಸಂರಕ್ಷಣೆಗೆ ಕಾಡಂಚಿನ ಜನರ ವಿಶ್ವಾಸಕ್ಕೆ ತೆಗೆದುಕೊಳ್ಳಿ

● ಅರಣ್ಯ ಇಲಾಖೆ ಸಿಬ್ಬಂದಿಗೆ, ಅಧಿಕಾರಿಗಳಿಗೆ ಸಿದ್ದರಾಮಯ್ಯ ಸಲಹೆ ● 69ನೇ ವನ್ಯಜೀವಿ ಸಪ್ತಾಹ ಸಮಾರೋಪ



ಮೈಸೂರಿನ ಕೆಪಿಎ ಸಭಾಂಗಣದಲ್ಲಿ ಶನಿವಾರ ನಡೆದ '69ನೇ ವನ್ಯಜೀವಿ ಸಪ್ತಾಹ'ದ ಸಮಾರೋಪ ಸಮಾರಂಭದಲ್ಲಿ ವನ್ಯಜೀವಿ ಸಂರಕ್ಷಣೆಗಾಗಿ ಶ್ರಮಿಸುತ್ತಿರುವವರನ್ನು ಅಭಿನಂದಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಈಶ್ವರ್ ಖಂಡ್ರೆ, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರು, ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಅ.7(ಎಸ್‌ಬಿಡಿ)– ಅರಣ್ಯ ಸಂಪತ್ತು ಹಾಗೂ ವನ್ಯಜೀವಿ ಸಂರಕ್ಷಣೆಗೆ ಸಿಬ್ಬಂದಿ ಹಾಗೂ ಕಾಡಂಚಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಸಭಾಂಗಣದಲ್ಲಿ ಶನಿವಾರ ನಡೆದ '69ನೇ ವನ್ಯಜೀವಿ ಸಪ್ತಾಹ'ದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅರಣ್ಯ ಸಂಪತ್ತು ಹಾಗೂ ವನ್ಯಜೀವಿ ಸಂರಕ್ಷಣೆ ಈ ಸಪ್ತಾಹದ ಮುಖ್ಯ ಉದ್ದೇಶ. ಕೇವಲ ಸಪ್ತಾಹ ಆಚರಿಸಿದರೆ ಸಾಲದು. ಇದರ ಉದ್ದೇಶ ಸಾಧನೆಗೆ ಆಸಕ್ತಿಯಿಂದ ಕೆಲಸ ಮಾಡಬೇಕು. ಕೆಳ ಹಂತದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ನೌಕರರು ಹಾಗೂ ಕಾಡಂಚಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎಂದರು.

ಅರಣ್ಯ ಉಳಿದರೆ ನಾಡು ಉಳಿಯುತ್ತದೆ. ಪ್ರಾಕೃತಿಕ ಸಮತೋಲನಕ್ಕೆ ಭೂಮಿಯ ಶೇ.33ರಷ್ಟು ಪ್ರದೇಶದಲ್ಲಿ ಅರಣ್ಯವಿರಬೇಕು. ಆದರೆ ಪ್ರಸ್ತುತ ಶೇ. 20–22ರಷ್ಟಿರಬಹುದು. ಅರಣ್ಯ ನಶಿಸಲು ಮನುಷ್ಯನ ದುರಾಸೆ, ದುರ್ಬುದ್ಧಿಯೇ ಕಾರಣ. ಪರಿಣಾಮ ವನ್ಯಜೀವಿಗಳೂ ಸಂಕಷ್ಟಕ್ಕೀಡಾಗಿವೆ. ಸಾಧ್ಯವಾದ ಮಟ್ಟಿಗೆ ಗಿಡ–ಮರ ಬೆಳೆಸಬೇಕು. ವನ್ಯಪ್ರಾಣಿಗಳ ರಕ್ಷಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಮನುಷ್ಯ, ಪ್ರಾಣಿಗಳೊಂದಿಗೆ ಸಹಜೀವನ ನಡೆಸುವುದು ಅನಿವಾರ್ಯ ಎಂಬುದು ಮನಸ್ಸಿನಲ್ಲಿರಬೇಕು. ಅರಣ್ಯ ರಕ್ಷಣೆ ಸರ್ಕಾರದ ಜವಾಬ್ದಾರಿಯಾಗಿದ್ದರೂ ಇದರಲ್ಲಿ ಎಲ್ಲರ ಸಹಕಾರವೂ ಮುಖ್ಯವಾಗಿದೆ ಎಂದು ತಿಳಿಸಿದರು.

ಈ ಪರಿಸ್ಥಿತಿಯಲ್ಲೂ ನಮ್ಮ ರಾಜ್ಯದಲ್ಲಿ ಹುಲಿ ಮತ್ತು ಆನೆಗಳ ಸಂಖ್ಯೆ ಕಡಿಮೆಯಾಗಿಲ್ಲ ಎನ್ನುವುದು ಸಂತಸದ ಸಂಗತಿ. 563 ಹುಲಿಗಳನ್ನು ಹೊಂದಿರುವ ಕರ್ನಾಟಕ, ಹೆಚ್ಚು ಹುಲಿಗಳಿರುವ ಎರಡನೇ ರಾಜ್ಯವಾಗಿದೆ ಹಾಗೆಯೇ ನಮ್ಮ ರಾಜ್ಯ 6395 ಆನೆಗಳೊಂದಿಗೆ ಪ್ರಥಮ ಸ್ಥಾನದಲ್ಲಿದೆ. ಪಶ್ಚಿಮ ಘಟ್ಟ ಜೀವ ವೈವಿಧ್ಯತೆಯ ತಾಣ. ಇಲ್ಲಿ ಎಲ್ಲಾ ರೀತಿಯ ಪ್ರಾಣಿಗಳೂ ಇವೆ ಎಂದರು.

ಆಹಾರ–ನೀರಿಗಾಗಿ ಬರುತ್ತವೆ: ವನ್ಯಜೀವಿ ಮತ್ತು ಮಾನವ ಸಂಘರ್ಷ ನಿಯಂತ್ರಿಸುವ ನಿಟ್ಟಿನಲ್ಲಿ ಹಿಂದಿನ ಹಲವು ಕ್ರಮಗಳಿಂದ ನಿರೀಕ್ಷಿತ ಫಲಿತಾಂಶ ಸಿಗಲಿಲ್ಲ. ಈ ಹಿಂದೆ ನಮ್ಮ ಸರ್ಕಾರವಿದ್ದಾಗಲೇ ಅರಣ್ಯದಂಚಿನಲ್ಲಿ ರೈಲುಕಂಬಿ ಬ್ಯಾರಿಕೇಡ್ ಅಳವಡಿಕೆ ಆರಂಭಿಸಲಾಯಿತು. ಆದರೆ ನಂತರದ ಸರ್ಕಾರಗಳು ಈ ಬಗ್ಗೆ ಗಮನಹರಿಸದ ಕಾರಣ ಉದ್ದೇಶಿತ 640 ಕಿ.ಮೀ.ನಲ್ಲಿ ಸದ್ಯ 312 ಕಿ.ಮೀ. ಈ ಬ್ಯಾರಿಕೇಡ್ ಅಳವಡಿಸಲಾಗಿದೆ. ಈ ಸಂಘರ್ಷದಿಂದ ಜೀವಹಾನಿ, ಬೆಳೆಹಾನಿ ತಪ್ಪಿಸಲು ಈ ಬ್ಯಾರಿಕೇಡ್ ಅಳವಡಿಸುವುದು ಅಗತ್ಯ. ವನ್ಯಜೀವಿಗಳು ಸಹಜವಾಗಿ ಆಹಾರ ಮತ್ತು ನೀರಿಗಾಗಿ ಕಾಡಂಚಿನ ಜನವಸತಿ ಪ್ರದೇಶಕ್ಕೆ ಬರುತ್ತವೆ. ಕಾಡಿನಲ್ಲೇ ಆಹಾರ–ನೀರು ಸಿಕ್ಕರೆ ಹೊರಗೆ ಬರುವುದು ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯವರು ಕಾರ್ಯ ನಿರ್ವಹಿಸಬೇಕು. ಸರ್ಕಾರ ಎಲ್ಲಾ ರೀತಿಯ ನೆರವು ನೀಡಲು ಸಿದ್ಧವಿದೆ ಎಂದು ಭರವಸೆ ನೀಡಿದರು.

ಸಂಘರ್ಷ ಸವಾಲಾಗಿದೆ: ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಮಾತನಾಡಿ, ವನ್ಯಜೀವಿ ಮತ್ತು ಮಾನವ ಸಂಘರ್ಷ ದೊಡ್ಡ ಸವಾಲಾಗಿದೆ. ಮೈಸೂರು, ಚಾಮರಾಜನಗರ, ಹಾಸನ ಇತರೆಡೆ ಹೆಚ್ಚಾಗಿದೆ. ರಾಜ್ಯದಲ್ಲಿ ಪ್ರಸಕ್ತ ವರ್ಷ 31 ಜನ ವನ್ಯಜೀವಿ ದಾಳಿಯಿಂದ ಸಾವನ್ನಪ್ಪಿದ್ದಾರೆ. ಪ್ರಕೃತಿ ಸಮತೋಲನ ಕಾಪಾಡಿಕೊಳ್ಳುವಲ್ಲಿ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಎಲ್ಲರ ಜವಾಬ್ದಾರಿ. ರೈಲುಕಂಬಿ ಬ್ಯಾರಿಕೇಡ್ ಯೋಜನೆಗೆ ಹೆಚ್ಚುವರಿ ಅನುದಾನಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಸೋಲಾರ್ ಫೆನ್ಸಿಂಗ್, ಕಂದಕ ನಿರ್ಮಾಣ, ಆನೆ–ಚಿರತೆ ಟಾಸ್ಕ್‌ಫೋರ್ಸ್ ಸೇರಿದಂತೆ ಹಲವು ಕಾರ್ಯಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕರ್ನಾಟಕ, ಹುಲಿ ಸಂಖ್ಯೆಯಲ್ಲಿ ಎರಡನೇ ಸ್ಥಾನ ಹಾಗೂ ಆನೆಗಳ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದೆ. ಸುಮಾರು 2 ಸಾವಿರ ಎಕರೆ ಅರಣ್ಯ ಪ್ರದೇಶ ಒತ್ತುವರಿ ತೆರವುಗೊಳಿಸಲಾಗಿದೆ. ಮೂರು ತಿಂಗಳ್ಳಲ್ಲಿ ಸುಮಾರು 10 ಸಾವಿರ ಮೂಲ ನಿವಾಸಿಗಳಿಗೆ ಹಕ್ಕುಪತ್ರ ನೀಡಲಾಗುತ್ತದೆ. ಸದ್ಯ ಶೇ.22.61ರಷ್ಟು ಅರಣ್ಯ ಪ್ರದೇಶವಿದ್ದು, ಪ್ರತಿವರ್ಷ ಕನಿಷ್ಠ ಶೇ.1ರಷ್ಟು ಹೆಚ್ಚಿಸುವ ಗುರಿ ಇದೆ ಎಂದರು.

ಮೈಸೂರು ಪ್ಲಾಸ್ಟಿಕ್ ಮುಕ್ತ ನಗರ; ಅಧಿಕೃತ ಘೋಷಣೆ

'ಮೈಸೂರು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರ' ಎಂದು ವನ್ಯಜೀವಿ ಸಪ್ತಾಹ ಸಮಾರೋಪದಲ್ಲಿ ಅಧಿಕೃತವಾಗಿ ಘೋಷಿಸಲಾಯಿತು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಘೋಷಣಾ ವಾಕ್ಯ ಓದಿದರು. ಇದಕ್ಕೂ ಮುನ್ನ ಭಾಷಣದಲ್ಲಿ ಮೈಸೂರು, ಬೀದರ್, ಕಲಬುರ್ಗಿ, ತುಮಕೂರು ಹಾಗೂ ಧರ್ಮಸ್ಥಳವನ್ನು ಏಕಬಳಕೆ ಪ್ಲಾಸ್ಟಿಕ್ ಮುಕ್ತ ಎಂದು ಘೋಷಿಸಲಾಗಿದೆ. ಪರಿಣಾಮಕಾರಿ ಅನುಷ್ಠಾನಕ್ಕೆ ಕಾನೂನಿನ ಜೊತೆಗೆ ಜಾಗೃತಿ ಬಹಳ ಮುಖ್ಯ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರೂ ಕೂಡ, ಪರಿಸರಕ್ಕೆ ಮಾರಕವಾದ ಏಕಬಳಕೆ ಪ್ಲಾಸ್ಟಿಕ್ ಮುಕ್ತ ನಗರ ಎಂದು ಘೋಷಿಸಿದ್ದು ತುಂಬಾ ಒಳ್ಳೆಯದು. ಸಾಂಸ್ಕೃತಿಕ ನಗರ ಮೈಸೂರು ಪ್ಲಾಸ್ಟಿಕ್ ಮುಕ್ತ ಆಗುವುದು ಅತ್ಯವಶ್ಯಕ. ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ವನ್ಯಜೀವಿ ಆಂಬುಲೆನ್ಸ್‌ಗೆ ಚಾಲನೆ



ಚಿರತೆ ಕಾರ್ಯಪಡೆಗೆ ನೀಡಿರುವ ವನ್ಯಜೀವಿ ಆಂಬುಲೆನ್ಸ್ ಸೇವೆಗೆ ಹಸಿರು ನಿಶಾನೆ ತೋರಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅದರಲ್ಲಿದ್ದ ಅರವಳಿಕೆ ಬಂದೂಕು ವೀಕ್ಷಿಸಿದರು. ಬಲೆಗಳು, ಚಿಕಿತ್ಸಾ ಸೌಕರ್ಯ, ಔಷಧಿ, ಜಿಪಿಎಸ್ ಆಧಾರಿತ ಲೈವ್ ಟ್ರಾಕಿಂಗ್ ವ್ಯವಸ್ಥೆಯನ್ನೂ ಈ ಆಂಬುಲೆನ್ಸ್ ಒಳಗೊಂಡಿದೆ. ಇದೇ ವೇಳೆ ವಸ್ತು ಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸಿ, ವೀಕ್ಷಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಕೊಕ್ಕರೆ ಬೆಳ್ಳೂರು ಪಕ್ಷಿದಾಮದ ವಿಶೇಷ ಅಂಚೆ ಲಕೋಟೆ ಹಾಗೂ ತಾಂತ್ರಿಕ ವರದಿ, ರಂಗನತಿಟ್ಟು ಪಕ್ಷಿಧಾಮ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಕುರಿತ ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಲಾಯಿತು. ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಯಿತು. ಪಶುವೈದ್ಯ ಡಾ. ಯು.ಆರ್.ಮುಜೀಬ್, ಅಂಬಾರಿ ಆನೆ ಅಭಿಮನ್ಯು ಮಾವುತ ಜೆ.ಎಸ್. ವಸಂತ, ಕಾವಾಡಿ ಜೆ.ಕೆ.ರಾಜಣ್ಣ (ರಾಜು), ಮೃಗಾಲಯದ ಪ್ರಾಣಿ ಪಾಲಕ ಸೋಮಶೇಖರ್, ಹೆರ್ಜಾಲೆ ಬಳಗದ ಬಿ.ಲಿಂಗೇಗೌಡ ಹಾಗೂ ಮೈಸೂರು ಪಾಲಿಕೆಯ ಆರು ಮಂದಿ ಸ್ವಚ್ಛತಾ ಕಾರ್ಮಿಕರಿಗೆ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ, ಶಾಸಕರಾದ ಟಿ.ಎಸ್.ಶ್ರೀವತ್ಸ, ರವಿ ಶಂಕರ್, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಅರಣ್ಯ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಬ್ರಿಜೇಶ್ ಕುಮಾರ್ ದೀಕ್ಷಿತ್, ಸುಭಾಷ್ ಕೆಮಾಲ್ಖೇಡೆ, ಮೈಸೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ. ಎಂ.ಮಾಲತಿ ಪ್ರಿಯಾ, ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಬರ; 30 ಸಾವಿರ ಕೋಟಿ ಬೆಳೆ ನಷ್ಟ; ಕೇಂದ್ರದಿಂದ 4,860 ಕೋಟಿ ನೆರವು ನಿರೀಕ್ಷೆ

● ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯೆ ● ಕೇಂದ್ರ ತಂಡದಿಂದ ಅಧ್ಯಯನ ಆರಂಭ; ಗ್ಯಾರಂಟಿಗೆ ಅಡ್ಡಿಯಿಲ್ಲ





ಮೈಸೂರು, ಅ.7(ಎಂಟಿವೈ)–ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದಿಂದ 30 ಸಾವಿರ ಕೋಟಿ ರೂ. ಬೆಳೆ ನಷ್ಟವಾಗಿದೆಯಾದರೂ, ಬರ ಪರಿಹಾರಕ್ಕಾಗಿ ಕೇಂದ್ರದಿಂದ 4860 ಕೋಟಿ ರೂ. ನೆರವು ಕೇಳಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಶನಿವಾರ ಆಗಮಿಸಿದಾಗ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನ ಈ ಹಿಂದೆ ನೆರೆ ಹಾಗೂ ಈಗ ಬರಗಾಲದಿಂದ ತತ್ತರಿಸಿದ್ದಾರೆ. ನೆರೆ ಹಾಗೂ ಬರದಿಂದಾಗಿ ರಾಜ್ಯದಲ್ಲಿ 42 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಬೆಳೆ ನಷ್ಟದೊಂದಿಗೆ ಮನೆ ಕುಸಿತ, ಸೇತುವೆ, ರಸ್ತೆ ಹಾನಿ ಸೇರಿದಂತೆ ಇನ್ನಿತರ ಹಾನಿ ಒಳಗೊಂಡಿದೆ. ಆದರೆ, ಎನ್‌ಡಿಆರ್‌ಎಫ್ ನಿಯಮಾನುಸಾರ 4860 ಕೋಟಿ ರೂ. ಪರಿಹಾರ ನೀಡುವಂತೆ ಮನವಿ ಮಾಡಲಾಗಿದೆ. ಇದಕ್ಕೆ ಇನ್ನು ಪ್ರತಿಕ್ರಿಯೆ ಬಂದಿಲ್ಲ ಎಂದರು. ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರದಿಂದ 3 ತಂಡ ರಾಜ್ಯಕ್ಕೆ ಆಗಮಿಸಿವೆ. 11 ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಅವಲೋಕಿಸಲಿವೆ. ಯಾವ ಜಿಲ್ಲೆಗೆ ಹೋಗಬೇಕು ಎಂದು ಅವರೇ ನಿರ್ಧರಿಸಿದ್ದಾರೆ. ನಾವು ಇಂತಹ ಜಿಲ್ಲೆಗೆ ಹೋಗುವಂತೆ ಹೇಳಿದರೂ ಅವರು, ನಮ್ಮ ಮಾತು ಕೇಳುವುದಿಲ್ಲ. ಅದಕ್ಕಾಗಿ ಗ್ರಾಮೀಣ ಪ್ರದೇಶಕ್ಕೆ ತೆರಳಿ, ರೈತರಿಂದ ಅಭಿಪ್ರಾಯ ಸಂಗ್ರಹಿಸುವಂತೆ ಮನವಿ ಮಾಡಿದ್ದೇವೆ. ಜನರ ಅಹವಾಲು ಕೇಳಬೇಕು. ಜನಪ್ರತಿನಿಧಿಗಳ ಮಾತನ್ನೂ ಆಲಿಸುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಹಸಿರು ಬರವಿದೆ: ಕೇಂದ್ರ ಬರ ಅಧ್ಯಯನ ತಂಡ ಕಾವೇರಿ ಕಣಿವೆಗೆ ಭೇಟಿ ನೀಡದಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಬರ ಅಧ್ಯಯನಕ್ಕೆ ಬಂದಿರುವ ಕೇಂದ್ರ ತಂಡಕ್ಕೆ ಇಂತಹ ಸ್ಥಳಕ್ಕೆ ಹೋಗುವಂತೆ ಹೇಳಿದರೂ, ಅವರು ಅದಕ್ಕೆ ಸ್ಪಂದಿಸುವುದಿಲ್ಲ. ಅವರು ಮೊದಲೇ ನಿರ್ಧರಿಸಿರುವ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಬಹುತೇಕ ಕಡೆ ಹಸಿರು ಬರವಿದೆ. ಹೊಲ–ಗದ್ದೆಗಳಲ್ಲಿ ಫಸಲು ಹಸಿರಾಗಿದ್ದರೆ, ಅದು ಉತ್ತಮ ಬೆಳೆ ನೀಡುತ್ತದೆ ಎಂದರ್ಥವಲ್ಲ. ಗಿಡ ಬೆಳೆದರೆ ಸಾಲದು, ಅವು ಫಸಲು ನೀಡುತ್ತದಾ ಎಂದು ಪರಿಶೀಲಿಸಬೇಕು. ಈ ಎಲ್ಲಾ ಅಂಶ ಪರಿಗಣಿಸಿ ಪರಿಶೀಲನೆ ಮಾಡುವಂತೆ ಸಲಹೆ ನೀಡಲಾಗಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ತೊಂದರೆಯಿಲ್ಲ: ರಾಜ್ಯದಲ್ಲಿ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಯಾವುದೇ ಸಮಸ್ಯೆಯಿಲ್ಲ. ಈಗಾಗಲೇ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಹಾಗೂ ಅನ್ನಭಾಗ್ಯ ಯೋಜನೆ ಜಾರಿಗೊಳಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಸಚಿವ ಈಶ್ವರ್ ಖಂಡ್ರೆ ಶಾಸಕ ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುರುಗಳು : "ನೀನೇಕೆ ಶಾಲೆಗೆ ದಿನಾಲೂ ತಡವಾಗಿ ಬರುತ್ತೀ?"

ವಿದ್ಯಾರ್ಥಿ : "ನೀವೇಕೆ ದಿನಾಲೂ ನಾನು ಬರುವುದಕ್ಕೆ ಮುಂಚೆ ಬೆಲ್ಲು ಹೊಡೆಯುತ್ತೀರಿ?!"

ಮೈಸೂರು ಮಿತ್ರ

ಭಾನುವಾರ, 8 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಾವು ಯೋಚಿಸುವ ರೀತಿಯಂತೆ ನಾವು ರೂಪುಗೊಳ್ಳುತ್ತೇವೆ. ನೀವು ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರೋ ಅದರ ಕಡೆ ನಿಮ್ಮ ಎಲ್ಲಾ ಚೈತನ್ಯ ಎಳೆಯಲ್ಪಡುತ್ತದೆ. –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ { ಬರಿ ಕೈಗಿಂತ
ಗಾದೆ ಸುಳ್ಳಾಗದು { ಹಿತ್ತಾಳೆ ಕಡಗ ಮೇಲು

ನಿಮ್ಮ ಪತ್ರಗಳು

ದಸರಾ ನೆನಪು?!

ಮಾನ್ಯರೆ,

ಮೈಸೂರು ಸಾಂಸ್ಕೃತಿಕ ನಗರ ಸಾಹಿತ್ಯದ ತವರೂರು. ವಿವಿಧ ಹಬ್ಬಗಳ ನೆಲೆಬೀಡು. ದಸರಾ ಹಬ್ಬವು ಒಂದು ಪಾರಂಪರಿಕ ಹಬ್ಬ. ಎರಡು ಮೂರು ದಶಕಗಳ ಹಿಂದಿನ ನೆನಪಿನ ತುಣುಕುಗಳು ಇಂದಿಗೂ ನಮ್ಮನ್ನು ರೋಮಾಂಚನಗೊಳಿಸುತ್ತದೆ. ಅಕ್ಟೋಬರ್ ಬಂತೆಂದರೆ ರಜೆಯ ಚಿಂತೆ, ಬರುವ ಹತ್ತಿರದ ಮತ್ತು ದೂರದ ನೆಂಟರುಗಳು, ಅವರೊಡನೆ ಸುತ್ತಾಡುವ ಕನಸುಗಳು, ಮೈಸೂರಿನಲ್ಲಿ ಅಮಿತ್ರೂ ಆದರಿಸುವುದರಿಂದ ಸಡಗರ. ಬಡವ, ಶ್ರೀಮಂತ, ಚಿಕ್ಕ ಮನೆ ಅಥವಾ ದೊಡ್ಡದು ಯಾವುದು ಗಣನೆಗೆ ಬರುತ್ತಿರಲಿಲ್ಲ. ಪ್ರೀತಿ ಒಂದೇ ಮಂತ್ರ ದೊಡ್ಡವರಿಂದ ಹಿಡಿದು ಚಿಕ್ಕ ಮಗುವಿನವರೆಗೂ ದಿನ ಸಂಜೆ ಮನೆಗಳಿಗೆ ಬೀಗ ಹಾಕಿ ರಸ್ತೆಗಳ ದೀಪಾಲಂಕಾರ, ಅರಮನೆಯಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಲು ಹೋಗುವುದೇ ಒಂದು ಮೆರವಣಿಗೆಯಂತೆ. ಆ ದಟ್ಟ ಜನಸಂದಣಿಯಲ್ಲಿ ಒಬ್ಬರಿಗೊಬ್ಬರು ಕೈಹಿಡಿದು ತಪ್ಪಿಸಿಕೊಳ್ಳದೆ ಹೋಗಬೇಕೆನ್ನುವ ಮಾರ್ಗದರ್ಶನವಿರುತ್ತಿತ್ತು. ಇನ್ನು ಚಿಕ್ಕ ಮಕ್ಕಳಿಗೆ ಬೆಳಗಿನ ಸಂಜೆ ಪರಿವಿಲ್ಲದೆ ಗುಂಪು ಮಾಡಿಕೊಂಡು ಗಲ್ಲಿ ಗಲ್ಲಿಗಳಲ್ಲಿ ರಹಸ್ಯ ಭೇದಿಸುವ ವೀರರಂತೆ ಸುತ್ತುವುದು. ಬಂದ ಅತಿಥಿಗಳು ಎಲ್ಲಾ ಮನೆ ಕೆಲಸಗಳಿಗೆ ಕೈಜೋಡಿಸುತ್ತಿದ್ದರು. ಸಮಯ ದಿನಗಳು ಸರಿಯುವುದೇ ತಿಳಿಯುತ್ತಿರಲಿಲ್ಲ.

ದಸರಾ ಆನೆಗಳನ್ನು ಅಭ್ಯಾಸಕ್ಕಾಗಿ ಅರಮನೆಯಿಂದ ಬನ್ನಿಮಂಟಪದವರೆಗೂ ತಾಲೀಮು ಕರೆದೊಯ್ಯುವುದನ್ನು ಸ್ವಾರಸ್ಯವಾಗಿ ಕೇಳುವುದೇ ಚೆನ್ನ. ವಿಜಯ ದಶಮಿಯಂದು ಬೆಳಗಿನಿಂದಲೂ ಜಂಬೂಸವಾರಿಯನ್ನು ನೋಡಲು ಸ್ಥಳಗಳನ್ನು ಕಾಯ್ದಿರಿಸಿಕೊಳ್ಳುವಿಕೆಯ ಪ್ರಕ್ರಿಯೆ. ಮಧ್ಯದಲ್ಲಿ ಹೊಟ್ಟೆ ತುಂಬಿಸಲು ಬೇಕಾದ ತಿಂಡಿ ತೀರ್ಥಗಳನ್ನು ಅಣಿ ಮಾಡಿಕೊಂಡು ಹೊರಟೆವೆಂದರೆ ವಿಜಯ ಯಾತ್ರೆ. ದಸರಾ ಹಬ್ಬದ ರಿಯಾಯಿತಿ ದರದಲ್ಲಿನ ಅವಾರ್ಡ್ ಫಿಲಂಗಳನ್ನು ನೋಡಲು ಅಕ್ಕ ಪಕ್ಕದ ಸ್ಥಳೀಯ ದಿನಪತ್ರಿಕೆಗಳನ್ನು ಹುಡುಕಾಡುತ್ತಿದ್ದೆವು. ನಂದಿಧ್ವಜ, ಮರಗಾಲು, ಗಾರುಡಿ ಗೊಂಬೆ, ಬ್ಯಾಂಡ್ ವೃಂದ, ಜನಪದ ಸೊಗಡಿನ ನೃತ್ಯ...ಪ್ರತಿಯೊಂದು ಪ್ರದರ್ಶನಗಳನ್ನು ನೋಡಿ ಆನಂದಿಸುತ್ತಿದ್ದೆವು. ಬೇರೆ ಬೇರೆ ರಾಜ್ಯಗಳಿಂದ ಬಂದು ಜನರು ಭಾಗವಹಿಸುತ್ತಿದ್ದರು. ಕೊನೆಯಲ್ಲಿ ಅಂಬಾರಿ ಹೊತ್ತು ಆನೆ ಗಾಂಭೀರ್ಯದಿಂದ ತಾಯಿ ಚಾಮುಂಡೇಶ್ವರಿಯ ವಿಗ್ರಹದೊಂದಿಗೆ ಹೆಜ್ಜೆ ಇಟ್ಟಾಗ ದಸರಾ ಮೆರವಣಿಗೆ ಪೂರ್ಣಗೊಳ್ಳುತ್ತಿತ್ತು. ಆದರೆ ವಿಪರ್ಯಾಸವೆಂದರೆ ಇಂದು ನೆಂಟರುಗಳ ಸದ್ದಿಲ್ಲ, ಹೊರಗೆ ಬರುವ ಮಾತಿಲ್ಲ, ಎಲ್ಲವೂ ದೂರದರ್ಶನದ ಮುಂದೆ ಕುಳಿತರೆ ಮುಗಿಯಿತು. ಆ ಸಂಭ್ರಮ ಕೇವಲ ನೆನಪು??!

–ಹೇಮಲತಾ ಎಸ್.ಆರ್, ಪ್ರಾಂಶುಪಾಲರು, ಜಿ.ಎಸ್.ಎಸ್.ಎಸ್. ಪ್ರೌಢಶಾಲೆ, ಸಿದ್ಧಾರ್ಥನಗರ, ಮೈಸೂರು

ನೀರು ಪೋಲಾಗುವುದನ್ನು ತಡೆಯಿರಿ

ಮಾನ್ಯರೆ,

ನೀರನ್ನು ಜೀವ ಜಲ ಎನ್ನುತ್ತಾರೆ. ಪ್ರತಿಯೊಬ್ಬರು ನೀರಿನ ಪ್ರಾಮುಖ್ಯತೆಯನ್ನು ಅರಿಯಬೇಕು. ನೀರಿಗಾಗಿ ರಾಜ್ಯ–ರಾಜ್ಯಗಳು ಜಿದ್ದಿಗೆ ಬೀಳುತ್ತಿವೆ. ದೇಶ ದೇಶಗಳೇ ಕಾದಾಡುತ್ತಿವೆ. ಅರಬ್ ದೇಶಗಳಲ್ಲಿ ಸಮುದ್ರ ನೀರನ್ನೇ ಸಿಹಿ ನೀರಾಗಿ ಪರಿವರ್ತಿಸಲು ಎಷ್ಟೆಲ್ಲಾ ಹಣ ಖರ್ಚು ಮಾಡುತ್ತಾರೆ. ಕೆಲವು ದೇಶಗಳು ನೀರನ್ನು ಸಹಿತ ಆಮದು ಮಾಡಿಕೊಳ್ಳುವುದನ್ನು ಕಾಣಬಹುದಾಗಿದೆ. ನೀರಿಗೆ ಇಷ್ಟೆಲ್ಲಾ ಪ್ರಾಮುಖ್ಯತೆ ಇರುವಾಗ ನೀರಿನ ಬೆಲೆ ಅರಿಯದವರು ಪೋಲು ಮಾಡುತ್ತಿರುವುದನ್ನು ಪ್ರತಿ ಮನೆ ಮನೆಗಳಲ್ಲಿ, ಬಡಾವಣೆಗಳಲ್ಲಿ ಕಾಣಬಹುದು. ಕೆಲವು ಸಂಪಿಗೆ ಬಾಲ್ ಅಳವಡಿಸದೆ ನೀರು ರಸ್ತೆ, ಚರಂಡಿಗಳಲ್ಲಿ ಹರಿಯುತ್ತಿರುತ್ತದೆ. ಇನ್ನೂ ಕೆಲವರು ನಲ್ಲಿ ದುರಸ್ತಿ ಮಾಡಿಸದೆ ನೀರು ಪೋಲಾಗುತ್ತಿರುತ್ತದೆ. ಇನ್ನೂ ಕೆಲವು ಕಡೆ ನೀರಿನ ಪೈಪ್ ಒಡೆದು ಹೋಗಿ ನೀರು ಪೋಲಾಗುವುದರ ಜತೆಗೆ ಕಲುಷಿತ ನೀರು ಬರುತ್ತಿರುತ್ತದೆ. ತಕ್ಷಣವೇ ಈ ಪೈಪ್ ದುರಸ್ತಿ ಮಾಡಿದರೆ ನೀರು ಅಪವ್ಯಯವಾಗುವುದರ ಜತೆಗೆ ಕಲುಷಿತ ನೀರು ಬರುವುದನ್ನು ತಡೆಯಬಹುದು. ಕೆಲವು ಕಡೆ ಪೈಪ್ ಒಡೆದು ತಿಂಗಳುಗಳು ಕಳೆದರೂ ದುರಸ್ತಿ ಮಾಡುವುದಿಲ್ಲ. ಮೈಸೂರು ನಗರ ಪಾಲಿಕೆ ಮತ್ತು ಮುಡಾ ಇತ್ತ ಗಮನಹರಿಸಿ ಒಡೆದು ಹೋದ ಪೈಪ್‌ಗಳನ್ನು ತಕ್ಷಣವೇ ದುರಸ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಇಂಜಿನಿಯರ್‌ಗೆ ಹೇಳಿದರೆ ದುರಸ್ತಿಗೆ ಅವಕಾಶವಿಲ್ಲವೆನ್ನುತ್ತಾರೆ. ಹಾಗಾದರೆ ಈ ರೀತಿ ವೆಚ್ಚ ಭರಿಸಲು ಪಾಲಿಕೆ ಮತ್ತು ಮುಡಾದಲ್ಲಿ ಅವಕಾಶವಿಲ್ಲವೆ. ಈ ಬಗ್ಗೆ ಮುಡಾ ಮತ್ತು ನಗರ ಪಾಲಿಕೆ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.

ಮೈತ್ರಿಗೆ ಅಷ್ಟು ಆತುರವೇಕೆ?

ಮಾನ್ಯರೆ,

ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿರುವುದಕ್ಕೆ ಎರಡೂ ಪಕ್ಷಗಳ ಕೆಲ ನಾಯಕರು ಹಾಗೂ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಿಂದೊಮ್ಮೆ 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಪಕ್ಷಗಳು, ಉಭಯ ಪಕ್ಷಗಳ ಕೆಲ ನಾಯಕರು, ಕಾರ್ಯಕರ್ತರ ವಿರೋಧವನ್ನು ಧಿಕ್ಕರಿಸಿ ಮೈತ್ರಿ ಮಾಡಿಕೊಂಡು ಕೈಸುಟ್ಟು ಕೊಂಡಿರುವುದು ಗೊತ್ತಿರುವ ಸಂಗತಿ.

ಯಾವುದೇ ರಾಜಕೀಯ ಪಕ್ಷಗಳಿರಲಿ, ಆ ಪಕ್ಷಗಳಿಗೆ ಅವರದ್ದೇ ಆದ ತತ್ವ–ಸಿದ್ಧಾಂತಗಳಿರುತ್ತವೆ. ಆ ಪಕ್ಷಗಳ ಕಾರ್ಯಕರ್ತರು ಪಕ್ಷದ ತತ್ವ–ಸಿದ್ಧಾಂತಗಳಿಗೆ ಕಟಿಬದ್ಧರಾಗಿರುತ್ತಾರೆ. ಹೀಗಿರುವಾಗ ಸಮಯ–ಸಂದರ್ಭದ ಲಾಭದ ಉದ್ದೇಶದಿಂದ ಪಕ್ಷಗಳ ಬುನಾದಿಯಂತಿರುವ ಕಾರ್ಯಕರ್ತರ ಸಲಹೆ–ವಿರೋಧವನ್ನು ಲೆಕ್ಕಿಸದೆ ಚುನಾವಣಾ ಪೂರ್ವ ಹಾಗೂ ನಂತರದ ಮೈತ್ರಿ ಮಾಡಿಕೊಳ್ಳುವುದು ಎಷ್ಟು ಸರಿ? ಆ ಪಕ್ಷಗಳ ನಾಯಕರುಗಳ ಆತ್ಮಸಾಕ್ಷಿ ಒಪ್ಪುತ್ತದೆಯೇ? ಉದಾಹರಣೆಗೆ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ವಿಚಾರ ನನ್ನ ಗಮನಕ್ಕೆ ಬಂದೇ ಇಲ್ಲ ಎಂದಿದ್ದಾರೆ. ಒಂದು ಪಕ್ಷದ ರಾಜ್ಯಾಧ್ಯಕ್ಷರಿಗೆ ಪಕ್ಷದ ಆಗು–ಹೋಗುಗಳನ್ನು ತಿಳಿಸದೆಯೇ ಮುಂದುವರಿಯುವುದು ಎಷ್ಟು ಸರಿ! ಮೈತ್ರಿಗೆ ಅಷ್ಟು ಆತುರವೇಕೆ? ಇನ್ನಾದರೂ ರಾಜಕೀಯ ಪಕ್ಷಗಳ ನಾಯಕರು ಮೈತ್ರಿ ಮಾಡಿಕೊಳ್ಳುವ ಮುನ್ನ ಪ್ರಮುಖ ನಾಯಕರು, ಕಾರ್ಯಕರ್ತರ ಸಲಹೆಗಳಿಗೆ ಮಣೆ ಹಾಕಬೇಕು. ತಳಮಟ್ಟದ ಕಾರ್ಯಕರ್ತರ ಶ್ರಮವಿಲ್ಲದೇ ಆ ಮೈತ್ರಿಯು ಸಫಲವಾಗುತ್ತದೆಯೇ?

–ಪ್ರಸಾದ್ ಜಿ.ಎಂ, ಮೈಸೂರು

ಪ್ರೀತಿ ಯೋಗ!

ಮಾನ್ಯರೆ,

ನಾವೀಗ ದ್ವೇಷದ ಕೆಟ್ಟ (ಕುಲಗೆಟ್ಟ) ಕಾಲಘಟ್ಟದಲ್ಲಿದ್ದೇವೆ. (ಜೈನ ಧರ್ಮದ ಪ್ರಕಾರ, 'ದುಷ್ಷಮ' ಕಾಲ). ಎಲ್ಲೆಲ್ಲೂ ದ್ವೇಷದ ಭಾಷಣಗಳು, ಬೈಗುಳ, ಅಸಹ್ಯೋಕ್ತಿಗಳು: ಭಾಷೆ ತನ್ನ ಬೆಳಕಿನ ಗುಣವನ್ನು, ಕಳೆದುಕೊಂಡು ಮಲಿನವಾಗಿದೆ. ಸ್ವಚ್ಛತೆ, ಸ್ವಸ್ಥತೆ ಎಲ್ಲೂ ಇಲ್ಲ! ಈ 'ವಿಷ'ಮತೆಗಾಗಿ ವಿಷಾದಿಸಬೇಕಾಗಿದೆ. "ಮೃತ್ಯೋರ್ಮಾ ಅಮೃತಂಗಮಯ' ಎಂಬ ಹಾರೈಕೆ ಎಷ್ಟು ಹಳೆಯದೋ ಅಷ್ಟೇ ಹೊಸದು.

ಇದೊಂದು ಸೂಕ್ತಿ: ಜಗತಿ ಹಿ ಬಹುದುಃಖೆ ದುರ್ಲಭಃ ಪ್ರೀತಿಯೋಗಃ "ದುಃಖಮಯ ಜಗತ್ತಿನಲ್ಲಿ ಪ್ರೀತಿ (ಸಂತೋಷ) ಯೋಗ ದುರ್ಲಭವಾದದ್ದು. ಆದರೆ ಅದು ದುರ್ಬಲವಲ್ಲ. ಅಂತೂ ಈಗ ಅಗತ್ಯವಾದುದು. ಸ್ವಾಮಿ ವಿವೇಕಾನಂದರು ಒತ್ತಿ ಹೇಳುವ ಲವ್ (ಪ್ರೇಮ), ಲಸ್ಟ್ (ಮೋಹ), ಡಸ್ಟ್ ಅಲ್ಲ, ಡರ್ಟ್ ಅಲ್ಲವೇ ಅಲ್ಲ!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪರಿಂದ ಅಮ್ಮನ ಗುಣಗಾನ

ಮಾದರಿ ಸೇವಾ ಕ್ಷೇತ್ರಕ್ಕೆ ಮಾರುಹೋದ 'ಅಮೃತ ಕೀರ್ತಿ' ಪುರಸ್ಕೃತರು!

● ಎಸ್.ಬಿ. ದೇವರಾಜ

ಮಾತಾ ಅಮೃತಾನಂದಮಯಿ(ಅಮ್ಮ) ಅವರ 70ನೇ ಹುಟ್ಟುಹಬ್ಬದ ಪ್ರಯುಕ್ತ ಕೇರಳದ ಕೊಲ್ಲಂನ ಅಮೃತಪುರಿ ಆಶ್ರಮದಲ್ಲಿ ಇತ್ತೀಚೆಗೆ ನಡೆದ 'ಅಮೃತ ವರ್ಷಂ–70' ಸಮಾರಂಭದಲ್ಲಿ 'ಅಮೃತ ಕೀರ್ತಿ' ಪುರಸ್ಕಾರಕ್ಕೆ ಭಾಜನರಾದ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರು, ಅಲ್ಲಿನ ಸೇವಾಕಾರ್ಯದಿಂದ ಪ್ರಭಾವಿತರಾಗಿದ್ದಾರೆ. 'ಅಮ್ಮ'ನ ತಪೋಶಕ್ತಿ, ಅವರ ಸೇವಾ ಗುಣವನ್ನು ಮುಕ್ತಕಂಠದಿಂದ ಬಣ್ಣಿಸಿದ್ದಾರೆ. ಪುರಸ್ಕಾರ ಸ್ವೀಕರಿಸಲು ತೆರಳಿದ್ದಾಗ 'ಅಮ್ಮ'ನ ಕ್ಷೇತ್ರದಲ್ಲಿ ಕಂಡ ಮಾದರಿ ಸೇವಾ ಕಾರ್ಯಗಳನ್ನು 'ಮೈಸೂರು ಮಿತ್ರ' ನೊಂದಿಗೆ ಶ್ರೀಯುತರು ಹಂಚಿಕೊಂಡಿದ್ದಾರೆ.



ಡಾ. ಎಸ್.ಎಲ್. ಭೈರಪ್ಪನವರು ಅಮ್ಮನ ಸಮ್ಮುಖದಲ್ಲಿ ಕೇರಳ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರಿಂದ 'ಅಮೃತ ಕೀರ್ತಿ' ಪ್ರಶಸ್ತಿಯನ್ನು ಇತ್ತೀಚೆಗೆ ಸ್ವೀಕರಿಸಿದ್ದರು.

'ಅಮ್ಮ'ನಿಗೆ ವಿಶೇಷ ಶಕ್ತಿ ಇದೆ...

'ಅಮ್ಮಾ ಹೆಚ್ಚು ಓದಿದವರಲ್ಲ. ಆದರೆ ಅವರ ಜೀವನ ಜ್ಞಾನ ಅಗಾಧವಾದದ್ದು. ಅವರು ತಮ್ಮ ಸಮುದಾಯದ ಅಭಿವೃದ್ಧಿ, ಒಳಿತಿಗಾಗಿ ಮಾತ್ರವಲ್ಲದೆ ಇಡೀ ಭಾರತ, ವಿಶ್ವದ ಎಲ್ಲಾ ಜನಾಂಗದ ಅಭಿವೃದ್ಧಿಯನ್ನು ಬಯಸಿ, ಆ ನಿಟ್ಟಿನಲ್ಲಿ ದುಡಿಯುತ್ತಿದ್ದಾರೆ. ಈ ಉದ್ದೇಶವನ್ನೇ ಕೇಂದ್ರೀಕರಿಸಿ ಅವರು ಮಾತನಾಡುತ್ತಾರೆ. 'ಅಮೃತ ವರ್ಷಂ' ಸಮಾರಂಭಕ್ಕೆ 199 ದೇಶಗಳ ಪ್ರತಿನಿಧಿಗಳು ಆಗಮಿಸಿದ್ದರು. ಮುಸ್ಲಿಂ ರಾಷ್ಟ್ರದವರೂ ಬಂದಿದ್ದರು. ಎಲ್ಲರೂ ತಮ್ಮ ದೇಶದ ಬಾವುಟ ಹಾಗೂ ಆ ದೇಶದ ಮಣ್ಣಿನಲ್ಲಿ ಬೆಳೆದ ಗಿಡ ಹಿಡಿದುಕೊಂಡಿದ್ದರು. ಎರಡು ಲಕ್ಷಕ್ಕೂ ಹೆಚ್ಚು ಭಕ್ತರು ನೆರೆದಿದ್ದರು. ಎಲ್ಲರೂ 'ಅಮ್ಮ'ನ ಕಾಲುಮುಟ್ಟಿ ನಮಸ್ಕರಿಸುತ್ತಿದ್ದರು. ಎಲ್ಲರಿಗೂ ಅಮ್ಮ ಆಶೀರ್ವದಿಸಿದರು. ಅವರಲ್ಲಿ ವಿಶೇಷವಾದ ದೈಹಿಕ ಶಕ್ತಿ ಇದೆ. ಬೆಳಗಿನ ಜಾವದಿಂದ ಮಧ್ಯರಾತ್ರಿ 1 ಗಂಟೆವರೆಗೂ ಭಕ್ತರಿಗೆ ದರ್ಶನ ನೀಡಿದರು. ಅಷ್ಟು ಹೊತ್ತು ಅವರು ಆ ಜಾಗ ಬಿಟ್ಟು ಕದಲಿಲ್ಲ, ಒಂದು ಹನಿ ನೀರನ್ನೂ ಕುಡಿಯಲಿಲ್ಲ. ಅದು ಮಾಯಮಂತ್ರವಲ್ಲ. ಇದರ ಬಗ್ಗೆ ನನಗೆ ನಂಬಿಕೆಯೂ ಇಲ್ಲ. ಆದರೆ ಅಮ್ಮನ ದೃಷ್ಟಿಕೋನ ಹಾಗೂ ಅವರ ಶಕ್ತಿ ಬಹಳ ದೊಡ್ಡದು.

ಮೋದಿಯವರ ಯೋಜನೆಗೆ ಸ್ಫೂರ್ತಿ...

'ಅಮ್ಮ' ಒಮ್ಮೆ ಗಂಗಾನದಿ ದಡದ ಹಳ್ಳಿಗಳಿಗೆ ಭೇಟಿ ನೀಡಿದ್ದರು. ನದಿ ದಾಟುವಾಗ ಅಲ್ಲಿನ ಪರಿಸರವನ್ನು ಗಮನಿಸಿದ್ದರು. ಅಲ್ಲಿನ ಹಳ್ಳಿಗಳಲ್ಲಿ ಶೌಚಾಲಯಗಳಿಲ್ಲದ ಕಾರಣ ಮಲ–ಮೂತ್ರವೆಲ್ಲಾ ನದಿ ಸೇರುತ್ತಿತ್ತು. ಕೂಡಲೇ, ನರೇಂದ್ರ ಮೋದಿ ಅವರಿಗೆ ಕರೆ ಮಾಡಿ, ಗಂಗಾ ನದಿ ಕಲುಷಿತವಾಗಿರುವುದನ್ನು ಅವರ ಗಮನಕ್ಕೆ ತಂದು, ಇದನ್ನು ತಪ್ಪಿಸಲು ಮನವಿ ಮಾಡಿದ್ದರು. ಮೋದಿ ಅವರು ಆಗ ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಆದರೂ ಮೋದಿಯವರು ಗಂಗಾ ನದಿ ಆಸುಪಾಸಿನ ಹಳ್ಳಿಗಳಲ್ಲಿ ಶೌಚಾಲಯ ಕಟ್ಟಿಸಿ, ಜನರಲ್ಲಿ ಜಾಗೃತಿ ಮೂಡಿಸಿದರು. ಈ ಸಂಗತಿ ಮೋದಿಯವರ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಅವರು ಪ್ರಧಾನಿಯಾದ ಮೇಲೆ ಇಡೀ ದೇಶದಲ್ಲಿ ಅಭಿಯಾನಕ್ಕೆ ನಾಂದಿಯಾಯ್ತು. ಇದೊಂದು ಕ್ರಾಂತಿಕಾರಿಯಾಗಿ ಮನೆ ಮನೆಯಲ್ಲಿ ಶೌಚಾಲಯ ನಿರ್ಮಾಣವಾಗಲು ಕಾರಣವಾಯಿತು. 'ಅಮ್ಮ'ನ ಕ್ಷೇತ್ರದಲ್ಲಿ ಎಲ್ಲರೂ ಕಸ ಗುಡಿಸಿ, ಶುಚಿಗೊಳಿಸುವುದನ್ನು ಮೋದಿಯವರು ಗಮನಿಸಿದ್ದರು. ಹೀಗೆ ಎಲ್ಲರೂ ತಮ್ಮ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡರೆ ಇಡೀ ದೇಶ ಸ್ವಚ್ಛವಾಗಿರುತ್ತದೆ ಎಂದು ಸ್ವಚ್ಛ ಭಾರತ್ ಅಭಿಯಾನ ಆರಂಭಿಸಿದರು. ಈ ರೀತಿಯ ಸುಧಾರಣೆ ಮಾಡುವ ಕಲ್ಪನೆ ಮೋದಿ ಅವರಿಗೆ ಮೊದಲಿನಿಂದಲೂ ಇತ್ತಾದರೂ ಅವರಿಗೆ ಮಾರ್ಗದರ್ಶನ ನೀಡಿದ್ದು ಅಮ್ಮ. ಇದನ್ನು ಸ್ವತಃ ಮೋದಿಯವರೇ ತಮ್ಮ ಸಂದೇಶದಲ್ಲಿ ಸ್ಮರಿಸಿಕೊಂಡಿದ್ದು, ಅದನ್ನು ಕಾರ್ಯಕ್ರಮದಲ್ಲಿ ದೊಡ್ಡ ಪರದೆಯಲ್ಲಿ ಪ್ರಸಾರ ಮಾಡಲಾಯಿತು.

ಅಮ್ಮನಿಗೆ ಜಾತಿ ಚೌಕಟ್ಟಿಲ್ಲ...

ಅಮ್ಮ, ಸನ್ಯಾಸತ್ವ ದೀಕ್ಷೆ ಪಡೆದಿದ್ದು ರಾಮಕೃಷ್ಣ ಪರಮಹಂಸರ ಶಿಷ್ಯರಿಂದ. ಅದರ ಪರಿಣಾಮವಾಗಿ ಈಗಲೂ ಕೂಡ ಅಮ್ಮ ದೀಕ್ಷೆ ನೀಡಿ, ಉಪದೇಶ ಮಾಡುವುದು ರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರ ರೀತಿಯಲ್ಲೇ. ರಾಮಕೃಷ್ಣ ಪರಮಹಂಸರು ಹಾಗೂ ವಿವೇಕಾನಂದರಲ್ಲಿ ಜಾತಿ ಎನ್ನುವ ಪ್ರಶ್ನೆಯೇ ಇಲ್ಲ. ಈಗಲೂ ಯಾರೇ ರಾಮಕೃಷ್ಣಾಶ್ರಮದ ಸ್ವಾಮೀಜಿಯಾದರೂ ತಕ್ಷಣ ಅವರ ಪೂರ್ವಾಶ್ರಮದ ಜಾತಿ ಹೊರಟು ಹೋಗುತ್ತದೆ. ಈ ಸಂದೇಶ ಅಮ್ಮನ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯೂರಿದೆ. ಇವರು ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಹೀಗೆಯೇ ಅಮ್ಮನಲ್ಲಿ ಜಾತಿ ಎನ್ನುವುದೇ ಇಲ್ಲ. ಇವರ ಸಂಸ್ಥೆಯಲ್ಲಿ ಸಂಪೂರ್ಣ ಸನ್ಯಾಸಿಯಾದವರು ಜ್ಞಾನಾರ್ಜನೆ ಜೊತೆಗೆ ಕಸ ಗುಡಿಸುವುದರಿಂದ ಹಿಡಿದು ಎಲ್ಲಾ ಕೆಲಸ ಮಾಡುತ್ತಾರೆ. ಅಲ್ಲಿನ ಸೇವೆ ರೀತಿಯೇ ಅಂತಹದ್ದು. ಆ ಪ್ರದೇಶದ ಹಿಂದುಳಿದ ಜನರನ್ನು ಬದಲಾಯಿಸಿದ್ದಾರೆ. ಶಿಕ್ಷಣ ನೀಡಿ ಅವರನ್ನು ಅಭಿವೃದ್ಧಿ ಪಥದಲ್ಲಿ ಕರೆತಂದಿದ್ದಾರೆ.

ಸೇವೆಯೊಂದೇ ಮಹದುದ್ದೇಶ...

ಅಮ್ಮ, ತಮ್ಮ ಸಂಸ್ಥೆ ವತಿಯಿಂದ ಮೆಡಿಕಲ್ ಕಾಲೇಜು ನಡೆಸುತ್ತಿದ್ದಾರೆ. ಅಲ್ಲೇ ಆಶ್ರಯ ಪಡೆಯುವವರಿಗೆ ಯಾವುದೇ ಡೊನೇಷನ್, ಫೀಸ್ ಇಲ್ಲದೆ ಶಿಕ್ಷಣ ನೀಡಿ, ಅಲ್ಲಿಯೇ ನೇಮಕ ಮಾಡಿಕೊಂಡು ಅವರಿಗೆ ನಿಸ್ವಾರ್ಥ ಸೇವೆ ಮಾಡುವುದನ್ನು ಕಲಿಸಿದ್ದಾರೆ. ಸೂಕ್ತ ವೇತನ, ನಿಮ್ಮ ಮಕ್ಕಳಿಗೆ ಉಚಿತ ಶಿಕ್ಷಣವನ್ನೂ ನೀಡುತ್ತೇವೆ. ಆದರೆ ಯಾವ ಸಂದರ್ಭವೇ ಆದರೂ ರೋಗಿಗಳ ಜೀವ ಉಳಿಸಬೇಕು. ವೃತ್ತಿಗೆ ಮೀರಿ ಸೇವೆ ಎಂದು ತಿಳಿಯಬೇಕು. ಈ ಮೌಲ್ಯವನ್ನು ಅವರಲ್ಲಿ ಬಿತ್ತಿದ್ದಾರೆ ಸಹ. ಅಲ್ಲಿನ ಇಂಜಿನಿಯರ್ ಕಾಲೇಜು ವಿದ್ಯಾರ್ಥಿಗಳೂ ತುಂಬಾ ಚುರುಕಾಗಿದ್ದಾರೆ. ಗುಣಮಟ್ಟದಲ್ಲಿ ಯಾವುದೇ ಕೊರತೆಯಾಗದಂತೆ ನಿಗಾ ವಹಿಸಿದ್ದಾರೆ.

ಅಮ್ಮನನ್ನು ನೋಡಿ ಆಶ್ಚರ್ಯವಾಯಿತು

ಅಮ್ಮ, ಜೀವನದ ಪಾಠವನ್ನು ಸರಳವಾಗಿ ಹೇಳುತ್ತಾರೆ. ಮೊಬೈಲ್ ಹೆಚ್ಚು ಬಳಕೆ ಮಾಡಬೇಡಿ, ಮಕ್ಕಳಿಗೆ ಮೊಬೈಲ್ ಚಟ ತಪ್ಪಿಸಿ, ಅದರಿಂದ ಅವರ ಜೀವನದ ಮೇಲೆ ದುಷ್ಪರಿಣಾಮವಾಗುತ್ತದೆ. ಆದರೆ ಮೊಬೈಲ್‌ನಲ್ಲಿ ಲಭ್ಯವಾಗುವ ವೈಜ್ಞಾನಿಕ ವಿಷಯಗಳನ್ನಷ್ಟೇ ಪಡೆದುಕೊಳ್ಳಿ. ಹೀಗೆ ಬದುಕಿಗೆ ಬೇಕಾದ ವಿಚಾರಗಳನ್ನು ಮನಮುಟ್ಟುವಂತೆ ಹೇಳುತ್ತಾರೆ. ಇದಕ್ಕೆ ಕಾರಣ ಅವರಲ್ಲಿರುವ ಸಾಮಾನ್ಯ ಜ್ಞಾನ. ನಾನು ತತ್ವಶಾಸ್ತ್ರ ಕಲಿತಿದ್ದೇನೆ, ಪಾಠ ಮಾಡಿದ್ದೇನೆ, ಈ ಆಧಾರದಲ್ಲೇ ಪುಸ್ತಕ ಬರೆದಿದ್ದೇನೆ. ಆದರೆ ಅಮ್ಮನ ಮಾತುಗಳನ್ನು ಎಷ್ಟು ಜನ ಕೇಳುತ್ತಾರೆ. ಅವರ ತಪೋಶಕ್ತಿ ಕಂಡು ನನಗೆ ಆಶ್ಚರ್ಯವಾಯಿತು. ಇಷ್ಟೆಲ್ಲಾ ಸೇವೆಗೆ ಅಪಾರ ಪ್ರಮಾಣದ ಹಣ ಬೇಕು. ಹಣ ಎಲ್ಲಿಂದ ಬರುತ್ತದೆ. ಅಮ್ಮ ಹೆಚ್ಚಿಗೆ ಮಾತೂ ಆಡುವುದಿಲ್ಲ ಎಂಬ ಪ್ರಶ್ನೆ ಮೂಡಬಹುದು. ಆದರೆ ಅವರು ಜನರಿಗಾಗಿ ಮಾಡುತ್ತಿರುವ ಒಳ್ಳೆಯ ಕೆಲಸಗಳಿಂದ ನಂಬಿಕೆ ಸೃಷ್ಟಿಯಾಗಿದೆ. ಅಮ್ಮನಿಗೆ ಕಾಣಿಕೆ ನೀಡಿದರೆ ಅದು ನಾನಾ ರೀತಿಯಲ್ಲಿ ಜನರಿಗೆ ಉಪಯೋಗವಾಗುತ್ತದೆ ಎಂಬ ವಿಶ್ವಾಸವಿದೆ. ಎಷ್ಟೋ ಜನರಿಗೆ ದಾನ ಮಾಡಬೇಕು ಎಂಬ ಮನಸ್ಸಿರುತ್ತದೆ. ಆದರೆ ದಾರಿ ಗೊತ್ತಿರುವುದಿಲ್ಲ. ಅಮ್ಮನಂತಹವರಿಗೆ ಎಷ್ಟು ಕೊಟ್ಟರೂ ಅಪಾತ್ರವಾಗುವುದಿಲ್ಲ.

ಸೃಷ್ಟಿಯ ರಹಸ್ಯ ಸೃಷ್ಟಿಕರ್ತನಿಗೂ ಗೊತ್ತಿಲ್ಲವೇನೋ?

ದೇವರು ಇಲ್ಲವೇ ಇಲ್ಲ ಎಂದು ಕೆಲವರು ತುಂಬಾ ಕೀಳಾಗಿ ಮಾತನಾಡುತ್ತಾರೆ. ಅವರಿಗೆ ದೇವರು ಎಂದರೆ ಏನು? ದೇವರಿಲ್ಲ ಎನ್ನುವುದು ನಿಜವಾಗಿ ಗೊತ್ತಿದೆಯೇ? ಎಂದು ಸಣ್ಣ ಕತೆಯೊಂದರ ಮೂಲಕ ಡಾ.ಎಸ್.ಎಲ್. ಭೈರಪ್ಪನವರು ಪ್ರಶ್ನಿಸಿದರು;

ಜಮೀನ್ದಾರರ ದೊಡ್ಡ ಮನೆಗೆ ಒಬ್ಬ ವ್ಯಕ್ತಿ ಬರುತ್ತಾನೆ. ಆ ಮನೆಯ 10 ವರ್ಷದ ಹುಡುಗನ ಕರೆದು, ನನಗೆ ಸೂಜಿ ಇದ್ದರೆ ಕೊಡು ಸ್ವಲ್ಪ ಸಮಯದ ಬಳಿಕ ವಾಪಸ್ ಕೊಡುತ್ತೇನೆ ಎನ್ನುತ್ತಾನೆ. ಸೂಜಿ ಇದೆ ಎಂದು ಹೇಳಿದ ಹುಡುಗ ತನ್ನ ತಾಯಿ ಸೂಜಿ ಇಡುವ ಒಂದೆರಡು ಜಾಗದಲ್ಲಿ ಹುಡುಕಿ, ಸಿಗದಿದ್ದಾಗ ಸೂಜಿ ಇಲ್ಲ ಎಂದು ಹೇಳಿಬಿಡುತ್ತಾನೆ. ಆಗ ಆ ವ್ಯಕ್ತಿ ಇಷ್ಟೊಂದು ದೊಡ್ಡ ಮನೆಯಲ್ಲಿ ಎಲ್ಲಾದರೂ ಇರಬಹುದು, ಸಂಪೂರ್ಣವಾಗಿ ಹುಡುಕದೆ ಇಲ್ಲಾ ಎಂದು ಹೇಳಲಾಗುವುದಿಲ್ಲ. ಇದೆ ಎನ್ನುವುದು ಸುಲಭ. ಆದರೆ ಇಲ್ಲಾ ಎನ್ನಲು ಎಲ್ಲಾ ಕಡೆ ಹುಡುಕಬೇಕು ಎಂದರಂತೆ. ಋಗ್ವೇದದ 10ನೇ ಮಂಡಲದಲ್ಲಿರುವ ನಾಸದೀಯ ಸೂಕ್ತದಲ್ಲಿ ಸೃಷ್ಟಿಯ ರಹಸ್ಯ ಸೃಷ್ಟಿಕರ್ತನಿಗಾದರೂ ಗೊತ್ತಿದೆಯೇ? ಎಂದು ಪ್ರಶ್ನಿಸಲಾಗಿದೆ. 'ಸೋ ಅಂಗ ವೇದ ಯದಿ ವಾ ನ ವೇದ' ಅಂದರೆ ಎಲ್ಲವನ್ನೂ ಸೃಷ್ಟಿ ಮಾಡಿದವರಿಗೆ ಅದರ ಬಗ್ಗೆ ಗೊತ್ತಿದೆಯೋ ಇಲ್ಲವೋ, ನಮಗೆಷ್ಟು ತಿಳಿದಿರಲು ಸಾಧ್ಯ. ಈ ಸೂಕ್ತದ ಬಗ್ಗೆ ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರಾದ ಹಕ್ಕ–ಬುಕ್ಕ ಅವರ ಗುರುಗಳಾಗಿದ್ದ ವಿದ್ಯಾರಣ್ಯರ ಸಹೋದರ ಬಹಳ ವಿಸ್ತಾರವಾಗಿ ಬರೆದಿದ್ದಾರೆ. ಈ ಸೂಕ್ತವನ್ನು ಸ್ವಾಮಿ ವಿವೇಕಾನಂದರು ಹಲವು ಬಾರಿ ಪಸ್ತಾಪಿಸಿದ್ದಾರೆ. ಅದನ್ನು ಕುವೆಂಪು ಅವರೂ ತಮ್ಮ ಪುಸ್ತಕದಲ್ಲಿ ಕೋಟ್ ಮಾಡಿದ್ದಾರೆ. ಒಂದೊಂದು ಕಾರ್ಯನಿಮಿತ್ತ ದೇವರು ಅವತರಿಸಿ ಬರುತ್ತಾನೆ. ತ್ರೇತಾಯುಗದಲ್ಲಿ ರಾಮನಾಗಿ, ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿ ಬಂದರು. ಅವರಿಗೂ ಸೃಷ್ಟಿಯ ರಹಸ್ಯ ಗೊತ್ತಿಲ್ಲ. ದೇವರು ಎನ್ನುವ ಕಲ್ಪನೆ ಹೀಗಿರುವಾಗ ದೇವರೇ ಇಲ್ಲ ಎನ್ನುವುದು ಎಷ್ಟು ಸರಿ.

ಇದು ಬಹಳ ವೈಜ್ಞಾನಿಕ ಹೇಳಿಕೆ

'ದೇವರಿಗೂ ಗೊತ್ತಿಲ್ಲ' ಎನ್ನುವುದು ಬಹಳ ವೈಜ್ಞಾನಿಕ ಹೇಳಿಕೆ. ಐನ್‌ಸ್ಟೀನ್ ಕಾಲ ಬಂದ ಮೇಲೆ ಎಷ್ಟು ಗ್ಯಾಲಕ್ಸಿಗಳಿವೆ, ಅದರಲ್ಲಿ ಎಷ್ಟು ಕೋಟಿ ನಕ್ಷತ್ರಗಳಿವೆ, ಅವುಗಳ ನಡುವಿನ ಅಂತರವೆಷ್ಟು, ಇಂತಹ ಎಷ್ಟು ಗ್ಯಾಲಕ್ಸಿಗಳಿವೆ ಎಂದೆಲ್ಲಾ ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಆದರೆ ಅದರ ಮೂಲ ಹುಡುಕಲು ಹೋದಾಗ ಬಿಗ್‌ಬ್ಯಾಂಗ್ ಥಿಯರಿಗೆ ಬರುತ್ತದೆ. ಕಾಲ ನಿಂತು ಹೋಗುತ್ತದೆ. ಯಾವುದೇ ವಿಜ್ಞಾನಿಗಳು ಅದರ ಆಚೆಗೆ ಲೆಕ್ಕ(ಕ್ಯಾಲ್ಕ್ಯುಲೇಟ್) ಮಾಡಲಾಗಲ್ಲ ಎನ್ನುತ್ತಾರೆ. ಅದು ನಮಗೆ ಮೀರಿದ್ದು ಎನ್ನುತ್ತಾರೆಯೇ ಹೊರತು ದೇವರು ಇಲ್ಲ ಎಂದು ಹೇಳುವುದಿಲ್ಲ. ದೇವರು ಇಲ್ಲ ಎನ್ನುವುದು ದುರಹಂಕಾರ.

ಚಂದ್ರಯಾನ–3 ಉಡಾವಣೆ ಸಂದರ್ಭದಲ್ಲಿ ಇಸ್ರೋ ಅಧ್ಯಕ್ಷರು ತಿರುಪತಿಗೆ ಹೋಗಿ ಪೂಜೆ ಮಾಡಿಸಿ, ಒಳ್ಳೆಯದಾಗಲಿ ಎಂದು ಬೇಡಿಕೊಂಡಿದ್ದರು. ಒಳ್ಳೆಯದಾಯಿತು. ಒಂದು ವೇಳೆ ವಿಫಲವಾಗಿದ್ದರೆ ದೇವರ ಚಿತ್ತ ನಿರಾಶೆ ಸಹಿಸಿಕೊಂಡು ಮತ್ತೆ ಪ್ರಯತ್ನಿಸುವ ಶಕ್ತಿ ಕೊಡು ಎಂದು ಬೇಡಿರಬಹುದು. ವಿಜ್ಞಾನ ತಿಳಿದವರು ಈ ಮಟ್ಟಕ್ಕಿರುವಾಗ ಏನೂ ಅಧ್ಯಯನ ಮಾಡದವರು ದೇವರಿಲ್ಲ ಎಂದು ಹೇಗೆ ಹೇಳುತ್ತಾರೆ.

ಪತ್ರಕರ್ತರು ಜವಾಬ್ದಾರಿ ಮರೆಯಬಾರದು

ದೇಶದ ಕೆಲವು ಪತ್ರಕರ್ತರಿಗೆ ನಮಗೆ ಎಲ್ಲವೂ ಗೊತ್ತಿದೆ ಎಂಬ ಉಡಾಫೆ ಇದೆ. ವಿರೋಧ ಪಕ್ಷದವರೊಂದಿಗೆ ಸೇರಿಕೊಂಡು ಒಂದು ವರ್ಗದ ಪರವಾಗಿ ನಿಲ್ಲುತ್ತಾರೆ. ನಾವು ಯಾವಾಗಲೂ ವಿರೋಧ ಪಕ್ಷ ಎನ್ನುತ್ತಾರೆ. ಈ ಧೋರಣೆ ಏಕೆ? ಯಾವುದು ಸರಿಯಾಗಿದೆಯೋ ಅದನ್ನು ಸರಿ ಎನ್ನಿ, ತಪ್ಪಾಗಿದ್ದರೆ ದಾಖಲೆ ಸಹಿತ ನೇರವಾಗಿ ಸರ್ಕಾರಕ್ಕೆ ಹೇಳಬೇಕು. ನಾನು ದೆಹಲಿಯಲ್ಲಿದ್ದಾಗ ಪತ್ರಕರ್ತರೊಬ್ಬರು ಬೆಳಗ್ಗೆ ಮಂತ್ರಿಯೊಬ್ಬರ ಮನೆಗೆ ಹೋಗಿ ಸಲಹೆ ಕೊಡುತ್ತಿದ್ದರು. ಮಧ್ಯಾಹ್ನ ನಮ್ಮ ಮನೆ ಪಕ್ಕದಲ್ಲಿದ್ದ ಕ್ರೀಡಾ ಇಲಾಖೆಗೆ ಸಂಬಂಧಿಸಿದ ಮುಖ್ಯಸ್ಥರ ಮನೆಗೆ ಬಂದು ಮಂತ್ರಿ ವಿರುದ್ಧವಾಗಿ ಮಾತನಾಡುತ್ತಿದ್ದರು. ಇದರ ಪರಿಣಾಮ ಏನಾಗುತ್ತದೆ?.

ಅಧ್ಯಾತ್ಮದ ಬಗ್ಗೆಯೂ ಕೂಡ ಹಲವು ಪತ್ರಕರ್ತರು ಮಾತನಾಡುತ್ತಾರೆ. ದೇವರಿಲ್ಲ ಎನ್ನುತ್ತಾರೆ. ಆದರೆ ಅವರು ವಿಜ್ಞಾನವನ್ನು ಎಷ್ಟು ಅಧ್ಯಯನ ಮಾಡಿದ್ದಾರೆ. ನಾಟಕ ಇರುವುದೇ ಸಮಾಜದಲ್ಲಿ ಕ್ರಾಂತಿ ಮಾಡಲು ಎಂದು ಹಲವರು ಹೇಳುತ್ತಾರೆ. ಆದರೆ ನಾಟಕ ಎನ್ನುವುದು ಸಾಹಿತ್ಯ, ಸಂಗೀತ, ನೃತ್ಯದಂತೆ ಒಂದು ಕಲೆಯಷ್ಟೇ. ಕಲೆಗೆ ರಸ, ಧ್ವನಿ, ಔಚಿತ್ಯ ಎಂಬ ಮೂರು ತತ್ವಗಳಿವೆ. ನಾವು ಮಾತನಾಡುವುದೆಲ್ಲಾ ಧ್ವನಿಪೂರಕವಾಗಿರಬೇಕು. ಬೈಗುಳವೂ ಔಚಿತ್ಯಪೂರ್ಣವಾಗಿರಬೇಕು. ಮಾತು, ಬರವಣಿಗೆಯಲ್ಲೂ ಒಂದು ಸಂಸ್ಕೃತಿ ಇರಬೇಕು. ಆದರೆ ಅದನ್ನು ಮೀರಿ ಹೋಗುತ್ತಿದೆ. ಇದನ್ನೆಲ್ಲಾ ಒಂದು ಹದಕ್ಕೆ ತರುವ ಕರ್ತವ್ಯ ಪತ್ರಕರ್ತರದ್ದು. ಓದುವವರಲ್ಲಿ ಶೇ.10ರಷ್ಟು ಮಂದಿ ಮಾತ್ರ ಪುಸ್ತಕ ಓದಿದರೆ ಶೇ.90 ಜನ ಪತ್ರಿಕೆ ಓದುತ್ತಾರೆ. ಇದನ್ನು ಅರಿತು ನಡೆದುಕೊಳ್ಳಬೇಕು.

ಸೃಷ್ಟಿಯ ಆಶಯಗಳಿಗೆ ಪೂರಕವಾಗಿ ಸಾಗುವುದೇ ಸುರಕ್ಷಿತ ಭವಿಷ್ಯಕ್ಕೆ ದಾರಿ...

ಸೃಷ್ಟಿಯ ಸಂದೇಶ

ವಿಶ್ವದ ಪ್ರತಿಯೊಂದು ವಸ್ತುವಿಗೂ ಅದರದ್ದೇ ಆದ ವಿಶಿಷ್ಟ ನಿಯಮಗಳಿವೆ. ಆ ನಿಯಮಗಳಿಗನುಸಾರವಾಗಿಯೇ ಸಕಲ ವಸ್ತುಗಳೂ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದೆ.

ಒಂದು ಪರಮಾಣುವನ್ನೇ ತೆಗೆದುಕೊಳ್ಳಿ, ಅದು, ಒಂದಿಷ್ಟೂ ಶಕ್ತಿಯನ್ನು ವ್ಯಯ ಮಾಡದೇ ತನ್ನ ಕೇಂದ್ರದ ಸುತ್ತ, ದೀರ್ಘವೃತ್ತದಲ್ಲಿ ಪರಿಭ್ರಮಿಸುವ ಎಲೆಕ್ಟ್ರಾನ್‌ಗಳು, ಇಲ್ಲಿ ಜಲಜನಕದ ಪರಮಾಣುವಿಗಿರುವ ನಿಯಮಗಳು ಆಮ್ಲಜನಕದ ಪರಮಾಣುವಿಗಿಲ್ಲ; ಬಂಗಾರವೇ ಬೇರೆ, ಪಾದರಸವೇ ಬೇರೆ! ಮೂಲ ಧಾತುಗಳು ಒಂದಕ್ಕೊಂದು ಸೇರಿ ಅಣುಗಳು, ಅವುಗಳು ಪರಸ್ಪರ ಕಲೆತು ಆಗುವುದೇ ಸಂಯುಕ್ತ ರಾಸಾಯನಗಳು, ಇಲ್ಲಿಯೂ ನೀರಿಗಿರುವ ಭೌತಿಕ–ರಾಸಾಯನಿಕ ಗುಣಗಳು ಉಪ್ಪಿಗಿಲ್ಲ; ಕಲ್ಲಿನ ನಡವಳಿಕೆ ಕಬ್ಬಿಣಕ್ಕಿಲ್ಲ!

ಮೇಲ್ನೋಟಕ್ಕೆ ಯಾವೊಂದು ವಸ್ತುವಿಗೂ ಮತ್ತೊಂದು ವಸ್ತುವಿನೊಡನೆ ಸಂಬಂಧವಿಲ್ಲ. ಒಂದು ವಸ್ತುವಿಗಿರುವ ಗುಣವಿಶೇಷಗಳು ಮತ್ತೊಂದಕ್ಕಿರುವುದಿಲ್ಲ. ಆದರೆ, ಪ್ರತಿಯೊಂದು ದ್ರವ್ಯವೂ ಮತ್ತೊಂದರೊಂದಿಗೆ ಯಾವುದೋ ಅವಿನಾಭಾವ ಸಂಬಂಧವಿದೆಯೇನೋ ಎಂಬಂತೆ, ಒಂದಕ್ಕೊಂದು ಹೊಂದಿಕೊಂಡು, ಒಂದಕ್ಕೊಂದು ಪೂರಕವಾಗಿ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತವೆ.

ಅದೇ ರಚನಾಕ್ರಮವನ್ನು ನೀವು ನಮ್ಮ ಸೌರಮಂಡಲದಲ್ಲಿಯೂ ಕಾಣುವಿರಿ, ಸೂರ್ಯನನ್ನು ಎಡೆಬಿಡದೆ ಪರಿಭ್ರಮಿಸುತ್ತಿರುವ ಗ್ರಹಗಳಿವೆ; ಅವುಗಳಲ್ಲಿ ಒಂದೊಂದು ಗ್ರಹಕ್ಕೂ ಅದರದ್ದೇ ನಿರ್ದಿಷ್ಟ ಪಥ. ಅಂತೆಯೇ ಉಪಗ್ರಹಗಳಿಗೆ ಈ ಗ್ರಹಗಳನ್ನು ಸುತ್ತುವ ಕಾಯಕ! ಎಲ್ಲಿಯೂ, ಒಂದಿಷ್ಟೂ ತಪ್ಪಿಲ್ಲದೆ ನಡೆಯುವ ಅತ್ಯಂತ ಕ್ರಮಬದ್ಧವಾದ, ನಿರಂತರ ಕಾರ್ಯ! ನಮ್ಮ ಭೂಮಿಯೂ ದಿನಕ್ಕೊಂದು ಬಾರಿ ತನ್ನ ಅಕ್ಷದಲ್ಲಿ ತಿರುಗಿದರೆ, ವರ್ಷಕ್ಕೊಂದು ಬಾರಿ ಸೂರ್ಯನ ಸುತ್ತ ಪರಿಭ್ರಮಿಸುತ್ತದೆ. ಇದರೊಂದಿಗೆ ಕರಾರುವಕ್ಕಾಗಿ ಪುನರಾವರ್ತಿಸುವ ವಿವಿಧ ಋತುಗಳು, ಮಳೆ, ಬಿಸಿಲು, ಚಳಿಗಾಲಗಳು! ಎಲ್ಲದರಲ್ಲಿಯೂ ಅಬ್ಬಾ... ಎಂತಹ ಶಿಸ್ತು!





ಸೃಷ್ಟಿಯಲ್ಲಿರುವ ನಿರ್ಜೀವ ವಸ್ತುಗಳಿಗೇ ಇನಿತು ನಿಯಮಗಳಿರುವಾಗ ಇನ್ನು ಭೂಮಿಯಲ್ಲಿರುವ ಜೀವಸಂಕುಲಗಳಿಗೆ ನಿಯಮಗಳಿರಬೇಡವೆ? ಭೂಮಿಯ ಮೇಲೆ ವಾಸಿಸುವ ಸಾವಿರಾರು ಜಾತಿಯ ಗಿಡ–ಮರ–ಬಳ್ಳಿಗಳು, ಪ್ರಾಣಿ–ಪಕ್ಷಿಗಳು, ಜಲಚರಗಳು, ಇವೆಲ್ಲದರ ಜೀವನ ಚಕ್ರಗಳೂ ವ್ಯವಸ್ಥಿತ ರೂಪದಲ್ಲಿಯೇ ಇರುತ್ತವೆ. ಪ್ರತಿಯೊಂದು ಜೀವಿಯ ಆಕಾರ–ಆಹಾರ–ವಿಹಾರವೂ ವೈವಿಧ್ಯಮಯ. ಈ ಸಂಕೀರ್ಣ ವ್ಯವಸ್ಥೆಯಲ್ಲಿ ಒಂದು ಜೀವಿ, ಮತ್ತೊಂದು ಜೀವಿಗೆ ಆಧಾರ; ಒಂದು ಮತ್ತೊಂದರ ಆಹಾರ! ಹೀಗೆ ಒಂದಕ್ಕೊಂದು ವೈದೃಷ್ಯ, ವೈರುಧ್ಯ, ವೈರತ್ವಗಳ ನಡುವೆಯೂ ಎಲ್ಲ ಜೀವಿಗಳು ಪೃಥ್ವಿಯ ಮೇಲೆ ಒಗ್ಗಟ್ಟಾಗಿ ನಡೆಸುತ್ತಿರುವ ಸಹಬಾಳ್ವೆ, ಸಾಮರಸ್ಯ, ಸಹಭಾಗಿತ್ವ –ಇವೆಲ್ಲವೂ ಪ್ರಕೃತಿಯು ನಮಗೆ ನಿಶ್ಶಬ್ದವಾಗಿ ಕಲಿಸುತ್ತಿರುವ ಪಾಠ!

ಎಲ್ಲ ಜೀವಿಗಳ ಜೀವನಕ್ರಮದಲ್ಲಿಯೂ ಆವರ್ತನವನ್ನು ಕಾಣುತ್ತೇವೆ. ಹೀಗೆ ಪುನರಾವರ್ತಿಸುವ ಪ್ರಕೃತಿಯ ತಾಳಕ್ಕೆ ಎಲ್ಲ ಜೀವಿಗಳೂ ಶ್ರುತಿಬದ್ಧವಾಗಿ ಹೆಜ್ಜೆ ಹಾಕುತ್ತಾ ಆ ಮೂಲಕ ವಿಕಾಸ ಹೊಂದುತ್ತಿವೆ. ಭೂಮಿಯ ರಂಗಮಂಚದ ಮೇಲೆ ನಡೆಯುತ್ತಿರುವ ಸೃಷ್ಟಿ–ಸ್ಥಿತಿ–ಲಯಗಳ ಈ ಅದ್ಭುತ ಪ್ರಕ್ರಿಯೆಯೇ ಒಂದು ಅನಿರ್ವಚನೀಯ ಅನುಭವ; ಕಣ್ಣುಗಳಿಗೆ ಸೌಂದರ್ಯದ ಹಬ್ಬ: ಕಿವಿಗಳಿಗೆ ಇಂಪಾದ ನಾದಮಯ ಸಂಗೀತ!

ನಿಸರ್ಗದಲ್ಲಿ ನಡೆಯುತ್ತಿರುವ ಈ ಅಪೂರ್ವ ಹಾಗೂ ನಿಷ್ಕಳಂಕ ಕಾರ್ಯಗತಿಗೆ ಅಡ್ಡಗಾಲು ಹಾಕುವ, ಇಲ್ಲಿ ನಡೆಯುತ್ತಿರುವ ಬಾಳಾಟಗಳನ್ನು ಏರುಪೇರು ಮಾಡುವ, ವಿಕೃತ ಮನಸ್ಥಿತಿ ಇರುವುದು ಮಾನವನಿಗೆ ಮಾತ್ರ ಈ ಪ್ರವೃತ್ತಿ ಮುಂದೆ ತನ್ನ ಅಸ್ತಿತ್ವಕ್ಕೇ ಮಾರಕ ಎಂದು ತಿಳಿದೂ, ಪ್ರಕೃತಿಯು ಆಗಾಗ್ಗೆ ನೀಡುತ್ತಿರುವ ಎಚ್ಚರಿಕೆಯ ಗಂಟೆಗಳನ್ನು ಕೇಳಿಯೂ, ತನ್ನನ್ನು ತಾನು ತಿದ್ದಿಕೊಳ್ಳದಿದ್ದಲ್ಲಿ ಮಾನವನಿಗೆ ಭವಿಷ್ಯವಿಲ್ಲ. ಪರಿಪೂರ್ಣತೆ, ನಿರಂತರತೆ, ಪ್ರಾಮಾಣಿಕತೆ, ಸ್ಥಿರತೆ, ನಿಖರತೆ ಮತ್ತು ಅಖಂಡತೆ – ಈ ಆರು ತತ್ವಗಳ ಆಧಾರದ ಮೇಲೆ ಇಡೀ ವಿಶ್ವವು ನಡೆಯುತ್ತಿದೆ. ಈ ತತ್ವಗಳಿಗೆ 'ತಲೆಬಾಗಿ, ಸೃಷ್ಟಿಯ ಆಶಯಗಳಿಗೆ ಪೂರಕವಾಗಿ ನಡೆಯುವುದೇ ನಮ್ಮ ಭವಿಷ್ಯಕ್ಕೆ ದಾರಿ.

– ಡಾ. ಎಸ್. ವಿ. ನರಸಿಂಹನ್
ವಿರಾಜಪೇಟೆ, ದಕ್ಷಿಣ ಕೊಡಗು.
9480730884 drsvnarsimhan@gmail.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿವಿಧ ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ



ಮೈಸೂರು, ಅ.7(ಜಿಎ)–ದೇಶದಲ್ಲಿ ದಿನನಿತ್ಯ ಬಳಕೆ ವಸ್ತುಗಳ ಬೆಲೆ ಏರಿಕೆ ಖಂಡಿಸಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಜಿಲ್ಲಾ ಸಮಿತಿಯ ವತಿಯಿಂದ ನಗರದ ಗಾಂಧಿಚೌಕದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ಪ್ರತಿ ಕಂದಾಯ ವಿಭಾಗಗಳಲ್ಲಿ ಜಯದೇವ ಮಾದರಿಯ ಹೃದ್ರೋಗ ಮತ್ತು ಕಿದ್ವಾಯಿ ಮಾದರಿ ಕ್ಯಾನ್ಸರ್ ಆಸ್ಪತ್ರೆ ಹಾಗೂ ನಿಮ್ಹಾನ್ಸ್ ಮಾದರಿಯ ಮನೋರೋಗ ಚಿಕಿತ್ಸಾ ಆಸ್ಪತ್ರೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಬೇಕು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶ ಸರ್ಕಾರ ಜಾರಿಗೊಳಿಸಿರುವ ಮಾದರಿಯಲ್ಲಿ ಖಾಯಂಗೊಳಿಸುವ ಪ್ರಕ್ರಿಯೆಯನ್ನು ಕೈಗೊಳ್ಳಬೇಕು. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆರಿಸಬೇಕು, ಹಾಗೂ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಿ ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಬೇಕು ಎಂದು ಆಗ್ರಹಿಸಿದರು.

ಮಹಿಳಾ ದೌರ್ಜನ್ಯಗಳನ್ನು ತಡೆಯಲು ಕಠಿಣ ಕಾನೂನು ಕ್ರಮಗಳನ್ನು ಜಾರಿಗೊಳಿಸಬೇಕು. ಮೈಸೂರಿನಲ್ಲಿ ಪ್ರತ್ಯೇಕ ಕ್ರೀಡಾ ವಿಶ್ವವಿದ್ಯಾನಿಲಯ ಸ್ಥಾಪನೆ, ಸ್ಲಂ ಪ್ರದೇಶಗಳಿಗೆ ಶ್ರಮಿಕ ನಿವಾಸ ಪ್ರದೇಶ ಎನ್ನುವ ನಾಮಕರಣ ಮಾಡಿ ನಿವೇಶನಗಳ ಹಕ್ಕುಪತ್ರಗಳನ್ನು ನೀಡಬೇಕು. ಜೊತೆಗೆ ವಸತಿ ಸಮಸ್ಯೆಗೆ ತೊಡಕಾಗಿರುವ ಅರಣ್ಯ ಕಾಯಿದೆಗಳ ವಿಧಿಗಳನ್ನು ತಿದ್ದುಪಡಿಗೊಳಿಸಬೇಕು. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಬೆಲೆ ಏರಿಕೆ ನಿಯಂತ್ರಣ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಅಂತರ ರಾಜ್ಯ ನೀರು ಹಂಚಿಕೆಯ ವಿಷಯವಾಗಿ ರಾಜ್ಯ ರಾಜ್ಯಗಳ ಜನರ ನಡುವ ಸಂಘರ್ಷಣೆಗಳು ಉಂಟಾಗುತ್ತಿದ್ದು, ನದಿ ನೀರು ಹಂಚಿಕೆಯ ವಿಷಯವಾಗಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಮರ್ಪಕ ನೀರು ಹಂಚಿಕೆಯ ಕಾನೂನು ಜಾರಿ ಮಾಡಬೇಕು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಜಾರಿ ಮಾಡಿದ ನಂತರ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಲು ಬಸ್ ಸೌಕರ್ಯದ ಅಭಾವ ಸೃಷ್ಟಿಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ಬಸ್ ವ್ಯವಸ್ಥೆಯನ್ನು ಮಾಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಸಹ ಕಾರ್ಯದರ್ಶಿಗಳಾದ ಸೋಮರಾಜ್ ಅರಸ್, ರೇವಣ್ಣ ನಾ.ದಿವಾಕರ್, ಸದಸ್ಯರಾದ ರಾಮು, ದೇವದಾಸ್, ಜಗನ್ನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅಕ್ಟೋಬರ್‌ನಲ್ಲಿ ಪಾರಂಪರಿಕ ನಡಿಗೆ ರದ್ದು

ಮೈಸೂರು, ಅ.7(ಆರ್‌ಕೆ)–ಪ್ರತೀ ತಿಂಗಳ ಮೊದಲ ಶನಿವಾರ ನಡೆಸಲುದ್ದೇಶಿಸಿದ್ದ ಪಾರಂಪರಿಕ ನಡಿಗೆ ಇಂದಿನ (ಅಕ್ಟೋಬರ್ ತಿಂಗಳ) ಕಾರ್ಯಕ್ರಮ ರದ್ದಾಗಿದೆ.

ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಆಯೋಜಿಸಿರುವ ಕಾರ್ಯಕ್ರಮದ ಮುಂದುವರಿದ ಪಾರಂಪರಿಕ ನಡಿಗೆಗೆ ಕೇವಲ ಇಬ್ಬರ ಹೆಸರು ಮಾತ್ರ ನೋಂದಣಿಯಾಗಿದ್ದರಿಂದ ಇಂದು ಬೆಳಗ್ಗೆ ನಡೆಯಬೇಕಿದ್ದ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕರು, ಸಂಘ–ಸಂಸ್ಥೆಗಳು, ಶಾಲಾ–ಕಾಲೇಜು, ಕೈಗಾರಿಕೋದ್ಯಮಿಗಳು, ಹೋಟೆಲ್ ಉದ್ಯಮಿಗಳು, ಪ್ರವಾಸೋದ್ಯಮ ಇಲಾಖೆ ಸೇರಿದಂತೆ ವಿವಿಧ ಕ್ಷೇತ್ರದ ವೃತ್ತಿನಿರತರಿಗೆ ಕಾರ್ಯಕ್ರಮದ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಮಾಹಿತಿ ನೀಡದಿರುವುದರಿಂದ ಪಾರಂಪರಿಕ ನಡಿಗೆಗೆ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ಬರಲು ಪ್ರಮುಖ ಕಾರಣ ಎನ್ನಲಾಗಿದೆ.

ಅದೇ ರೀತಿ ತಿಂಗಳ ಕಡೇ ಶನಿವಾರ ಹೆರಿಟೇಜ್ ಟಾಕ್ ಕಾರ್ಯಕ್ರಮ ಆರಂಭಿಸಿರುವ ಪಾರಂಪರಿಕ ಇಲಾಖೆಗೆ ಆರಂಭದಲ್ಲಿ ಉತ್ತಮ ಪ್ರತಿಕ್ರಿಯೆ ಬಂದಿತ್ತಾದರೂ, ಮುಂದಿನ ಈ ಕಾರ್ಯಕ್ರಮಕ್ಕೂ ವ್ಯಾಪಕ ಪ್ರಚಾರ ಮಾಡದಿದ್ದಲ್ಲಿ ಹೆಚ್ಚು ಜನರನ್ನು ನಿರೀಕ್ಷಿಸಲಾಗದು ಎಂದು ಹೇಳಲಾಗಿದೆ.

ಏಷ್ಯನ್ ಗೇಮ್ಸ್, ಮಳೆಯಿಂದಾಗಿ ಫೈನಲ್ ಪಂದ್ಯ ರದ್ದು: ಭಾರತಕ್ಕೆ ಚಿನ್ನ

ಹಾಂಗ್ ಝೌ, ಅ.7– ಭಾರತ–ಅಫ್ಘಾನಿಸ್ತಾನ್ ನಡುವಣ ಏಷ್ಯನ್ ಗೇಮ್ಸ್ ಕ್ರಿಕೆಟ್ ಫೈನಲ್ ಪಂದ್ಯ ಮಳೆಯಿಂದಾಗಿ ರದ್ದಾದರೂ ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನದೊಂದಿಗೆ ಫೈನಲ್ ಪ್ರವೇಶಿಸಿದ್ದ ಭಾರತಕ್ಕೆ ಚಿನ್ನದ ಪದಕ ಒಲಿದಿದೆ. ಇನ್ನು ಅಫ್ಘಾನಿಸ್ತಾನ್ ಬೆಳ್ಳಿ ಪದಕ ಗೆದ್ದರೆ, ಬಾಂಗ್ಲಾದೇಶ್ ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದೆ.

ಹ್ಯಾಂಗ್ ಝೌನ ಪಿಂಗ್‌ಫೆಂಗ್ ಕ್ಯಾಂಪಸ್ ಕ್ರಿಕೆಟ್ ಫೀಲ್ಡ್ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ರುತುರಾಜ್ ಗಾಯಕ್ವಾಡ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ್ 18.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 112 ರನ್ ಕಲೆ ಹಾಕಿದ್ದ ವೇಳೆ ಮಳೆ ಬರಲಾರಂಭಿಸಿತು. ಧಾರಾಕಾರವಾಗಿ ಸುರಿದ ಮಳೆಯಿಂದ ಮೈದಾನ ಸಂಪೂರ್ಣ ಒದ್ದೆಯಾಗಿದ್ದರಿಂದ ಪಂದ್ಯವನ್ನು ರದ್ದುಗೊಳಿಸಲು ಅಂಪೈರ್‌ಗಳು ನಿರ್ಧರಿಸಿದರು. ಅದರಂತೆ ಅಂತಿಮ ಹಣಾಹಣಿ ಮಳೆಗೆ ಆಹುತಿಯಾಯಿತು. ಹೀಗಾಗಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಭಾರತವನ್ನು ವಿಜಯಿ ಎಂದು ಘೋಷಿಸಲಾಯಿತು. ಈ ಮೂಲಕ ಏಷ್ಯನ್ ಗೇಮ್ಸ್ ಕ್ರಿಕೆಟ್‌ನಲ್ಲಿ ಭಾರತ ತಂಡ ಸ್ವರ್ಣ ಪದಕವನ್ನು ಗೆದ್ದುಕೊಂಡಿದೆ. ಇನ್ನು ರನ್ನರ್ ಅಪ್ ತಂಡ ಅಫ್ಘಾನಿಸ್ತಾನ್ ತಂಡವು ಬೆಳ್ಳಿ ಪದಕಕ್ಕೆ ಕೊರಳೊಡ್ಡಿದೆ.



ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಹಾಗೂ ಅಶೋಕ ಫುಟ್ಬಾಲ್ ಕ್ಲಬ್ ವತಿಯಿಂದ ಹಾರ್ಡ್ವಿಕ್ ಶಾಲೆಯ ಮೈದಾನದಲ್ಲಿ ಆಯೋಜಿಸಿದ್ದ ಫುಟ್ಬಾಲ್ ಪಂದ್ಯಾವಳಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಗರ ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಸಫಾರಿಗರಿಗೆ ಸಿಹಿ ಸುದ್ದಿ ನೀಡಿದ ಅರಣ್ಯ ಇಲಾಖೆ

ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಹೋಗುವವರಿಗೆ ವಿಮಾ ಸುರಕ್ಷೆ

ವನ್ಯಜೀವಿಗಳಿಂದ ಆಕಸ್ಮಿಕ ದಾಳಿಯಿಂದಾಗುವ ಅನಾಹುತಕ್ಕೆ ಪರಿಹಾರ ನೀಡಲು ಕ್ರಮ

ಮೈಸೂರು, ಅ.7(ಎಂಟಿವೈ)–ಮೈಸೂರು ಭಾಗದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದಲ್ಲಿ ಸಫಾರಿಗೆ ತೆರಳುವ ಪ್ರವಾಸಿಗರ ಸುರಕ್ಷತೆಗಾಗಿ ಅರಣ್ಯ ಇಲಾಖೆ ಕ್ರಮ ಕೈಗೊಂಡಿದ್ದು, ಸಫಾರಿ ಕೈಗೊಳ್ಳುವ ಪ್ರತಿಯೊಬ್ಬರಿಗೆ ತಲಾ 5 ಲಕ್ಷ ರೂ. ವಿಮೆ ಯೋಜನೆ ಜಾರಿಗೊಳಿಸಲಾಗಿದೆ.



ಹುಲಿ ಸಂರಕ್ಷಿತ ಪ್ರದೇಶ ಘೋಷಣೆಯಾಗಿ 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ದೇಶದುದ್ದಗಲಕ್ಕೂ ಇರುವ 53 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮೈಸೂರು, ಚಾಮರಾಜನಗರ ಜಿಲ್ಲಾ ವ್ಯಾಪ್ತಿಗೆ ಸೇರಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮೈಸೂರು–ಕೊಡಗು ಜಿಲ್ಲಾ ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಎರಡೂ ಅಭಯಾರಣ್ಯಗಳೂ ಕರ್ನಾಟಕ–ತಮಿಳುನಾಡು–ಕೇರಳ ಗಡಿವರೆಗೆ ವ್ಯಾಪ್ತಿಸಿದೆ. ರಾಜ್ಯ ಮಾತ್ರವಲ್ಲದೆ, ಹೊರ ರಾಜ್ಯ ಹಾಗೂ ವಿದೇಶಿಗರು ಈ ಅರಣ್ಯಗಳಲ್ಲಿ ಸಫಾರಿ ಮಾಡಲು ಬರುತ್ತಿದ್ದು, ಇದೀಗ ವಿಮಾ ಯೋಜನೆಯಿಂದ ಸಫಾರಿಗರಿಗೆ ಭದ್ರತೆ ಒದಗಿಸಿದಂತಾಗುತ್ತದೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಹುಲಿ ಹಾಗೂ ಆನೆಗಳನ್ನು ಹೊಂದಿರುವ ಬಂಡೀಪುರ ಅಭಯಾರಣ್ಯದಲ್ಲಿ ಮೇಲುಕಾಮನಹಳ್ಳಿ ಕ್ಯಾಂಪಸ್‌ನಿಂದ ಪ್ರತಿದಿನ ಬೆಳಗ್ಗೆ ಮತ್ತು ಮಧ್ಯಾಹ್ನ ಜಿಪ್ಸಿ, ಕ್ಯಾಂಪರ್ ಹಾಗೂ ಬಸ್ ಮೂಲಕ ಪ್ರವಾಸಿಗರನ್ನು ಸಫಾರಿಗೆ ಕರೆದೊಯ್ಯುವ ವ್ಯವಸ್ಥೆ ಇದೆ. ಪ್ರತಿವರ್ಷಕ್ಕೆ 1.40 ಲಕ್ಷದಿಂದ 1.50 ಲಕ್ಷ ಪ್ರವಾಸಿಗರು ಸಫಾರಿಗೆ ತೆರಳಲಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್‌ಗೆ ಅರಣ್ಯ ಇಲಾಖೆ ವತಿಯಿಂದ 80 ಸಾವಿರ ರೂ. ಪ್ರೀಮಿಯಂ ಮೊತ್ತ ಪಾವತಿಸಿ 1 ಕೋಟಿ ರೂ. ಮೊತ್ತದ ವಿಮೆ ಮಾಡಿಸಲಾಗಿದೆ. ಇದರಿಂದ ಸಫಾರಿ ವೇಳೆ ಏನಾದರು ಅನಾಹುತ ಸಂಭವಿಸಿದರೆ ಜೀವ ಹಾನಿಗೆ ತಲಾ 5 ಲಕ್ಷ ರೂ. ವಿಮಾ ಮೊತ್ತ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸೆ.23ರಿಂದ 2024ರ ಸೆ.22ರ ರಾತ್ರಿವರೆಗೂ ವಿಮೆ ಚಾಲ್ತಿಯಲ್ಲಿರುತ್ತದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಮೂರು ಸ್ಥಳದಲ್ಲಿ ಸಫಾರಿ ಕೇಂದ್ರಗಳಿದ್ದು, ಅದರಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರಕ್ಕೆ ಎಲ್ಲಿಲ್ಲದ ಬೇಡಿಕೆ. ಕಬಿನಿ ಹಿನ್ನೀರು ವ್ಯಾಪ್ತಿಯಲ್ಲಿನ ಸಫಾರಿ ವಲಯದಲ್ಲಿ ಕಪ್ಪು ಚಿರತೆ, ಹೆಚ್ಚಿನ ಸಂಖ್ಯೆಯ ಹುಲಿ, ಕಾಡಾನೆಗಳ ಹಿಂಡು ಒಳಗೊಂಡಂತೆ ಅಪಾರ ಸಂಖ್ಯೆಯ ವನ್ಯಜೀವಿಗಳ ದರ್ಶನವಾಗುವುದರಿಂದ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿ ಮಾಡಲು ವನ್ಯಜೀವಿ ಛಾಯಾಗ್ರಾಹಕರು ಮುಗಿ ಬೀಳುತ್ತಾರೆ. ಇದರೊಂದಿಗೆ ಹುಣಸೂರು ಸಮೀಪದ ವೀರನಹೊಸಳ್ಳಿ ಹಾಗೂ ಶ್ರೀಮಂಗಲ(ಕುಟ್ಟ) ಸಮೀಪ ನಾಣಚ್ಚಿ ಕೇಂದ್ರದಿಂದಲೂ ಸಫಾರಿ ಕರೆದೊಯ್ಯಲಾಗುತ್ತದೆ. ವರ್ಷಕ್ಕೆ 1.25 ಲಕ್ಷದಿಂದ 1.50 ಲಕ್ಷ ಪ್ರವಾಸಿಗರು ಸಫಾರಿಗೆ ತೆರಳಲಿದ್ದಾರೆ. ನಾಗರಹೊಳೆ ಕಚೇರಿ ವತಿಯಿಂದ ಮಾಡಿಸಲಾಗಿರುವ ವಿಮೆಯಲ್ಲಿ 70 ಸಾವಿರ ರೂ. ಪ್ರೀಮಿಯಂ ಮೊತ್ತ ಪಾವತಿಸಿ 1 ಕೋಟಿ ರೂ. ವಿಮೆ ಮಾಡಿಸಲಾಗಿದೆ. ಈ ವ್ಯಾಪ್ತಿಯಲ್ಲಿ ಸಫಾರಿ ವೇಳೆ ಅನಾಹುತ ಸಂಭವಿಸಿದರೆ ಪ್ರವಾಸಿಗರಿಗೆ ತಲಾ 5 ಲಕ್ಷ ರೂ. ವಿಮೆ ಬರುವಂತೆ ಕ್ರಮ ಕೈಗೊಳ್ಳಲಾಗಿದೆ ಈ ವಿಮೆಯು ಅ.4ರಿಂದ 2024ರ ಅ.3ರವರೆಗೆ ಚಾಲ್ತಿಯಲ್ಲಿರುತ್ತದೆ.

ಇತ್ತೀಚಿನ ದಿನಗಳಲ್ಲಿ ವಿವಿಧೆಡೆ ಸಫಾರಿ ವಾಹನಗಳನ್ನು ಕಾಡಾನೆಗಳು ಅಟ್ಟಾಡಿಸುತ್ತಿರುವ ಹಾಗೂ ಹುಲಿ ದಾಳಿಗೆ ಯತ್ನಿಸಿರುವ ಘಟನೆಗಳು ವರದಿಯಾಗಿರುವುದರಿಂದ ಸಫಾರಿ ಹೋಗುವವರಿಗೆ ವಿಮೆ ಸೌಲಭ್ಯ ಮಾಡಿಸಿರುವುದು ಸಮಾಧಾನ ತಂದಿತ್ತಿದೆ. ಈ ಹಿಂದೆ ಸಫಾರಿ ವೇಳೆ ಸಂಭವಿಸುವ ಅನಾಹುತಗಳಿಗೆ ಯಾವುದೇ ಪರಿಹಾರದ ಮೊತ್ತ(ಸಿಬ್ಬಂದಿ ಹೊರತುಪಡಿಸಿ) ಲಭಿಸುತ್ತಿರಲಿಲ್ಲ. ಆದರೆ, ಇದೀಗ ಸಫಾರಿ ಬಯಸುವವರಿಗೆ ಧೈರ್ಯ ತುಂಬಿದಂತಾಗಿದೆ.

ಸಫಾರಿಗರ ಹಿತ ಕಾಯಲು ಕ್ರಮ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆ ಹೊಂದಿದೆ. ದೇಶದಲ್ಲೇ ಅತಿ ಹೆಚ್ಚು ಆನೆ ಹಾಗೂ ದೇಶದಲ್ಲೇ ಅತಿ ಹೆಚ್ಚು ಹುಲಿ ಹೊಂದಿರುವ ಎರಡನೇ ಅರಣ್ಯ ಎಂಬ ಹೆಗ್ಗಳಿಕೆಗೆ ಬಂಡೀಪುರ ಪಾತ್ರವಾಗಿದೆ. ಬಂಡೀಪುರ ಅರಣ್ಯದಲ್ಲಿ ನಡೆಸುತ್ತಿರುವ 'ಯುವ ಮಿತ್ರ' ಕಾರ್ಯಕ್ರಮಕ್ಕೆ ಹೆಚ್ಚಿನ ಮನ್ನಣೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಸಫಾರಿಗೆ ಬರುವವರ ಹಿತ ಕಾಯಲು ವಿಮಾ ವ್ಯವಸ್ಥೆ ಜಾರಿಗೊಳಿಸಲಾಗಿದೆ.

– ಡಾ. ಪಿ.ರಮೇಶ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಆನ್‌ಲೈನ್ ವಂಚಕರ ಮಾತಿನ ಮೋಡಿಗೆ ಮರುಳಾಗಿ ಲಕ್ಷ... ಲಕ್ಷ... ಕಳೆದುಕೊಂಡ 'ಮಹನೀಯರು'



ಮೈಸೂರು, ಅ.7–ಆನ್‌ಲೈನ್ ಮೂಲಕ ವಂಚಕರ ಜಾಲಕ್ಕೆ ಸಿಲುಕಿ ಆರು ಮಂದಿ ಲಕ್ಷ ಲಕ್ಷ ಹಣ ಕಳೆದುಕೊಂಡಿದ್ದಾರೆ.

7.55 ಲಕ್ಷ ವಂಚನೆ: ಮೈಸೂರಿನ ಕೆ.ಆರ್.ಮಿಲ್ ಕಾಲೋನಿ ನಿವಾಸಿಯಾಗಿರುವ ಸರ್ಕಾರಿ ಅಧಿಕಾರಿ ಜಿ.ಬಾಲವಿಘ್ನೇಶ್ (28) ಹೋಟೆಲ್ ರಿವ್ಯೂನಿಂದ ಹಣಗಳಿಸಲು ಹೋಗಿ ವಂಚನೆಗೊಳಗಾಗಿದ್ದಾರೆ. ಟೆಲಿಗ್ರಾಂ ಐಡಿ ಮೂಲಕ ಇವರನ್ನು ಸಂಪರ್ಕಿಸಿದ ವಂಚಕರು ಹೋಟೆಲ್‌ಗಳ ರಿವ್ಯೂ ಮಾಡುವಂತೆ ತಿಳಿಸಿದ್ದಾರೆ. ಅದರಂತೆ ಅವರು ಮೊದಲಿಗೆ ರಿವ್ಯೂ ಮಾಡಿದಾಗ ಅವರ ಖಾತೆಗೆ 1000 ರೂ. ಜಮೆ ಮಾಡಲಾಗಿದೆ. ನಂತರ ಹಣ ಹೂಡಿಕೆ ಮಾಡಿ ರಿವ್ಯೂ ಮಾಡಿದರೆ ದಿನಕ್ಕೆ 3 ಸಾವಿರ ರೂ. ಸಂಪಾದಿಸಬಹುದು ಎಂದು ನಂಬಿಕೆ ಹುಟ್ಟಿಸಿದ್ದರಿಂದ ಅವರು ಹಂತ ಹಂತವಾಗಿ 7,55,568 ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ.

ಮಹಿಳೆಗೆ ಮಂಕುಬೂದಿ!: ಮತ್ತೊಂದು ಪ್ರಕರಣದಲ್ಲಿ ಗೂಗಲ್ ರೇಟಿಂಗ್ ನೀಡಿದರೆ ಹಣ ದೊರೆಯುತ್ತದೆ ಎಂದು ನಂಬಿಸಿ ಮಹಿಳೆಯೋರ್ವರಿಗೆ 8.29 ಲಕ್ಷ ರೂ. ವಂಚಿಸಲಾಗಿದೆ. ಶಿವರಾತ್ರೀಶ್ವರ ನಗರ ನಿವಾಸಿ ಎಸ್.ವೇದ (29) ಅವರಿಗೆ 8576844553 ಸಂಖ್ಯೆಯಿಂದ ವಾಟ್ಸಾಪ್ ಮೆಸೇಜ್ ಮಾಡಿದ ವಂಚಕರು ಗೂಗಲ್ ರೇಟಿಂಗ್ ನೀಡಿದರೆ ಹಣ ಸಂಪಾದನೆ ಮಾಡಬಹುದು ಎಂದು ತಿಳಿಸಿದ್ದಾರೆ. ಮೊದಲಿಗೆ ಅವರು ಒಂದು ಟಾಸ್ಕ್ ಪೂರೈಸಿದಾಗ ನೂರು ರೂ.ಗಳನ್ನು ಅವರ ಖಾತೆಗೆ ವರ್ಗಾವಣೆ ಮಾಡಿ ಹಣ ಹೂಡಿಕೆ ಮಾಡಿ ರೇಟಿಂಗ್ ನೀಡಿದರೆ ಹೆಚ್ಚಿನ ಹಣ ದೊರೆಯುತ್ತದೆ ಎಂದು ಹೇಳಿದ ಹಿನ್ನೆಲೆಯಲ್ಲಿ ವೇದ ಅವರು 5 ಸಾವಿರ ರೂ. ಹೂಡಿಕೆ ಮಾಡಿದಾಗ ಅವರಿಗೆ ಲಾಭಾಂಶ ಬಂದಿರುವುದಾಗಿ ತಿಳಿಸಲಾಗಿದೆ. ಆ ಹಣವನ್ನು ಹಿಂಪಡೆಯಲು ಮತ್ತೆ ಹೂಡಿಕೆ ಮಾಡಬೇಕೆಂದು ಒತ್ತಾಯಿಸಿ 8.29 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಮಾತಿಗೆ ಮರುಳಾದ ಮಹಿಳೆಯಿಂದ 11.63 ಲಕ್ಷ ಸುಲಿಗೆ

ಆನ್‌ಲೈನ್ ಮೂಲಕ ಟಾಸ್ಕ್ ರಿವ್ಯೂ ಮಾಡಿದರೆ ಹೆಚ್ಚಿನ ಹಣ ದೊರೆಯುತ್ತದೆ ಎಂದು ನಂಬಿಸಿ ಮಹಿಳೆಗೆ 11.63 ಲಕ್ಷ ರೂ. ವಂಚಿಸಲಾಗಿದೆ.

ಶ್ರೀಮಂಗಲ ಗ್ರಾಮದ ಕೆ.ಎ.ಭಾವನಾ(28) ವಂಚನೆಗೊಳಗಾದವರಾಗಿದ್ದು, ಇವರಿಗೆ 2 ಟೆಲಿಗ್ರಾಂ ಐಡಿಗಳಿಂದ ಕೆಲವೊಂದು ಟಾಸ್ಕ್‌ಗಳನ್ನು ನೀಡಿದ್ದಾರೆ. ಹಣ ಪಾವತಿಸಿ ಟಾಸ್ಕ್ ಪೂರೈಸಿದರೆ, ಹೆಚ್ಚಿನ ಲಾಭ ಬರುತ್ತದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಅವರು ಮೊದಲಿಗೆ 3 ಸಾವಿರ ರೂ. ಹೂಡಿಕೆ ಮಾಡಿ, ಟಾಸ್ಕ್ ಪೂರೈಸಿದಾಗ ಅವರ ಖಾತೆಗೆ 7,800 ರೂ. ಜಮೆ ಮಾಡಲಾಗಿದೆ. ಇದನ್ನು ನಂಬಿದ ಭಾವನಾ, ಹಂತ ಹಂತವಾಗಿ 11,63,594 ರೂ. ವರ್ಗಾವಣೆ ಮಾಡಿ ಮೋಸ ಹೋಗಿದ್ದಾರೆ.

ವರ್ತಕನಿಗೆ ವಂಚನೆ: ಇನ್ಶೂರೆನ್ಸ್ ಪಾಲಿಸಿಯಲ್ಲಿ ಪಾನ್ ನಂಬರ್ ತಪ್ಪಾಗಿದೆ ಎಂದು ತಿಳಿಸಿ, ಅದನ್ನು ಸರಿಪಡಿಸುವುದಾಗಿ ನಂಬಿಸಿ ವರ್ತಕರೊಬ್ಬರಿಗೆ 2.35 ಲಕ್ಷ ರೂ. ವಂಚಿಸಲಾಗಿದೆ.

ಸಿದ್ಧಾರ್ಥನಗರ ನಿವಾಸಿ ಯಶ್ ಕೆಕೊಠಾರಿ(23) ವಂಚನೆಗೊಳಗಾದವರಾಗಿದ್ದು, 8929026082 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತಾನು ಇನ್ಶೂರೆನ್ಸ್ ಕಂಪನಿಯಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿದ್ದಲ್ಲದೇ, ನಿಮ್ಮ ಪಾಲಿಸಿಯಲ್ಲಿ ಪಾನ್ ನಂಬರ್ ತಪ್ಪಾಗಿದ್ದು, ಅದನ್ನು ಸರಿಪಡಿಸಲು 78,569 ರೂ. ಪಾವತಿಸಬೇಕೆಂದು ತಿಳಿಸಿ, ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ವಿವಿಧ ಕಾರಣಗಳನ್ನು ನೀಡಿ ಹಂತ ಹಂತವಾಗಿ ಒಟ್ಟು 2,35,707 ರೂ. ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಪಾಲಿಸಿ ಬಗ್ಗೆ ವಿಚಾರಿಸಲು ಯಶ್ ಅವರು ಕರೆ ಮಾಡಿದಾಗ ಆತ ಕರೆ ಸ್ವೀಕರಿಸದ ಹಿನ್ನೆಲೆಯಲ್ಲಿ ಇನ್ಶೂರೆನ್ಸ್ ಕಂಪನಿಯಲ್ಲಿ ವಿಚಾರಣೆ ಮಾಡಿದಾಗ ತಾವು ಮೋಸ ಹೋಗಿರುವುದು ಅರಿವಾಗಿ ಅವರು ಮೈಸೂರು ನಗರ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಉದ್ಯೋಗ ಕೊಡಿಸುವುದಾಗಿ ವಂಚನೆ: ಕೆನಡಾದಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ವ್ಯಕ್ತಿಯೋರ್ವರಿಗೆ 2.70 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಲಾಗಿದೆ.

ಮಡಿಕೇರಿ ತಾಲೂಕು ಕಟಕೇರಿ ಗ್ರಾಮದ ಸಿ.ಇ.ಜೀವನ್(27) ವಂಚನೆಗೊಳಗಾದವರಾಗಿದ್ದು, ವಿದೇಶದಲ್ಲಿ ಉದ್ಯೋಗವಿರುವುದಾಗಿ ಫೇಸ್‌ಬುಕ್‌ನಲ್ಲಿ ಜಾಹೀರಾತು ನೋಡಿದ ಇವರು, ತನಗೆ ಉದ್ಯೋಗ ಬೇಕಾಗಿದೆ ಎಂದು ಮೆಸೆಂಜರ್ ಮೂಲಕ ತಿಳಿಸಿದ್ದಾರೆ. ನಂತರ ವಿದೇಶದ ಮೊಬೈಲ್ ಸಂಖ್ಯೆಯೊಂದರ ಮೂಲಕ ಇವರನ್ನು ಸಂಪರ್ಕಿಸಿದ ವಂಚಕರು, ಕೆನಡಾದಲ್ಲಿ ಉದ್ಯೋಗ ಕೊಡಿಸುವುದಾಗಿ ಅದಕ್ಕೆ ವೀಸಾ ಪಡೆಯಲು 2.70 ಲಕ್ಷ ರೂ. ಪಾವತಿಸುವಂತೆ ತಿಳಿಸಿ ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓಟಿಪಿ ನೆಪದಲ್ಲಿ ರೈತನಿಗೆ ಮೋಸ: ಮತ್ತೊಂದು ಪ್ರಕರಣದಲ್ಲಿ ಬ್ಯಾಂಕ್‌ನ ಜೂನಿಯರ್ ಮ್ಯಾನೇಜರ್ ಕರೆ ಮಾಡುವುದಾಗಿ ತಿಳಿಸಿ, ಎಟಿಎಂನ ಓಟಿಪಿ ಪಡೆದು ರೈತನಿಗೆ 4,49,500 ರೂ. ವಂಚಿಸಲಾಗಿದೆ. ಕುಟ್ಟ ಸಮೀಪದ ಚೂರಿಕಾಡು ಗ್ರಾಮದ ರೈತ ನರುಣ್ ಚೆಂಗಪ್ಪ(58) ವಂಚನೆಗೊಳಗಾದವರಾಗಿದ್ದು, ಅ.5ರಂದು ಸಂಜೆ ತಾನು ಕೆನರಾ ಬ್ಯಾಂಕ್‌ನ ಜೂನಿಯರ್ ಮ್ಯಾನೇಜರ್ ಎಂದು ಪರಿಚಯಿಸಿಕೊಂಡು ಕರೆ ಮಾಡಿದ ವ್ಯಕ್ತಿ, ಬ್ಯಾಂಕ್ ಖಾತೆ ಕೆವೈಸಿ ಅಪ್‌ಡೇಟ್ ಮಾಡಬೇಕೆಂದು ತಿಳಿಸಿ, ಅವರ ಮೊಬೈಲ್‌ಗೆ ಬಂದ ಓಟಿಪಿ ಪಡೆದುಕೊಂಡು 4,49,500 ರೂ.ಗಳನ್ನು ಅವರ ಖಾತೆಯಿಂದ ವರ್ಗಾವಣೆ ಮಾಡಿಕೊಂಡಿದ್ದಾರೆ. ಇವೆರಡೂ ಪ್ರಕರಣಗಳು ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಕಾವೇರಿ ಆಸ್ಪತ್ರೆಯಿಂದ 'ಎ ವಾಕ್ ಫಾರ್ ಹೆಲ್ತಿ ಹಾರ್ಟ್' ವಾಕಥಾನ್



ಮೈಸೂರು, ಅ.7–ವಿಶ್ವ ಹೃದಯ ದಿನದ ಅಂಗವಾಗಿ ಮೈಸೂರಿನ ಕಾವೇರಿ ಹಾರ್ಟ್ ಅಂಡ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ 'ಎ ವಾಕ್ ಫಾರ್ ಹೆಲ್ತಿ ಹಾರ್ಟ್' ಹೆಸರಿನಲ್ಲಿ ವಾಕಥಾನ್ ನಡೆಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಆಸ್ಪತ್ರೆಯ ಛೇರ್ಮನ್ ಡಾ. ಜಿ.ಆರ್.ಚಂದ್ರಶೇಖರ್ ಅವರು ಹೃದಯ ಆರೋಗ್ಯದ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಹೃದ್ರೋಗ ತಜ್ಞ ಡಾ. ಜೆ.ರಾಜಗೋಪಾಲ್ ಕಾರ್ಡಿಯೋ ಥೊರಾಸಿಕ್ ಸರ್ಜನ್ ಡಾ. ಮಧುಪ್ರಕಾಶ್ ಇನ್ನಿತರರು ಭಾಗವಹಿಸಿದ್ದರು.



ಜೆಡಿಎಸ್ ಮುಖಂಡ ಟಿ.ಸೋಮು ಅವರ ಹುಟ್ಟುಹಬ್ಬದ ಅಂಗವಾಗಿ ಪಕ್ಷದ ಮುಖಂಡ ಶ್ರೀನಿವಾಸ್, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ, ಬಿಜೆಪಿ ಮುಖಂಡ ಕೇಶವ, ಒಂಟಿಕೊಪ್ಪಲ್ ಪ್ರಕಾಶ್, ಸಂದೇಶ್, ರಘು ಇನ್ನಿತರರು ಅವರನ್ನು ಅಭಿನಂದಿಸಿದರು. ಹಾಗೂ ಆತ್ಮೀಯ ಸ್ನೇಹಿತರಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಮಾಜಿ ನಿರ್ದೇಶಕರು ಹಾಗೂ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರೂ ಆದ ಜೆಡಿಎಸ್ ಮುಖಂಡ ಟಿ.ಸೋಮು ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ವಿಜೃಂಭಣೆಯಿಂದ ಆಚರಿಸಿದರು.



ಅಫ್ಘಾನಿಸ್ತಾನ್ ವಿರುದ್ಧ ಬಾಂಗ್ಲಾಕ್ಕೆ 6 ವಿಕೆಟ್ ಜಯ

ಧರ್ಮಶಾಲಾ, ಅ.7– ಮೆಹಿಡಿ ಹಸನ್ ಮಿರಾಜ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಬಾಂಗ್ಲಾದೇಶ ಅಫ್ಘಾನಿಸ್ತಾನ್ ವಿರುದ್ಧ 6 ವಿಕೆಟ್‌ಗಳ ಗೆಲುವು ಸಾಧಿಸಿದೆ.



ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಫ್ಘಾನಿಸ್ತಾನ್ ನೀಡಿದ 157 ರನ್‌ಗಳ ಗುರಿ ಬೆನ್ನತ್ತಿದ ಬಾಂಗ್ಲಾದೇಶ 34.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿ ಸುಲಭ ಗೆಲುವು ದಾಖಲಿಸಿತು. ತಂಡದ ಮೊತ್ತ 27 ರನ್ ಆಗುವಷ್ಟರಲ್ಲಿ 5 ರನ್ ಗಳಿಸಿದ್ದ ತಂಜಿದ್ ಹಸನ್ ಹಾಗೂ 13 ರನ್ ಗಳಿಸಿದ್ದ ಲಿಟನ್ ದಾಸ್ ವಿಕೆಟ್ ಒಪ್ಪಿಸಿದರು. ಈ ವೇಳೆ ಮೂರನೇ ವಿಕೆಟ್‌ಗೆ ಜೊತೆಯಾದ ಮೆಹಿಡಿ ಹಸನ್ ಮಿರಾಜ್ ಹಾಗೂ ನಜ್ಮುಲ್ ಹುಸೇನ್ ಶಾಂಟೊ 97ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿ ಗೆಲುವಿನ ದಡಕ್ಕೆ ತಂದಿತ್ತರು. ಈ ವೇಳೆ 5 ಬೌಂಡರಿ ಒಳಗೊಂಡ 57 ರನ್ ಗಳಿಸಿದ್ದ ಮೆಹಿಡಿ ಹಸನ್ ಮಿರಾಜ್ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ನಾಯಕ ಶಕೀಬ್ ಅಲ್ ಹಸನ್ 14ರನ್ ಗಳಿಸಿ ನಿರ್ಗಮಿಸಿದರು. ನಜ್ಮುಲ್ ಹುಸೇನ್ ಶಾಂಟೊ 83 ಎಸೆತಗಳಲ್ಲಿ ಅಜೇಯ 59 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಅಫ್ಘಾನಿಸ್ತಾನದ ಪರ ಅಜ್ಮತುಲ್ಲಾ ಒಮರ್ಜಾಯ್, ನವೀನ್ ಉಲ್ ಹಕ್ ಹಾಗೂ ಫಜಲ್ಹಕ್ ಫಾರೂಕಿ ಒಂದೊಂದು ವಿಕೆಟ್ ಉರುಳಿಸಿದರು.

156ಕ್ಕೆ ಆಲೌಟ್: ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ್ 37.2 ಓವರ್‌ಗಳಲ್ಲಿ 156 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರಹಮಾನುಲ್ಲಾ ಗುರ್ಬಾಜ್ ಹಾಗೂ ಇಬ್ರಾಹಿಂ ಜದ್ರಾನ್ ಮೊದಲ ವಿಕೆಟ್‌ಗೆ 47ರನ್ ಗಳಿಸಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ 22 ರನ್ ಗಳಿಸಿದ್ದ ಜದ್ರಾನ್ ವಿಕೆಟ್ ಒಪ್ಪಿಸಿದರು. ನಂತರ ಬಂದ ರೆಹಮತ್ ಶಾ 18 ರನ್ ಗಳಿಸಿ ನಿರ್ಗಮಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಗಟ್ಟಿಯಾಗಿ ನಿಂತಿದ್ದ ರೆಹಮಾನುಲ್ಲಾ ಗುರ್ಬಾಜ್‌ಗೆ ಯಾರೊಬ್ಬರೂ ಸಾಥ್ ನೀಡದ ಪರಿಣಾಮ ಅಫ್ಘಾನಿಸ್ತಾನ್ ಸಾಧಾರಣ ಮೊತ್ತ ದಾಖಲಿಸಲಷ್ಟೇ ಶಕ್ತವಾಯಿತು. ಉಳಿದಂತೆ ಗುರ್ಬಾಜ್ 47, ಅಜ್ಮತುಲ್ಲಾ ಒಮರ್ಜಾಯ್ 22 ರನ್ ಗಳಿಸಿದರು. ಬಾಂಗ್ಲಾದೇಶ ಪರ ಮೆಹಿಡಿ ಹಸನ್ ಮಿರಾಜ್ ಹಾಗೂ ಶಕೀಬ್ ಅಲ್ ಹಸನ್ ತಲಾ 3, ಶೋರಿಫುಲ್ ಇಸ್ಲಾಂ 2, ತಸ್ಕಿನ್ ಅಹಮ್ಮದ್ ಹಾಗೂ ಮುಸ್ತಫಿಜಾರ್ ತಲಾ ಒಂದೊಂದು ವಿಕೆಟ್ ಪಡೆದರು. ಮೆಹಿಡಿ ಹಸನ್ ಮಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶ್ರೀಲಂಕಾ ವಿರುದ್ಧ ದ.ಆಫ್ರಿಕಾಕ್ಕೆ ಅದ್ಭುತ ಜಯ

ದೆಹಲಿ, ಅ.7– ಕ್ವಿಂಟನ್ ಡಿಕಾಕ್, ರಸ್ಸಿ ವಾನ್‌ಡರ್ ಡುಸ್ಸೆನ್ ಹಾಗೂ ಏಡನ್ ಮಾರ್ಕ್ರಮ್ ಅವರ ಭರ್ಜರಿ ಶತಕಗಳ ನೆರವಿನಿಂದ ದಕ್ಷಿಣ ಆಫ್ರಿಕಾ, ಶ್ರೀಲಂಕಾ ವಿರುದ್ಧ 102 ರನ್‌ಗಳ ಅಮೋಘ ಜಯ ಸಾಧಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.



ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ನಿಗದಿತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 428 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಬವುಮಾ ಕೇವಲ 8 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಕ್ವಿಂಟನ್ ಡಿಕಾಕ್ ಹಾಗೂ ರಸ್ಸಿ ವಾನ್‌ಡರ್ ಡುಸ್ಸೆನ್ ಶ್ರೀಲಂಕಾ ಬೌಲರ್‌ಗಳ ಬೆಂಡೆತ್ತಿದರು. ಆ ಮೂಲಕ 204 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಅಡಿಪಾಯ ಹಾಕಿಕೊಟ್ಟರು. ಈ ವೇಳೆ ಶತಕ ಸಿಡಿಸಿ ಸಂಭ್ರಮಿಸಿದ ಡಿಕಾಕ್ 84ಎಸೆತಗಳಲ್ಲಿ 12 ಬೌಂಡರಿ, 3 ಸಿಕ್ಸರ್ ಒಳಗೊಂಡ 100 ರನ್ ಸಿಡಿಸಿ ನಿರ್ಗಮಿಸಿದರು. ಮತ್ತೊಂದೆಡೆ ಡಿಕಾಕ್‌ಗೆ ಉತ್ತಮ ಸಾಥ್ ನೀಡಿದ ರಸ್ಸಿ ವಾನ್‌ಡರ್ ಡುಸ್ಸೆನ್ ಕೂಡ 13 ಬೌಂಡರಿ, 2 ಸಿಕ್ಸರ್ ಒಳಗೊಂಡ 108ರನ್ ಗಳಿಸಿ ಔಟಾದರು.

ದಾಖಲೆಯ ಶತಕ: ಈ ವೇಳೆ ಕ್ರೀಸ್‌ಗೆ ಆಗಮಿಸಿದ ಏಡನ್ ಮಾರ್ಕ್ರಂ ಮಿಂಚಿನ ಬ್ಯಾಟಿಂಗ್ ಮಾಡಿದರು. ಶ್ರೀಲಂಕಾ ಬೌಲರ್‌ಗಳನ್ನು ಚೆಂಡಾಡಿದ ಅವರು 49 ಎಸೆತಗಳಲ್ಲಿ 14 ಬೌಂಡರಿ, 3 ಸಿಕ್ಸರ್ ಒಳಗೊಂಡ ಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ವಿಶ್ವಕಪ್ ಪಂದ್ಯಾವಳಿಯಲ್ಲಿ ವೇಗದ ಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 106ರನ್ ಗಳಿಸಿದ್ದ ವೇಳೆ ಔಟಾದರು. ಉಳಿದಂತೆ ಕ್ಲಾಸೆನ್ 32, ಮಿಲ್ಲರ್ 39ರನ್ ಗಳಿಸಿದರು. ಶ್ರೀಲಂಕಾ ಪರ ದಿಲ್ಶಾನ್ ಮಧುಶಂಕ 2, ರಜಿತ, ಮಹೀಷಾ ಪತಿರಣ ಹಾಗೂ ದುನಿತ್ ವೆಲ್ಲಾಲಗೆ ತಲಾ ಒಂದೊಂದು ವಿಕೆಟ್ ಕಬಳಿಸಿದರು.

429 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 44.5 ಓವರ್‌ಗಳಲ್ಲಿ 326ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಕುಸಲ್ ಮೆಂಡೀಸ್ 76, ಸದೀರ ಸಮರವಿಕ್ರಮ 23, ಚರತ್ ಅಸಲಂಕಾ 79, ನಾಯಕ ದಸುನ್ ಶನಕ 68ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೋಟ್ಜಿ 3, ಕೇಶವ್ ಮಹಾರಾಜ್, ಕಗಿಸೋ ರಬಾಡ, ಮಾರ್ಕೋ ಜಾನ್ಸೆನ್ ತಲಾ 2, ಲುಂಗಿ ಎನ್‌ಗಿಡಿ ಒಂದು ವಿಕೆಟ್ ಪಡೆದರು. ಏಡನ್ ಮಾರ್ಕ್ರಂ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಮಿತ್ರ

ಭಾನುವಾರ 8 ಅಕ್ಟೋಬರ್ 2023

ಮಂಡ್ಯ ಲೋಕಸಭಾ 'ಕೈ' ಅಭ್ಯರ್ಥಿ ಆಯ್ಕೆ ಸಿಎಂ, ಡಿಸಿಎಂ ಹೆಗಲಿಗೆ

ಜಿಲ್ಲಾ ಕಾಂಗ್ರೆಸ್ ಮುಖಂಡರ ಒಕ್ಕೊರಲ ನಿರ್ಧಾರ: ಸಚಿವ ಡಾ.ಎಂ.ಸಿ.ಸುಧಾಕರ್



ಮಂಡ್ಯ, ಅ.7– ಮುಂಬರುವ ಲೋಕಸಭಾ ಚುನಾವಣೆಗೆ ಮಂಡ್ಯ ಕ್ಷೇತ್ರದ ಅಭ್ಯರ್ಥಿ ಆಯ್ಕೆಯನ್ನು ಜಿಲ್ಲೆಯ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಗಲಿಗೆ ಹಾಕುವ ಮೂಲಕ ಒಕ್ಕೊರಲಿನ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಮಂಡ್ಯ ಲೋಕಸಭಾ ಚುನಾವಣೆ ವೀಕ್ಷಕ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಶನಿವಾರ ನಗರದ ಸುಮಾ ರವಿ ಕಲ್ಯಾಣ ಮಂಟಪದಲ್ಲಿ ನಡೆದ ಸಭೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ಅಭಿಪ್ರಾಯ ಸಂಗ್ರಹಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ಲೋಕಸಭಾ ಚುನಾವಣೆಗೆ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಮಂಡ್ಯ ಕಾಂಗ್ರೆಸ್ ಮುಖಂಡರೊಂದಿಗೆ ಸಭೆ ನಡೆಸಿದ್ದು, ಅಭ್ಯರ್ಥಿ ಆಯ್ಕೆಯನ್ನು ಸಿಎಂ, ಡಿಸಿಎಂ ಹೆಗಲಿಗೆ ಹಾಕಿದ್ದಾರೆ ಎಂದರು.

ಪಕ್ಷದ ಗೆಲುವಿಗಾಗಿ ರಾಜ್ಯ ನಾಯಕರು ಯಾವುದೇ ನಿರ್ಧಾರಕ್ಕೆ ಬಂದರೂ ನಮ್ಮ ಸ್ವಾಗತವಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಭಾಗದಲ್ಲಿ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸಲು ಕಾರ್ಯಕರ್ತರು ಶ್ರಮಿಸಬೇಕು. ಪಕ್ಷಕ್ಕಾಗಿ ದುಡಿದವರಿಗೆ ಟಿಕೆಟ್ ನೀಡಲು ರಾಜ್ಯ ನಾಯಕರು ಹೈಕಮಾಂಡ್‌ಗೆ ಶಿಫಾರಸ್ಸು ಮಾಡಲಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಗೆ ಗೆಲುವಿಗೆ ಎಲ್ಲರೂ ರಣತಂತ್ರ ರೂಪಿಸಿ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಿಂದ 6 ಮಂದಿ ಶಾಸಕರು ಗೆದ್ದಂತೆ ಲೋಕಸಭಾ ಚುನಾವಣೆಯಲ್ಲೂ ಮಂಡ್ಯ ಕಾಂಗ್ರೆಸ್ ವಶವಾಗಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕಾರ್ಯಾಧ್ಯಕ್ಷರು, ವೀಕ್ಷಕರು ಈಗಾಗಲೇ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಉಸ್ತುವಾರಿಗಳಿಗೆ ಸ್ಥಳೀಯ ಮುಖಂಡರು ಅಭ್ಯರ್ಥಿ ವಿಚಾರದಲ್ಲಿ ಒನ್ ಲೈನ್ ರೆಜ್ಯುಲೇಷನ್ ಮಂಡಿಸಿ ಅಭ್ಯರ್ಥಿ ಆಯ್ಕೆಯನ್ನು ಸಿಎಂ, ಡಿಸಿಎಂ ಹೆಗಲಿಗೆ ಹಾಕಿದ್ದಾರೆ. ಜೊತೆಗೆ ಜಿಲ್ಲೆಯಲ್ಲಿ 4ರಿಂದ 5 ಮಂದಿ ಪ್ರಭಾವಿ ಮುಖಂಡರು ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದು, ವೀಕ್ಷಕರು ಹಾಗೂ ಉಸ್ತುವಾರಿಗಳ ಮುಂದೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆ. ಅವರ ಅಭಿಪ್ರಾಯವನ್ನು ಉಸ್ತುವಾರಿಗಳು ಕೆಪಿಸಿಸಿ ಮುಂದೆ ಇಡಲಿದ್ದು, ಪಕ್ಷಕ್ಕಾಗಿ ಹಗಲಿರುಳು ದುಡಿದವರಿಗೆ ಟಿಕೆಟ್ ಕೊಡಲಾಗುವುದು ಎಂದರು.

ಜೆಡಿಎಸ್, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದೆ ಈ ಹಿಂದೆ ಜನತಾದಳ, ಜನತಾಪಕ್ಷ ಎಂಬ ಹೆಸರಿನಲ್ಲಿದ್ದ ಜೆಡಿಎಸ್ ಒಡೆದು ಹೋಳಾಗಿತ್ತಾದರೂ ಎಂದೂ ಇನ್ನೊಂದು ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿರಲಿಲ್ಲ. ಆದರೆ ಇದೀಗ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಕ್ಕೆ ದೇವೇಗೌಡರು ಮೈತ್ರಿ ಮಾಡಿಕೊಂಡಿದ್ದಾರೆ. ದೇವೇಗೌಡರಂತೆ ಪಕ್ಷ ಕಟ್ಟಲು ಕುಮಾರಸ್ವಾಮಿಗೆ ಬರುವುದಿಲ್ಲ. ಹೆಚ್ಡಿಕೆಗೆ ಕೇವಲ ಅಧಿಕಾರ ಮಾತ್ರ ಬೇಕಿದೆ. ಹಾಗಾಗಿ ಈ ಮೈತ್ರಿಯಾಗಿದೆ ಎಂದು ಜೆಡಿಎಸ್ ವಿರುದ್ಧ ಹರಿಹಾಯ್ದರು.

ರಾಜ್ಯದಲ್ಲಿ ಸದ್ಯಕ್ಕೆ ಬಿಜೆಪಿ ಏಕಾಂಗಿಯಾಗಿದೆ. ರಾಜ್ಯ ನಾಯಕರನ್ನು ಬಿಟ್ಟು ಕೇಂದ್ರ ನಾಯಕರೇ ಜೆಡಿಎಸ್ ಜೊತೆಗೆ ಮೈತ್ರಿ ಕುದುರಿಸಿದ್ದಾರೆ. ನಾವಿಕನಿಲ್ಲದ ದೋಣಿಯಂತಾಗಿರುವ ಬಿಜೆಪಿ ಈ ಹಿಂದೆ ಬಹುಮತದ ಸರ್ಕಾರ ರಚಿಸಿಲ್ಲ. ಇದೀಗ ಸರ್ಕಾರ ಹೋದ ಮೇಲೆ ಬಿಜೆಪಿ ಪರಿಸ್ಥಿತಿ ಶೋಚನೀಯವಾಗಿದ್ದು, ಅವರಿಗೂ ಸಹ ಮೈತ್ರಿ ಅವಶ್ಯಕತೆ ಇತ್ತು. ಹಾಗಾಗಿ ಜೆಡಿಎಸ್ ಜೊತೆಗೆ ಕೈ ಜೋಡಿಸಿದ್ದಾರೆ ಎಂದು ಟೀಕಿಸಿದರು.

ಕೆಲವರು 136 ಸ್ಥಾನ ಗೆದ್ದಿರುವ ಕಾಂಗ್ರೆಸ್ ಸರ್ಕಾರ ಬೀಳಿಸುವ ಕನಸು ಕಾಣುತ್ತಿದ್ದು, ಅವರ ಕನಸು ನನಸಾಗುವುದಿಲ್ಲ. ನಮ್ಮ ನಾಯಕರು ಲೋಕಸಭಾ ಚುನಾವಣೆಯಲ್ಲಿ ಈ ಬಾರಿ 15 ರಿಂದ 20 ಸ್ಥಾನ ಗೆಲ್ಲುವ ಗುರಿ ಹೊಂದಿದ್ದಾರೆ. ಆದರೆ ಚುನಾವಣೆ ವೇಳೆಗೆ ಈ ಸಂಖ್ಯೆ ಹೆಚ್ಚಾಗಿ ರಾಜ್ಯದಲ್ಲಿ ಕನಿಷ್ಟ 25 ಸ್ಥಾನ ಗೆದ್ದರೂ ಅಚ್ಚರಿ ಇಲ್ಲ ಎಂದು ಭವಿಷ್ಯ ನುಡಿದರು.

ಕಾವೇರಿ ನೀರು ಉಳಿಸಿಕೊಳ್ಳಲು ಎಂತಹ ಪರಿಸ್ಥಿತಿ ಎದುರಿಸಲು ರಾಜ್ಯ ಸರ್ಕಾರ ಸಿದ್ಧವಿದೆ. ಆದರೆ ಕೇಂದ್ರದ ಮಂತ್ರಿಗಳು ಹಾಗೂ ಪ್ರಧಾನಿಗಳನ್ನು ಭೇಟಿಯಾಗಲು ನಮಗೆ ಅವಕಾಶವೇ ಸಿಗುತ್ತಿಲ್ಲ. ಹಲವು ಬಾರಿ ಪ್ರಧಾನಿ ಭೇಟಿಗೆ ಸಿಎಂ ಹಾಗೂ ಡಿಸಿಎಂ ಯತ್ನಿಸಿದರೂ ಅವಕಾಶ ಸಿಕ್ಕಿಲ್ಲ. ಒಂದೆಡೆ ಬರ ಪರಿಸ್ಥಿತಿ ಇದೆ. ಈ ವಿಚಾರಕ್ಕೂ ಹಲವು ಮಂತ್ರಿಗಳನ್ನು ಭೇಟಿ ಮಾಡಲು ಸಮಯಾವಕಾಶ ಕೇಳಿದರೂ ಕೇಂದ್ರ ಮಂತ್ರಿಗಳು ಅವಕಾಶ ಕೊಡುತ್ತಿಲ್ಲ. ರಾಜ್ಯದ ವಿಚಾರವಾಗಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಎನ್‌ಡಿಎ ಸಂಸದರ ಶಕ್ತಿ ಹೆಚ್ಚಿದೆ. 25 ಎಂಪಿಗಳನ್ನು ಹೊಂದಿದ್ದ ಬಿಜೆಪಿಯ ಎನ್‌ಡಿಎ ಒಕ್ಕೂಟಕ್ಕೆ ಮಂಡ್ಯ ಸಂಸದೆ ಸುಮಲತಾ ಹಾಗೂ ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಸೇರ್ಪಡೆಯಾಗಿದ್ದಾರೆ. ಈ ಮೂಲಕ ಎನ್‌ಡಿಎ ಸಂಸದರು ರಾಜ್ಯದಲ್ಲಿ 27 ಮಂದಿ ಇದ್ದು, ಕಾಂಗ್ರೆಸ್ ಸಂಸದರು ಕೇವಲ ಒಬ್ಬರಿದ್ದಾರೆ. ಹಾಗಾಗಿ 27 ಸಂಸದರು ಮೋದಿ ಬಳಿ ಹೋಗಿ ಕಾವೇರಿ ವಿಚಾರ ಬಗೆಹರಿಸಲು ಪ್ರಧಾನಿಗೆ ಒತ್ತಡ ಹಾಕಬೇಕೆಂದು ಆಗ್ರಹಿಸಿದರು.

ಮಂಡ್ಯದಲ್ಲಿ ಕಾವೇರಿ ಹೋರಾಟ ನಡೆಯುತ್ತಿದೆ. ಈ ಹೋರಾಟಕ್ಕೆ ಮಾಜಿ ಸಿಎಂ ಬೊಮ್ಮಾಯಿ 4 ಬಾರಿ, ಹೆಚ್ಡಿಕೆ ಒಮ್ಮೆ ಬಂದು ಹೋಗಿದ್ದಾರೆ. ಇಲ್ಲಿಗೆ ಬಂದು ರಾಜಕೀಯ ಮಾಡುವುದನ್ನು ಬಿಟ್ಟು ಯಡಿಯೂರಪ್ಪ, ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ದೆಹಲಿಗೆ ಹೋಗಿ ಮೋದಿ ಮುಂದೆ ಕುಳಿತು ಕಾವೇರಿ ಸಮಸ್ಯೆ ಬಗೆಹರಿಸಿಕೊಂಡು ಬರಲಿ ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಪ್ಪ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳೀಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬಿ.ರಾಮಕೃಷ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್. ಚಿದಂಬರ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಕೃಷ್ಣ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ದಡದಪುರ ಶಿವಣ್ಣ, ಮುಖಂಡರಾದ ರುದ್ರಪ್ಪ ರಮೇಶ್, ವಿಜಯ್‌ಕುಮಾರ್ ಇತರರಿದ್ದರು.

ಜಯಕರ್ನಾಟಕ ಸಂಘಟನೆ ಪ್ರತಿಭಟನೆ



ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ನಗರದ ಸುಮಾರವಿ ಕಲ್ಯಾಣ ಮಂಟಪದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ನಡೆದ ಅಭಿಪ್ರಾಯ ಸಂಗ್ರಹ ಸಭೆಗೆ ಮುತ್ತಿಗೆ ಹಾಕಿದ ಜಯಕರ್ನಾಟಕ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಸಚಿವ ಚಲುವರಾಯಸ್ವಾಮಿ, ಶಾಸಕರಾದ ನರೇಂದ್ರಸ್ವಾಮಿ ಮತ್ತು ರಮೇಶ್ ಬಂಡಿಸಿದ್ದೇಗೌಡ, ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ, ಅವರೊಂದಿಗೆ ಮಾತುಕತೆ ನಡೆಸಿ ಅಲ್ಲಿಂದ ತೆರಳಿದರು.

ಸಿನಿಮಾ ನಟರು, ಅನ್ಯ ಪಕ್ಷದಿಂದ ಬರುವವರಿಗೆ ಅವಕಾಶ ಬೇಡ

ಮಂಡ್ಯ: ಲೋಕಸಭಾ ಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ವೀಕ್ಷಕರಾಗಿ ಆಗಮಿಸಿದ್ದ ಸಚಿವ ಡಾ.ಸುಧಾಕರ್ ಮುಂದೆ ಶಾಸಕರು, ಮಾಜಿ ಶಾಸಕರು, ಬ್ಲಾಕ್ ಕಾಂಗ್ರೆಸ್, ಜಿಲ್ಲಾ ಕಾಂಗ್ರೆಸ್‌ನ ಪದಾಧಿಕಾರಿಗಳು ಹಾಗೂ ವಿವಿಧ ತಾಲೂಕುಗಳಿಂದ ಆಗಮಿಸಿದ್ದ ಮುಂಚೂಣಿ ಮುಖಂಡರು ವಿವಿಧ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯವಾಗಿ ಚಿತ್ರನಟರಿಗೆ ಈ ಬಾರಿ ಅವಕಾಶ ಕೊಡಬೇಡಿ ಎಂದು ಹಲವು ಮುಖಂಡರು ಒತ್ತಾಯಿಸಿದರು. ಚಿತ್ರನಟರು ಚುನಾವಣೆ ಗೆದ್ದ ಬಳಿಕ ನಮ್ಮ ಸಂಪರ್ಕಕ್ಕೆ ಸಿಗುವುದಿಲ್ಲ. ಜೊತೆಗೆ ಪಕ್ಷ ಸಂಘಟನೆಯಲ್ಲಿ ಅವರ ಪಾತ್ರ ಇರುವುದಿಲ್ಲ. ಬೆಂಗಳೂರಿಂದ ಬಂದು ಮಂಡ್ಯದಲ್ಲಿ ರಾಜಕಾರಣ ಮಾಡುವವರ ಅವಶ್ಯಕತೆ ನಮಗಿಲ್ಲ ಎನ್ನುವ ಮೂಲಕ ಕೆಲ ಮುಖಂಡರು ನಟಿ ಹಾಗೂ ಮಾಜಿ ಸಂಸದೆ ರಮ್ಯಾಗೆ ಟಿಕೆಟ್ ಕೊಡುವುದಕ್ಕೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೇ ಬೇರೆ ಪಕ್ಷಗಳಿಂದ ಮಾಜಿ ಸಚಿವರು ಅಥವಾ ಶಾಸಕರನ್ನು ಕರೆತಂದು ಟಿಕೆಟ್ ಕೊಡುವುದಕ್ಕೂ ವಿರೋಧ ಕೇಳಿ ಬಂದಿದ್ದು, ನಮ್ಮಲ್ಲೇ ಸಮರ್ಥ ಮುಖಂಡರಿದ್ದಾರೆ. ಅವರಿಗೆ ಟಿಕೆಟ್ ಕೊಡಿ. ಅದನ್ನು ಬಿಟ್ಟು ಬೇರೆ ಪಕ್ಷದಿಂದ ಬರುವವರಿಗೆ ಟಿಕೆಟ್ ಏಕೆ ನೀಡಬೇಕು. ಅವರ ವಿರುದ್ಧವೇ ನಾವು ರಾಜಕಾರಣ ಮಾಡಿಕೊಂಡು ಬಂದು ಇದೀಗ ಅವರ ಪರ ದುಡಿಯುವುದೆಂದರೆ ಹೇಗೆ ಎಂಬ ಪ್ರಶ್ನೆಯನ್ನು ವೀಕ್ಷಕರ ಮುಂದೆ ಕೆಲವರು ಇಟ್ಟರು.

ಜೊತೆಗೆ ಅಭ್ಯರ್ಥಿಯನ್ನು ಬೇಗ ಘೋಷಿಸಿದರೆ ಚುನಾವಣೆಗೆ ಸಿದ್ಧತೆ ನಡೆಸಲು ಅನುಕೂಲವಾಗುತ್ತದೆ. ಜೊತೆಗೆ ಅವರ ಗೆಲುವಿಗೂ ಸಹಕಾರವಾಗುತ್ತದೆ ಎಂದು ಕೆಲ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೇ ಸಭೆಗೆ ಬಂದಿದ್ದ ಕೆಲ 2ನೇ ಹಂತದ ನಾಯಕರು ಟಿಕೆಟ್‌ಗಾಗಿ ವೀಕ್ಷಕರ ಮುಂದೆ ಬೇಡಿಕೆ ಇಟ್ಟರು.

ವಸತಿ ನಿಲಯಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ

ವಾರ್ಡನ್, ಅಡುಗೆ ಸಿಬ್ಬಂದಿಗೆ ಬಿಸಿಎಂ ಅಧಿಕಾರಿ ಎಂ.ಎನ್.ವೆಂಕಟೇಶ್ ಸಲಹೆ



ಕೆ.ಆರ್.ಪೇಟೆ, ಅ.7– ವಸತಿ ನಿಲಯಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಾಲೂಕು ಬಿಸಿಎಂ ಅಧಿಕಾರಿ ಎಂ.ಎನ್.ವೆಂಕಟೇಶ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಸತಿ ನಿಲಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಆರೋಗ್ಯ ಇಲಾಖೆಯಿಂದ ಹಾಸ್ಟೆಲ್ ವಾರ್ಡನ್ ಹಾಗೂ ಅಡುಗೆ ಸಿಬ್ಬಂದಿ ವರ್ಗದವರಿಗೆ ಆಯೋಜಿಸಿದ್ದ ಆರೋಗ್ಯ ಅರಿವು ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಆರೋಗ್ಯದಿಂದ ಇದ್ದರೆ ಏನು ಬೇಕಾದರೂ ಮಾಡಬಹುದು. ಹೀಗಾಗಿ ಪ್ರತಿಯೊಬ್ಬರೂ ಆರೋಗ್ಯದ ಕಡೆ ಗಮನ ಹರಿಸಬೇಕು. ಮುಖ್ಯವಾಗಿ ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ವಿದ್ಯಾರ್ಥಿಗಳಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಬೇಕು. ಅಡುಗೆ ಸಿಬ್ಬಂದಿ ಅಡುಗೆ ಕೋಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ವಾರ್ಡನ್‌ಗಳು ತಾಜಾ ತರಕಾರಿ, ಪೌಷ್ಟಿಕಾಂಶದಿಂದ ಕೂಡಿದ ಆಹಾರ ಪದಾರ್ಥಗಳನ್ನು ಒದಗಿಸಿ ಅಡುಗೆ ಸಿಬ್ಬಂದಿಯಿಂದ ಗುಣಮಟ್ಟದ ಅಡುಗೆ ತಯಾರಿಸಿ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದರು.

ತಾಲೂಕು ಆರೋಗ್ಯ ನಿರೀಕ್ಷಕ ಸತೀಶ್ ಮಾತನಾಡಿ, ವಸತಿ ನಿಲಯಗಳಲ್ಲಿ ಪ್ರಮುಖವಾಗಿ ಶುದ್ಧ ಕುಡಿಯುವ ನೀರು ಬಳಸಬೇಕು. ನೀರಿನಿಂದಲೇ ಅನೇಕ ಕಾಯಿಲೆಗಳು ಬರುತ್ತವೆ. ಇತ್ತೀಚೆಗೆ ಕಲುಷಿತ ನೀರಿನಿಂದ ಸಾವಿನ ಪ್ರಕರಣ ವರದಿಯಾಗಿರುವ ಕಾರಣ ಆಹಾರ ತಯಾರಿಸಲು ಹಾಗೂ ಕುಡಿಯಲು ಶುದ್ಧ ನೀರು ಬಳಕೆ ಮಾಡಬೇಕು. ತರಕಾರಿ, ಸೊಪ್ಪು ಅಡುಗೆಗೆ ಬಳಕೆ ಮಾಡುವ ಮುನ್ನ ಉಪ್ಪು ನೀರಿನಲ್ಲಿ ತೊಳೆದು ನಂತರ ಬಳಸಬೇಕು. ಯಾವುದೇ ಕಾರಣಕ್ಕೂ ನೀರು ಒಂದೆಡೆ ವಾರಗಟ್ಟಲೆ ನಿಲ್ಲದಿರುವಂತೆ ನೋಡಿಕೊಳ್ಳಬೇಕು. ಏಕೆಂದರೆ ಡೆಂಗ್ಯೂ ಜ್ವರಕ್ಕೆ ಕಾರಣವಾಗುವ ಸೊಳ್ಳೆಗಳು ಶುದ್ಧ ನೀರಿನಲ್ಲಿ ತೆರೆದ ಸ್ಥಿತಿಯಲ್ಲಿದ್ದ ಪಾತ್ರೆಗಳಲ್ಲಿ, ಪ್ಲಾಸ್ಟಿಕ್ ಲೋಟಗಳಲ್ಲಿ, ಕಾಯಿ ಕಂಠಗಳಲ್ಲಿ ಸುಲಭವಾಗಿ ಉತ್ಪತ್ತಿಯಾಗುತ್ತದೆ. ಹೀಗಾಗಿ ಸ್ವಚ್ಛತೆಗೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ದಿವಾಕರ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶಿವಮ್ಮ, ಆರೋಗ್ಯ ನಿರೀಕ್ಷಕರಾದ ಧರ್ಮೇಂದ್ರ, ಮೂರ್ತಿ, ಮಂಚೇಗೌಡ, ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್ ಸೇರಿದಂತೆ ಅಡುಗೆ ಸಿಬ್ಬಂದಿವರ್ಗ ಹಾಗೂ ಹಾಸ್ಟೆಲ್‌ಗಳ ನಿಲಯಪಾಲಕರು ಭಾಗವಹಿಸಿದ್ದರು.

ವಿವೇಕಾನಂದ ವಾಣಿಜ್ಯ ವಿದ್ಯಾ ಸಂಸ್ಥೆಗೆ ಶೇ.94ರಷ್ಟು ಫಲಿತಾಂಶ



ವಿನುತಾ



ಸಂಜಯ್‌ಕುಮಾರ್



ಗಂಗಾಧರ್

ಪಾಂಡವಪುರ, ಅ.7– ಬೆಂಗಳೂರಿನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸಿದ ವಾಣಿಜ್ಯ ಪರೀಕ್ಷೆಯಲ್ಲಿ ಪಟ್ಟಣದ ವಿವೇಕಾನಂದ ವಾಣಿಜ್ಯ ವಿದ್ಯಾಸಂಸ್ಥೆಗೆ ಶೇ.94ರಷ್ಟು ಫಲಿತಾಂಶ ಬಂದಿದೆ.

ಸಂಸ್ಥೆಯಲ್ಲಿ ತರಬೇತಿ ಪಡೆದ ವಿನುತಾ (ಶೇ.94), ಸಂಜಯ್ ಕುಮಾರ್ (ಶೇ.90), ಎಚ್.ಎಸ್.ವಿನುತಾ(90), ಗಂಗಾಧರ್ ಎಸ್.(ಶೇ.91) ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. 24 ವಿದ್ಯಾರ್ಥಿಗಳ ಪೈಕಿ 14 ಡಿಸ್ಟಿಂಕ್ಷನ್, 7 ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. 22 ವಿದ್ಯಾರ್ಥಿ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್‌ನಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲ ಕೆ.ಚಂದ್ರಶೇಖರ್, ಎಂ.ಎಲ್. ಜಯಶ್ರೀ ತಿಳಿಸಿದ್ದಾರೆ.

ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಅ.7– ರೇಷ್ಮೆ ಇಲಾಖೆಯಿಂದ 2023–24ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.ಅರ್ಹ ರೇಷ್ಮೆ ಬೆಳೆಗಾರರು ಅ.17ರೊಳಗೆ ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿಗಳಿಂದ ಅಥವಾ ರೇಷ್ಮೆ ಸಹಾಯಕರ ಕಚೇರಿಯಿಂದ ಅರ್ಜಿ ಪಡೆದು ಸಲ್ಲಿಸಬಹುದಾಗಿದೆ ಎಂದು ಜಿಪಂ ರೇಷ್ಮೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ



ಭಾರತೀನಗರ, ಅ.7– ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ದೊಡ್ಡರಸಿನಕೆರೆ ಗ್ರಾಮಸ್ಥರು ಭಾರತೀನಗರದ ಸೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ರೈತರು ಬೆಳೆದ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ. ಕೆಆರ್‌ಎಸ್‌ನಿಂದಲೂ ಬೆಳೆಗಳಿಗೆ ನೀರು ಕೊಡುತ್ತಿಲ್ಲ. ಸಾಲಸೋಲ ಮಾಡಿ ಜಮೀನುಗಳಿಗೆ ಪಂಪ್‌ಸೆಟ್ ಅಳವಡಿಸಿಕೊಂಡಿದ್ದರೂ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಎದುರಾಗಿದೆ. ಕೂಡಲೇ ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸರ್ಕಾರದ ಆದೇಶದಂತೆ ರೈತರ ಪಂಪ್‌ಸೆಟ್‌ಗೆ ನಿತ್ಯ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕು. ಕೇವಲ ಒಂದೂವರೆ ಗಂಟೆ ಮಾತ್ರ ವಿದ್ಯುತ್ ನೀಡುತ್ತಿದ್ದೀರಿ. ಅದರಲ್ಲೂ ವಾರದಲ್ಲಿ 2 ದಿನ ಮಾತ್ರ ವಿದ್ಯುತ್ ಪೂರೈಕೆ ಮಾಡುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಎಇಇ ರಮೇಶ್, ಮೇಲಾಧಿಕಾರಿಗಳೊಂದಿಗೆ ಮಾತನಾಡಿ, ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಪ್ರತಿಭಟನಾಕಾರರನ್ನು ಮನವೊಲಿಸಿ ಭರವಸೆ ನೀಡಿದ್ದರಿಂದ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಚಿಕ್ಕಹುಚ್ಚೇಗೌಡ, ಸಿದ್ದರಾಜು, ದೋಚಿಗೌಡ, ಪ್ರತಾಪ, ಕೆಂಪೇಗೌಡ, ವಿಜಿಕುಮಾರ್, ಕೃಷ್ಣೇಗೌಡ, ಕುಮಾರ್, ಬಂಡಿಮಾಯೀಗೌಡ, ಕೃಷ್ಣ ಸೇರಿದಂತೆ ಇತರರಿದ್ದರು.

ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಂಡ್ಯ, ಅ.7– ಜಿಲ್ಲೆಯಲ್ಲಿ ವಿಕಲಚೇತನರ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ/ ಸಲ್ಲಿಸುತ್ತಿರುವ ವ್ಯಕ್ತಿ, ಸಂಸ್ಥೆ ಹಾಗೂ ವಿಕಲಚೇತನರ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರಾಗಿ 15 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿದ ಸಲ್ಲಿಸುತ್ತಿರುವ ವಿಶೇಷ ಶಿಕ್ಷಕರಿಗೆ 2023–24ನೇ ಸಾಲಿನಲ್ಲಿ ರಾಜ್ಯ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ವಿಕಲಚೇತನರ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ, ಸಂಸ್ಥೆ, ಹಾಗೂ ಶಿಕ್ಷಕರು ಅರ್ಜಿಯ ನಿಗದಿತ ನಮೂನೆಯನ್ನು ಇಲಾಖೆಯ ವೆಬ್‌ಸೈಟ್ www.dwdsc.kar.nic.in ನಲ್ಲಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ದ್ವಿಪ್ರತಿಯಲ್ಲಿ ಅರ್ಜಿ ಸಲ್ಲಿಸಿ, ಅರ್ಜಿಯ ಪ್ರತಿಯನ್ನು ಅ.25 ರೊಳಗೆ ಜಿಲ್ಲಾ ಅಂಗವಿಕಲ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಮೌನ ದುರದೃಷ್ಟಕರ



ಮಂಡ್ಯ, ಅ.7– ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದ್ದರೂ, ರಾಜ್ಯ ಸರ್ಕಾರ ಮೌನವಾಗಿರುವುದು ದುರದೃಷ್ಟಕರ ಎಂದು ಪಾಂಡವಪುರದ ಬೇಬಿಬೆಟ್ಟದ ಶ್ರೀ ರಾಮಯೋಗೇಶ್ವರ ಮಠದ ಪೀಠಾಧಿಪತಿ ಶ್ರೀ ಶಿವಬಸವ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಶನಿವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಧರಣಿಯಲ್ಲಿ ಮಾತನಾಡಿದ ಅವರು, ಪ್ರಜೆಗಳಿಗೋಸ್ಕರ ಸರ್ಕಾರಗಳು ಇರುತ್ತವೆ. ಆದರೆ ನಮ್ಮನ್ನಾಳುತ್ತಿರುವ ಸರ್ಕಾರ ನಿರಂತರ ಅನ್ಯಾಯವಾಗುತ್ತಿದ್ದರೂ ಮೌನ ತಾಳಿ ತಮಿಳುನಾಡಿಗೆ ನೀರು ಹರಿಸುತ್ತಿದೆ. ಮುಂದಿನ ದಿನಗಳಲ್ಲಿ ನೀರಿಗೆ ಸಂಕಷ್ಟ ಎದುರಾಗಲಿದೆ ಎಂದರು.

ಕಾವೇರಿ ವಿಚಾರದಲ್ಲಿ ಹೊರಡಿಸಿರುವ ತೀರ್ಪುಗಳು ಅವೈಜ್ಞಾನಿಕ. ಆದರೂ ಸಹ ಅದನ್ನು ಪಾಲಿಸುತ್ತಿರುವುದು ಸರಿಯಲ್ಲ. ಪಾದಯಾತ್ರೆ ಮೂಲಕ ಮಲೆ ಮಹದೇಶ್ವರನ ದರ್ಶನ ಮಾಡಿ ರಾಜ್ಯ ಸರ್ಕಾರಕ್ಕೆ ಒಳ್ಳೆಯ ತಿಳುವಳಿಕೆ ಕೊಡಲಿ ಎಂದು ಪ್ರಾರ್ಥಿಸಿದ್ದೇನೆ ಎಂದರು.

ನೆರೆ ರಾಜ್ಯಕ್ಕೆ ನೀರು ಹರಿಸುತ್ತಿರುವುದು ನೋವಿನ ವಿಚಾರ. ನಮ್ಮ ಮನೆಯಲ್ಲಿ ನೀರಿಲ್ಲ. ಅನ್ನ ಇಲ್ಲ ಇಂತಹ ಸನ್ನಿವೇಶದಲ್ಲಿ ನೀರು ಕೊಡುವುದು ಹೇಗೆ. ಮಳೆ ಬೆಳೆ ಇಲ್ಲದೆ ಬರಗಾಲ ಪರಿಸ್ಥಿತಿ ಎದುರಾಗಿದೆ. ಮನುಷ್ಯ ಕೇಳಿ ಪಡೆಯುತ್ತಾನೆ. ಆದರೆ ಜಾನುವಾರು, ಪ್ರಾಣಿ ಪಕ್ಷಿಗಳು ಕೇಳಿ ತಿನ್ನುತ್ತವಾ, ಜಲಾಶಯಗಳು ಬರಿದಾಗುತ್ತಿರುವುದರಿಂದ ಕುಡಿಯುವ ನೀರಿಗೂ ಅಭಾವದ ಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿದರು. ಇಂದಿನ ಪ್ರತಿಭಟನೆಗೆ ನಟಿ ಹರ್ಷಿಕಾ ಪೂಣಚ್ಚ, ಖಳನಟ ಮೈಕೋ ನಾಗರಾಜ್ ಸೇರಿದಂತೆ ಹಲವು ನಟರು ಬೆಂಬಲ ಸೂಚಿಸಿದರು. ರೈತ ಹಿತರಕ್ಷಣಾ ಸಮಿತಿ ಕೆ.ಬೋರಯ್ಯ, ರೈತ ಸಂಘದ ಚಂದ್ರಶೇಖರ್, ಅಂಬುಜಮ್ಮ, ಕನ್ನಡ ಸೇನೆ ಮಂಜುನಾಥ್, ಬೊಮ್ಮಯ್ಯ, ದಸಂಸ ಕೃಷ್ಣ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಒಂದನೇ ಪುಟದಿಂದ

'ಯುವ ಸಂಭ್ರಮ' ಅಂಗಳ

ಭಾರತೀ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಜಾನಪದ ಕಲಾಪ್ರಕಾರಗಳಾದ ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ, ಕಂಸಾಳೆ ನೃತ್ಯದ ರಸದೌತಣ ನೀಡಿದರೆ, ಹೊಳೆನರಸೀಪುರದ ಸರ್ಕಾರಿ ಹೋಮ್‌ಸೈನ್ಸ್ ಕಾಲೇಜ್ ಫಾರ್ ವುಮೇನ್, ರಾಮನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಮೈಸೂರು ವಿವಿ ಎಂಸಿಎಂ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು 'ಸಂಘಟನೆ ಹಾಗೂ ಸಹಬಾಳ್ವೆಯೇ ಶಕ್ತಿ' ಎಂಬ ಧ್ಯೇಯವಾಕ್ಯದೊಂದಿಗೆ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಿದರು.

ಜೈ ಕಿಸಾನ್: ಹಸಿವಾಗುತ್ತಿದೆಯೇ ಎಂಬುದನ್ನು ಕೇಳದೆ ಅನ್ನ ನೀಡುವ ರೈತರ ಶ್ರಮ, ಕೊಡುಗೆಯನ್ನು ಕಣ್ಣಿಗೆ ಕಟ್ಟುವಂತೆ ಹಾಡು–ನೃತ್ಯ ಹಾಗೂ ಸಂಭಾಷಣೆಯ ಮೂಲಕ ಪ್ರಸ್ತುತಪಡಿಸಿದ ಪಾಂಡವಪುರ ದೇವೇಗೌಡನಕೊಪ್ಪಲಿನ ಜ್ಞಾನಬಂಧು ವಿದ್ಯಾಲಯ ಹಾಗೂ ಹುಣಸೂರಿನ ಕರಿಮುದ್ದನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ನೆರೆದಿದ್ದ ಯುವ ಸಮೂಹದ ಮನಗೆದ್ದರಲ್ಲದೆ ಜೈ ಕಿಸಾನ್ ಘೋಷಣೆ ಮೊಳಗಿಸಿದರು.

ಪಾಂಡವಪುರದ ವಿಜಯ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ಕರ್ನಾಟಕದ ಕೊಡುಗೆ ವಿಷಯದಡಿ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣನವರ ವೀರಾವೇಶದ ಹೋರಾಟ ಸ್ಮರಿಸಿದರೆ, ಮೈಸೂರಿನ ಬನ್ನಿಮಂಟಪ ಬಿ.ಬಡಾವಣೆಯಲ್ಲಿನ ಸಾಯಿರಂಗ ವಿದ್ಯಾಸಂಸ್ಥೆ ಉಚಿತ ಕಿವುಡು ಗಂಡು ಮಕ್ಕಳ ವಸತಿ ಶಾಲೆಯ ಮಕ್ಕಳು ಸಾಮ್ರಾಟ ಅಶೋಕನ ಇತಿಹಾಸ ತಿಳಿಸಿಕೊಟ್ಟರು. ಹಾಗೆಯೇ ರಾಮನಗರ ಈಜುರಿನ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಲಿಂಗ ಸಮಾನತೆಯ ಮಹತ್ವ ತಿಳಿಸುವುದರ ಜೊತೆಗೆ ಸಮಾನ ಅವಕಾಶ ನೀಡಿದರೆ ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆ ಸಾಧಕಿಯಾಗಲಿದ್ದಾಳೆ ಎಂಬುದನ್ನು ಅರ್ಥವತ್ತಾದ ಹಿನ್ನೆಲೆ ಸಂಗೀತ ಹಾಗೂ ನೃತ್ಯಾಭಿನಯದ ಮೂಲಕ ನೋಡುಗರ ಮನಮುಟ್ಟಿಸಿದರು.

ದಸರಾ ವೈಭವ: ಶ್ರೀರಂಗಪಟ್ಟಣದ ಓಂ ಶ್ರೀ ನಿಕೇತನ ಕಾಂಪೋಸಿಟ್ ಪ್ರೀ ಯುನಿವರ್ಸಿಟಿ ಕಾಲೇಜು ವಿದ್ಯಾರ್ಥಿಗಳು ವಿಶ್ವವಿಖ್ಯಾತ ದಸರಾ ವೈಭವ, ಪರಂಪರೆ, ಗಜಪಡೆಯ ಕುರಿತು ಬೆಳಕು ಚೆಲ್ಲಿದರೆ, ಮೈಸೂರು ರಾಜೇಂದ್ರನಗರದ ಶ್ರೀ ಛಾಯಾದೇವಿ ಬಿ.ಎಡ್ ಕಾಲೇಜು ವಿದ್ಯಾರ್ಥಿಗಳ ಕೃಷ್ಣಾವತಾರ ನೃತ್ಯ ಪ್ರದರ್ಶನ ನೀಡಿದರು. ಇದೇ ವೇಳೆ ನೃತ್ಯ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಎಸ್‌ಪಿ ಸೀಮಾ ಲಾಟ್ಕರ್ ಇನ್ನಿತರರು ಸ್ಮರಣಿಕೆ ನೀಡಿ ಅಭಿನಂದಿಸಿದರು.

200ಕ್ಕೂ ಅಧಿಕ ಉಗ್ರರು ಬಲಿ

ಇಸ್ರೇಲ್ ರಕ್ಷಣಾ ಪಡೆ (IDF) ಹಮಾಸ್‌ನ ಹಠಾತ್ ದಾಳಿಗೆ ಪ್ರತಿಕ್ರಿಯೆಯಾಗಿ 'ಐರನ್ ಸ್ವೋರ್ಡ್ಸ್' ಹೆಸರಿನಲ್ಲಿ ಕಾರ್ಯಾಚರಣೆ ಪ್ರಾರಂಭಿಸಿದೆ. ವಾಯು, ಹಮಾಸ್ ಉಗ್ರರ ನೆಲೆಯಾಗಿರುವ ಗಾಜಾ ಪಟ್ಟಿ ಮೇಲೆ ವೈಮಾನಿಕ ದಾಳಿ ನಡೆಸಿರುವ ಇಸ್ರೇಲ್ ಸೈನಿಕರು ಸುಮಾರು 200ಕ್ಕೂ ಅಧಿಕ ಉಗ್ರರನ್ನು ಹೊಡೆದುರುಳಿಸಿದ್ದಾರೆ. ಉಗ್ರರು ವಾಸ್ತವ್ಯ ಹೂಡಿರುವ ಕಟ್ಟಡಗಳ ಮೇಲೆ ರಾಕೆಟ್ ದಾಳಿ ನಡೆಸಲಾಗುತ್ತಿದೆ.

ಹಮಾಸ್ ಉಗ್ರರು ತಮ್ಮ ಈ ದಾಳಿಯನ್ನು "ಆಪರೇಷನ್ ಅಲ್–ಅಕ್ಸಾ ಫ್ಲಡ್" ಎಂದು ಹೇಳಿಕೊಂಡಿದ್ದಾರೆ. ಇಸ್ರೇಲ್‌ನ ರಕ್ಷಣಾ ಸಚಿವ ಯೋವ್ ಗ್ಯಾಲಂಟ್, "ಐಡಿಎಫ್ ಪಡೆಗಳು ಪ್ರತಿ ಸ್ಥಳದಲ್ಲಿ ಶತ್ರುಗಳ ವಿರುದ್ಧ ಹೋರಾಡುತ್ತಿವೆ. ಭದ್ರತಾ ಸೂಚನೆಗಳನ್ನು ಅನುಸರಿಸುವಂತೆ ನಾನು ಇಸ್ರೇಲ್‌ನ ಎಲ್ಲಾ ನಾಗರಿಕರಿಗೆ ಕರೆ ನೀಡುತ್ತೇನೆ ಎಂದಿದ್ದಾರಲ್ಲದೇ ಉಗ್ರರ ವಿರುದ್ಧ ಯುದ್ಧ ಸಾರಿರುವುದಾಗಿ ಘೋಷಿಸಿದ್ದಾರೆ. ಹಮಾಸ್ ಉಗ್ರರು ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಿದ ಬೆನ್ನಲ್ಲೇ ಇಸ್ರೇಲ್ ಯುದ್ಧ ಘೋಷಿಸಿದ್ದು, ಈ ಸಂಬಂಧ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, "ಇಸ್ರೇಲ್ ನಾಗರಿಕರೆ ನಾವು ಯುದ್ಧದಲ್ಲಿದ್ದೇವೆ. ಇದು ಕಾರ್ಯಾಚರಣೆಯಲ್ಲ ಯುದ್ಧ" ಎಂದು ಘೋಷಿಸಿದ್ದಾರೆ. ಹಮಾಸ್ ಇದಕ್ಕೆ ಅಭೂತಪೂರ್ವ ಬೆಲೆ ತೆರಲಿದೆ. ಶತ್ರುಗಳು ಹಿಂದೆಂದೂ ಕಾಣದಂತಹ ಪ್ರತಿಕ್ರಿಯೆಯನ್ನು ಎದುರಿಸಲಿದ್ದಾರೆ ಎಂದಿದ್ದಾರೆ.

ಭಾರತೀಯರಿಗಾಗಿ ಸಹಾಯವಾಣಿ: ಇಸ್ರೇಲ್ ಗಡಿಯಲ್ಲಿ ಯುದ್ಧದ ವಾತಾವರಣ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಭಾರತೀಯ ರಾಯಭಾರ ಕಚೇರಿಯಿಂದ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ. ಸ್ಥಳೀಯ ಅಧಿಕಾರಿಗಳು ನೀಡುವ ಸುರಕ್ಷತಾ ಮಾನದಂಡಗಳನ್ನು ಅನುಸರಿಸಿ. ಅನಗತ್ಯ ಸಂಚಾರ ಬೇಡ ಎಂದು ತಿಳಿಸಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿರುವುದಲ್ಲದೇ, ಇಸ್ರೇಲಿ ಹೋಂ ಫ್ರಂಟ್ ಕಮಾಂಡ್ ವೆಬ್‌ಸೈಟ್ (www.oref.il.in) ಅಥವಾ ಅವರ ಸನ್ನದ್ಧತೆಯ ಕರಪತ್ರವನ್ನು ನೋಡಿ. ತುರ್ತು ಸಂದರ್ಭದಲ್ಲಿ +97235226748 ಅನ್ನು ಸಂಪರ್ಕಿಸಿ ಅಥವಾ cons1.telaviva@mea.gov.in ನಲ್ಲಿ ಸಂದೇಶ ರವಾನಿಸಿ. ಯಾವುದೇ ಹೆಚ್ಚಿನ ಮಾರ್ಗದರ್ಶನಕ್ಕಾಗಿ ರಾಯಭಾರ ಕಚೇರಿಯ ಸಿಬ್ಬಂದಿ ನಿಮ್ಮ ಸಹಾಯಕ್ಕೆ ಬರುತ್ತಾರೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಇಸ್ರೇಲ್‌ಗೆ ಮೋದಿ ಅಭಯ: ಈ ನಡುವೆ ನಿಮ್ಮೊಂದಿಗೆ ನಾವಿದ್ದೇವೆ ಎಂದು ಭಾರತ ಪ್ರಧಾನಿ ನರೇಂದ್ರ ಮೋದಿಯವರು ಇಸ್ರೇಲ್‌ಗೆ ರವಾನಿಸಿರುವ ಸಂದೇಶದಲ್ಲಿ ತಿಳಿಸಿದ್ದಾರೆ. ಇಸ್ರೇಲ್ ಮೇಲೆ ಹಮಾಸ್ ಉಗ್ರರು ನಡೆಸಿದ ಸಾಳಿಯಲ್ಲಿ ಸಾವನ್ನಪ್ಪಿರುವವರಿಗೆ ಸಂತಾಪ ಸೂಚಿಸಿರುವ ಅವರು, ಕಷ್ಟ ಸಮಯದಲ್ಲಿ ಭಾರತ ಇಸ್ರೇಲ್‌ನೊಂದಿಗೆ ನಿಲ್ಲುತ್ತದೆ ಎಂದು ತಿಳಿಸಿದ್ದಾರೆ.

ಸಜೀವ ದಹನ

ರಾಮಸ್ವಾಮಿ ರೆಡ್ಡಿ ಎಂಬುವರಿಗೆ ಸೇರಿದ ಈ ಗೋಡೌನ್‌ನಲ್ಲಿ ಪಟಾಕಿ ಸಂಗ್ರಹಿಸಲು ಪರವಾನಗಿ ಪಡೆಯಲಾಗಿದೆ. ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತೇ ಎಂಬುದರ ಬಗ್ಗೆ ಪರಿಶೀಲಿಸಲಾಗುವುದು ಎಂದು ತಹಶೀಲ್ದಾರರು ತಿಳಿಸಿದ್ದಾರೆ. ಕನಕಪುರದಲ್ಲಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾತ್ರಿ ವೇಳೆಗೆ ಅತ್ತಿಬೆಲೆಗೆ ಆಗಮಿಸಿ, ರಕ್ಷಣಾ ಕಾರ್ಯವನ್ನು ವೀಕ್ಷಿಸಿದರು ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದರು.

ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಡಿ.ಕೆ.ಶಿವಕುಮಾರ್ ಘೋಷಿಸಿದರು. ದುರಂತದಲ್ಲಿ ಗಾಯಗೊಂಡಿರುವ ಏಳು ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪಟಾಕಿ ದುರಂತದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೂರವಾಣಿ ಮೂಲಕ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದು, ನಾಳೆ (ಭಾನುವಾರ) ಘಟನಾ ಸ್ಥಳಕ್ಕೆ ಭೇಟಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.



ಜೆಡಿಎಸ್ ಮುಖಂಡರು ಹಾಗೂ ಆತ್ಮೀಯ ಸ್ನೇಹಿತರಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಮಾಜಿ ನಿರ್ದೇಶಕರು ಹಾಗೂ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರೂ ಆದ ಜೆಡಿಎಸ್ ಮುಖಂಡ ಟಿ.ಸೋಮು ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ವಿಜೃಂಭಣೆಯಿಂದ ಆಚರಿಸಿದರು.

ಮರಸೆ, ಮಾಕನಹುಂಡಿಯಲ್ಲಿ ಡಾ.ಯತೀಂದ್ರರಿಂದ ಅಹವಾಲು ಸ್ವೀಕಾರ



ಮೈಸೂರು, ಅ. 7–ವರುಣ ಕ್ಷೇತ್ರ ಆಶ್ರಯ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ವರುಣ ಕ್ಷೇತ್ರದ ಮರಸೆ, ಮಾಕನಹುಂಡಿ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ನಂತರ ಮಾತನಾಡಿದ ಅವರು, ವರುಣ ಕ್ಷೇತ್ರದ ಜನರು ನಮ್ಮ ತಂದೆ ಸಿದ್ದರಾಮಯ್ಯ ನವರಿಗೆ ಹೆಚ್ಚು ಮತಗಳನ್ನು ನೀಡಿ ಆಯ್ಕೆ ಮಾಡಿದ್ದರಿಂದಾಗಿ ಅವರು ಮುಖ್ಯಮಂತ್ರಿ ಯಾಗಿದ್ದಾರೆ. ಅವರ ಪರವಾಗಿ ಅಹವಾಲನ್ನು ಸ್ವೀಕರಿಸಲು ನಾನು ಬಂದಿದ್ದೇನೆ. ವರುಣ ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿಪಡಿಸಿದರು ಸಹ ಸಮಸ್ಯೆಗಳು ಇನ್ನೂ ಇದ್ದು ಎಲ್ಲಾ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬಗೆಹರಿಸುವುದಾಗಿ ತಿಳಿಸಿದರು.

ಅಹವಾಲುಗಳಲ್ಲಿ ಸೈಟ್ ಬೇಕು, ದೇವಸ್ಥಾನ ಜೀರ್ಣೋದ್ಧಾರ ಮಾಡಿಸಿಕೊಡಿ, ಬಸ್‌ಸ್ಟ್ಯಾಂಡ್ ನಿರ್ಮಿಸಿ ಕೊಡಿ, ಕಾಂಪೌಂಡ್ ನಿರ್ಮಿಸಿಕೊಡಿ, ರಸ್ತೆ ಡಾಂಬರೀಕರಣ ಮಾಡಿಸಿಕೊಡಿ, ಹದ್ದುಬಸ್ತು ಖಾತೆ ಮಾಡಿಸಿಕೊಡಿ, ಬಸ್ ಹಾಕಿಸಿಕೊಡಿ, ಇನ್ನೂ ಹಲವಾರು ಸಮಸ್ಯೆಗಳು ಮಂಡನೆಯಾಗಿವೆ. ಅವುಗಳಿಗೆ ಹಂತ ಹಂತವಾಗಿ ಪರಿಹಾರ ಕಲ್ಪಿಸಲಾಗುವುದು ಎಂದರು. ಮಾಕನಹುಂಡಿ ಗ್ರಾಮಕ್ಕೆ ಡಾ. ಯತೀಂದ್ರ ಸಿದ್ದರಾಮಯ್ಯ ಆಗಮಿಸಿದಾಗ ಯುವಕರು ಬೃಹತ್ ಸೇಬಿನ ಹಾರ ಹಾಕಿ ಸ್ವಾಗತಿಸಿದರು. ಇದೇ ವೇಳೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು. ತಹಸೀಲ್ದಾರ್ ಗಿರೀಶ್, ಕಡಕೊಳ ಪಟ್ಟಣಪಂಚಾಯಿತಿ ಮುಖ್ಯಾಧಿಕಾರಿ ಹೆಚ್.ಆರ್. ದೀಪ, ಜಿ.ಪಂ. ಮಾಜಿ ಸದಸ್ಯ ಪಟೇಲ್ ಜವರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ತಾ.ಪಂ. ಮಾಜಿ ಸದಸ್ಯ ಶ್ರೀಕಂಠ ತೊಂಡೇಗೌಡ, ತಾ.ಪಂ. ಮಾಜಿ ಅಧ್ಯಕ್ಷ ಮಂಜುಳ ಮಂಜುನಾಥ್, ಗ್ರಾಪಂ. ಅಧ್ಯಕ್ಷೆ ರಾಜಮ್ಮ ಮಹದೇವು, ಮುಖಂಡರಾದ ಸಿದ್ದನಾಯಕ, ಮಾಕನಹುಂಡಿ ರವಿ, ಸಿದ್ದಯ್ಯ, ರಮೇಶ್ ಮುದ್ದೇಗೌಡ, ರಾಂಪುನಹುಂಡಿ ರವಿ, ಟಿ.ಎಂ. ಸಂತೋಷ್, ಶಿವು, ರಾಜು ಸಿ., ಸಂತೋಷ್‌ಕುಮಾರ್ ಟಿ, ಕುಂಬ್ರಳ್ಳಿಮಠ ಮಹದೇವು, ಪುಟ್ಟಸ್ವಾಮಿ, ರಾಮು, ಆಪ್ತ ಸಹಾಯಕರಾದ ಶಿವಸ್ವಾಮಿ, ಪ್ರದೀಪ್ ಕುಮಾರ್, ನಾಗರಾಜು ಹಾಜರಿದ್ದರು.

ಹಸ್ತಪ್ರತಿಗಳ ಸೂಕ್ಷ್ಮ ಅಧ್ಯಯನದ ಅವಶ್ಯಕತೆ ಇದೆ

ಹಿರಿಯ ಹಸ್ತಪ್ರತಿ ತಜ್ಞೆ ಡಾ.ವೈ.ಸಿ.ಭಾನುಮತಿ ಅಭಿಮತ



ಮೈಸೂರು, ಅ.7(ಎಂಕೆ)– ಹಸ್ತಪ್ರತಿಗಳು ಇನ್ನಷ್ಟು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಬೇಕಾಗಿದೆ ಎಂದು ಹಿರಿಯ ಹಸ್ತಪ್ರತಿ ತಜ್ಞೆ ಡಾ.ವೈ.ಸಿ.ಭಾನುಮತಿ ಅಭಿಪ್ರಾಯಪಟ್ಟರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮಗೆ ಬೇಕಾದ ಶಿಕ್ಷಣಕ್ಕೆ ಆದ್ಯತೆ ನೀಡಿರುವ ಹಸ್ತಪ್ರತಿಗಳು ಚಾರಿತ್ರಿಕ ಭಂಡಾರಗಳಾಗಿವೆ ಎಂದರು.

ಹಸ್ತಪ್ರತಿಗಳಿಂದ ಸ್ಥಳಗಳಲ್ಲಿ ಆಗಿರುವಂತಹ ಬದಲಾವಣೆ ಅಲ್ಲಿನ ಪ್ರಾಕೃತಿಕ ವಿಕೋಪಗಳ ಜೊತೆಗೆ ಕಾಲಕಾಲಕ್ಕೆ ಆಗಿರುವ ಬದಲಾವಣೆಯನ್ನು ತಿಳಿಯಬಹುದಾಗಿದೆ. ಅಲ್ಲದೆ ಸ್ಥಳ ನಾಮಗಳು ಹೇಗೆ ಬದಲಾವಣೆಯಾದವು ಎಂಬುದನ್ನು ಕೂಡ ಹಸ್ತಪ್ರತಿಗಳ ಮೂಲಕ ತಿಳಿದು ಕೊಳ್ಳಬಹುದಾಗಿದೆ. ಹಸ್ತಪ್ರತಿಗಳಲ್ಲಿ ಜ್ಯೋತಿಷ್ಯ, ಸಮರ ಕಲೆ, ವೈದ್ಯ ಶಾಸ್ತ್ರ, ಮುಂತಾದ ಹಲವಾರು ವಿಚಾರಗಳನ್ನು ತಿಳಿದುಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಹಸ್ತಪ್ರತಿಗಳ ಸೂಕ್ಷ್ಮ ಅಧ್ಯಯನವಾಗಬೇಕು ಎಂದರು.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ವೀರೇಶ ಬಡಿಗೇರ, ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಯಲ್ಲಿನ ಖಾಲಿ ಹುದ್ದೆಗಳ ಭರ್ತಿ

● ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಕಟ ● ಮೊದಲ ಹಂತದಲ್ಲಿ ಸಾವಿರ ಹೊಸ ಬಸ್ ಖರೀದಿ ● ಹವಾನಿಯಂತ್ರಿತವಲ್ಲದ 45 ಸ್ಲೀಪರ್ ಸೇರಿದಂತೆ 145 ಬಸ್‌ಗಳಿಗೆ ಚಾಲನೆ

ಬೆಂಗಳೂರು, ಅ.7(ಕೆಎಂಶಿ)– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ಪ್ರಕಟಿಸಿದ್ದಾರೆ.


ಪ್ರಯಾಣಿಕರ ಅಗತ್ಯಕ್ಕೆ ತಕ್ಕಂತೆ 12 ಸಾವಿರ ಹೊಸ ಬಸ್‌ಗಳ ಅಗತ್ಯವಿದ್ದು, ಮೊದಲ ಹಂತದಲ್ಲಿ ಒಂದು ಸಾವಿರ ಬಸ್‌ಗಳನ್ನು ಖರೀದಿಸುವುದಾಗಿ ಹೇಳಿದ್ದಾರೆ.

ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಜತೆಗೂಡಿ ಹವಾನಿಯಂತ್ರಿತವಲ್ಲದ 45 ಸ್ಲೀಪರ್ ಬಸ್‌ಗಳು ಸೇರಿದಂತೆ 145ಹೊಸ ಬಸ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಶಕ್ತಿ ಯೋಜನೆ ಅನುಷ್ಠಾನದ ನಂತರ 72 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ ಎಂದು ತಿಳಿಸಿದರು.

ಡೀಸೆಲ್ ಬೆಲೆ ಏರಿಕೆ ಸೇರಿದಂತೆ ವಿವಿಧ ಕಾರಣಗಳಿಗೆ ಸಾರಿಗೆ ನಿಗಮಗಳು ಭಾರಿ ನಷ್ಟದಲ್ಲಿದ್ದರೂ ಕಳೆದ 7 ವರ್ಷಗಳಿಂದ ಪ್ರಯಾಣಿಕರ ದರ ಹೆಚ್ಚಿಸಿಲ್ಲ. ದರ ಹೆಚ್ಚಳ ಮಾಡದೆಯೇ ಶಕ್ತಿ ಯೋಜನೆಯಡಿ ರಾಜ್ಯಾದ್ಯಂತ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಖಾಲಿ ಹುದ್ದೆ ಭರ್ತಿ, ಹೊಸ ಬಸ್‌ಗಳ ಖರೀದಿ ಹಾಗೂ ಅನುಕಂಪದ ಆಧಾರಿತ ಬಾಕಿಯಿದ್ದ ಹುದ್ದೆಗಳನ್ನು ಏಕಕಾಲಕ್ಕೆ ಭರ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹೆಣ್ಣುಮಕ್ಕಳ ಸಬಲೀಕರಣದ ಉದ್ದೇಶಕ್ಕಾಗಿ ನಾವು ಶಕ್ತಿ ಯೋಜನೆ ಜಾರಿಗೊಳಿಸಿದ್ದೇವೆ. ಮೈಸೂರಿಗೆ ಹೋಗುವಾಗ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿ ಸಮಾಜದ ಸಾಮಾನ್ಯ ಜನರು ಹೇಗೆ ಸಂಚರಿಸುತ್ತಾರೆಂಬ ಅನುಭವ ಪಡೆದುಕೊಳ್ಳಲು ನನ್ನ ಪತ್ನಿಗೆ ಸಲಹೆ ನೀಡಿದ್ದೇನೆ. ನಾನು ಕೂಡ ಹಿಂದೆ ಶಾಸಕನಾಗಿದ್ದಾಗ ರಾಮಲಿಂಗಾರೆಡ್ಡಿ ಅವರ ಜತೆ ಶಾಸಕರಿಗೆ ಮೀಸಲಾದ ಸೀಟಿನಲ್ಲಿ ಕೂತು ಪ್ರಯಾಣ ಮಾಡಿದ್ದೇವೆ ಎಂದರು.



ಮೈಸೂರಿನ ಡಾ. ರಾಜ್ ಶಿವ ಸೈನ್ಯ ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಬಸವ ಜಯಂತಿ ಅಂಗವಾಗಿ ಬಸವಣ್ಣ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರನಟ ಸೋಮಣ್ಣ, ಬಿ.ಎನ್.ರವಿ, ಮಹೇಶ್, ದೊರೆ, ಬಸವರಾಜು ಉಪಸ್ಥಿತರಿದ್ದರು.

ಭಾರತೀಯ ನೃತ್ಯ, ಸಂಗೀತ ಬಿಂಬಿಸುವ ನೃತ್ಯಾಂಕುರ

ಮೈಸೂರು, ಅ.7(ಎಸ್‌ಪಿಎನ್)– ಮೈಸೂರು ಕಲಾಮಂದಿರದಲ್ಲಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರಿನ ನೃತ್ಯ ವಿದ್ಯಾಪೀಠ ಹಾಗೂ ಅಕಾಡೆಮಿ ಆಫ್ ಕ್ಲಾಸಿಕಲ್ ಡಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ ಸಹಯೋಗದೊಂದಿಗೆ ಆಯೋಜಿಸಿದ್ದ ನೃತ್ಯಾಂಕುರ–2023ಕ್ಕೆ ಹಿರಿಯ ರಂಗಕರ್ಮಿ ಮೈಮ್ ಗೌತಮ್ ಚಾಲನೆ ನೀಡಿದರು.

ನಂತರ ಮಾತನಾಡಿ, ಧಾರ್ಮಿಕ ಅಂಶಗಳು ಭಾರತೀಯ ಪರಂಪರೆ, ಕಲೆಗಳಲ್ಲಿ ಅಗಾಧವಾಗಿದೆ. ಭಾರತೀಯ ಕಲೆಗಳ ಕಲಿಕೆಗೆ ಹೆಚ್ಚಿನ ಆಸಕ್ತಿ ವಹಿಸುವುದು ಪೋಷಕರ ಕರ್ತವ್ಯ. ಕಲೆಗಳ ಉಳಿಯುವಿಕೆಯಿಂದ ನಮ್ಮತನ, ನಮ್ಮ ಸ್ವಾಭಿಮಾನ, ನಮ್ಮ ಸಂಸ್ಕೃತಿ ಉಳಿಯುತ್ತದೆ ಎಂದು ಅಭಿಪ್ರಾಯಪಟ್ಟರು. ಭಾರತೀಯ ಕಲೆಗಳಲ್ಲಿ ಒಂದಾದ ನೃತ್ಯ ಪ್ರದರ್ಶನ, ಹಲವು ಬಗೆಯ ಪರಿಕರಗಳನ್ನು ಪರಿಚಯಿಸುತ್ತದೆ. ನೃತ್ಯ ಕಲಿಕೆ, ವಿವಿಧ ಸ್ವರೂಪ ಭಂಗಿಗಳ ಕಲಿಕೆ, ಗೆಜ್ಜೆ, ನೃತ್ಯದ ಕಥಾವಸ್ತುವಿಗೆ ತಕ್ಕಂತೆ ಅಲಂಕಾರ, ನೃತ್ಯ ಪ್ರದರ್ಶನದಲ್ಲಿ ಒಂದು ಕಥಾವಸ್ತುವಿನ ರೂಪಕ ಸಂಪೂರ್ಣ ಅನಾವರಣಗೊಳ್ಳುತ್ತದೆ. ಇದಕ್ಕೆ ಪೋಷಕರು, ವಿದ್ಯಾರ್ಥಿಗಳು ಸಾಥ್ ನೀಡಿ, ಭಾರತೀಯ ಸಂಸ್ಕೃತಿ ಉಳಿವಿಗೆ ಆಸಕ್ತಿ ತೋರುತ್ತಿರುವುದೇ ಸಾಕ್ಷಿ ಎಂದರು. ಯಾವುದೇ ಕೆಲಸದ ಒತ್ತಡಕ್ಕೆ ಮಣಿದು ಮದ್ಯ ವ್ಯಸನಿಗಳಾದರೆ, ನಮ್ಮಲ್ಲಿರುವ ಒತ್ತಡ ಕಡಿಮೆ ಆಗುವುದಿಲ್ಲ. ಬದಲಾಗಿ, ಮತ್ತಷ್ಟು ಹೆಚ್ಚಿಸುತ್ತದೆ. ಇದರ ಬದಲು ಪ್ರವೃತ್ತಿಯಾಗಿ ಕಲೆಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು ಉತ್ತಮ. ನಾನು ಜೀವನಕ್ಕಾಗಿ ಬೇರೆ ವೃತ್ತಿಯನ್ನು ಅವಲಂಬಿಸಿದ್ದೇನೆ. ಆದರೆ, ನನ್ನಲ್ಲಿನ ಒತ್ತಡ ಕಡಿಮೆ ಮಾಡಿಕೊಳ್ಳಲು ಬಿಡುವಿನ ವೇಳೆ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದರು.





ಈ ದಿಸೆಯಲ್ಲಿ ನೃತ್ಯ ವಿದ್ಯಾಪೀಠದ ವತಿಯಿಂದ ಮಕ್ಕಳಲ್ಲಿ ನೃತ್ಯ, ಸಂಗೀತ ಕಲಿಸಲು ಹಲವು ವರ್ಷಗಳಿಂದ ಪ್ರಯತ್ನ ನಡೆಯುತ್ತಿದ್ದು, ಇದರಿಂದ ಮಕ್ಕಳಲ್ಲಿ ಭಾರತೀಯ ಪರಂಪರೆ, ಸಂಸ್ಕೃತಿ ಅನಾವರಣಗೊಳ್ಳುತ್ತಿರುವುದು ಸಂತೋಷದಾಯಕ. ಇದರ ಜೊತೆಗೆ ಸಂಸ್ಕೃತಿ ಚಿಂತಕರಿಂದ ನಮ್ಮ ನೆಲದ ಧರ್ಮದ ಬಗ್ಗೆ ಪ್ರವಚನ ನೀಡುತ್ತಿರುವುದು ಉತ್ತಮ ಅಂಶ ಹಾಗೂ ಶಾಸ್ತ್ರೀಯ ನೃತ್ಯ, ಸಂಗೀತ, ಚಿತ್ರಕಲೆ ಕಲಿಕೆಯಿಂದ ಧರ್ಮ ಉಳಿವಿಗೆ ಸಹಕಾರಿಯಾಗುತ್ತದೆ ಎಂದು ಕಿವಿಮಾತು ಹೇಳಿದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ವತ್ ಹಂತದ ವಿದ್ಯಾರ್ಥಿನಿಯರಿಂದ ನಟುವಾಂಗ ನಿರ್ವಹಣಾ ಪ್ರದರ್ಶನ ಪ್ರೇಕ್ಷಕರ ಮನಗೆದ್ದಿತು. ವಿದುಷಿ ಸಿ.ಎನ್.ಅನಿತ(ನಟುವಾಂಗ), ವಿದುಷಿ ನಯನ ನಾಗರಾಜ್(ಹಾಡುಗಾರಿಕೆ, ವಿದ್ವಾನ್ ಜಿ.ಟಿ.ಸ್ವಾಮಿ(ಮೃದಂಗ), ವಿದ್ವಾನ್ ತಾಂಡವಮೂರ್ತಿ(ಪಿಟೀಲು) ನುಡಿಸಿ ಸಾಥ್ ನೀಡಿದರು. ಅಲ್ಲದೆ, ಎಂ.ಕೆ. ಶೋಭಾ, ಸುಮಾರಾಣಿ ಕಾರ್ಯಕ್ರಮ ನಿರೂಪಿಸಿದರು. ಎಸ್.ಅನಘ, ನಯನ ನಾಗರಾಜ್, ಡಿವಿಎಸ್‌ಕೆ ಶ್ರೀಹರಿಪ್ರಿಯ, ವೈಷ್ಣವಿ ಎಲ್.ಅರಸ್ ತಾಳ ನುಡಿಸಿದರು.

ವೇದಿಕೆಯಲ್ಲಿ ವಿದ್ವಾನ್ ನಾರಾಯಣ ದೇಸಾಯಿ ಧರ್ಮದಲ್ಲಿ ಆಚರಣೆಯ ಪ್ರಧಾನತೆ ಕುರಿತು ಪ್ರವಚನ ನೀಡಿದರು. ನೃತ್ಯ ವಿದ್ಯಾಪೀಠದ ಸಂಸ್ಥಾಪಕ ನಿರ್ದೇಶಕಿ ವಿದುಷಿ ಸಿ.ಎನ್.ಅನಿತಾ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸಸ್‌ನ ವ್ಯವಸ್ಥಾಪಕಿ ಜಿ.ಕೆ.ಕಮಲ ಉಪಸ್ಥಿತರಿದ್ದರು.

ವಿದೇಶಗಳಿಗೆ ಹಾರಿದ ಮೊಸಳೆಯ 'ಕನ್ನಡ ನೆಲದ ಹಕ್ಕಿಯ ಹಾಡು'

ಮೈಸೂರು, ಅ.7–'ನೆಲದ ಹಕ್ಕಿಯ ಹಾಡು ಟೀಯೀ... ಟೀ..ವ್‌ವಿಟ್...' (An Earthy Ode to Teeyee... teweet...) ಸಾಕ್ಷ್ಯಚಿತ್ರವು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಸ್ಪರ್ಧೆ ಹಾಗೂ ಪ್ರದರ್ಶನಕ್ಕೆ ಆಯ್ಕೆಯಾಗಿದ್ದು, ಅಮೆರಿಕಾದ ನ್ಯೂಯಾರ್ಕ್, ಬೊಸ್ಟಾನ್, ನಪ್ಲೆಸ್ ಹಾಗೂ ಮಲೇಷಿಯಾದ ಕೌಲಾಲಂಪೂರ್, ಚೀನಾದ ಯಾಆ್ಯನ್ ನಗರದಲ್ಲಿ ಪ್ರದರ್ಶನಗೊಳ್ಳಲಿದೆ.



ಮೈಸೂರಿನ ಹೊರ ವಲಯ ರವೀಂದ್ರನಾಥ ಟ್ಯಾಗೂರ್ ನಗರದಲ್ಲಿ ಈ ಚಿತ್ರವನ್ನು ವನ್ಯಜೀವಿ ಛಾಯಾಗ್ರಾಹಕ ಡಾ. ಲೋಕೇಶ್ ಮೊಸಳೆ ಚಿತ್ರಿಸಿದ್ದಾರೆ.

ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿ ಅಕ್ಟೋಬರ್ 19ರಿಂದ 29ರವರೆಗೆ ನಡೆಯಲಿರುವ Wildlife conservation film festivalನಲ್ಲಿ ಪ್ರದರ್ಶನಗೊಳ್ಳಲಿದೆ.

ಅಮೆರಿಕಾದ ಬೊಸ್ಟಾನ್ (Boston) ನಗರದ ಪರ್ಲ್ ಸ್ಟ್ರೀಟ್ ಸ್ಕ್ರೀನಿಂಗ್ ರೂಮ್‌ನಲ್ಲಿ ನವೆಂಬರ್ 13 ರಿಂದ 15ರವರೆಗೆ ನಡೆಯುವ ಚಿತ್ರೋತ್ಸವದಲ್ಲಿ 'ನೆಲದ ಹಕ್ಕಿಯ ಹಾಡು' ಪ್ರದರ್ಶನವಿದೆ.

ಫ್ಲೋರಿಡಾದ ನಪ್ಲೇಸ್ ನಗರದಲ್ಲಿರುವ Rookery Bay Environmental Education Centerನಲ್ಲಿ 2024ರ ಜನವರಿ 16ರಿಂದ 23ರವರೆಗೆ ನಡೆಯುವ ಪ್ರದರ್ಶನಗಳಿಗೆ ಆಹ್ವಾನ ನೀಡಲಾಗಿದ್ದು, ಪ್ರದರ್ಶನದ ನಂತರ ನಡೆಯುವ ಪ್ರಶ್ನೋತ್ತರ –ಚರ್ಚೆ–ಸಂವಾದ ಗಳೊಂದಿಗೆ ಕೊನೆಯ ಎರಡು ದಿನಗಳು ವಿಶ್ವ ಪ್ರಸಿದ್ಧ ನಿಸರ್ಗ ತಾಣಗಳಾದ Everglades National Partk, Ten thousand Island, Tigertail Beach ಮುಂತಾದ ಸ್ಥಳಗಳಿಗೆ ಆಯ್ದ ಚಿತ್ರ ನಿರ್ದೇಶಕರುಗಳಿಗೆ ಪ್ರವಾಸ ಏರ್ಪಡಿಸಲಾಗಿದೆ.

'15ನೇ ಅಂತಾರಾಷ್ಟ್ರೀಯ ಕೌಲಾಲಂಪುರ್ ಇಕೋ ಫಿಲಂ ಫೆಸ್ಟಿವಲ್' ಅಕ್ಟೋಬರ್ 19ರಿಂದ 26ರವರೆಗೂ ನಡೆಯಲಿದ್ದು, ಮಲೇಷಿಯಾ ಸರ್ಕಾರದ NFDC ಈ ಚಿತ್ರೋತ್ಸವದ ನೇತೃತ್ವ ವಹಿಸಿದೆ.



ಚೀನಾ ದೇಶದ ಯಾಆ್ಯನ್ ನಗರದಲ್ಲಿ ಅಕ್ಟೋಬರ್ 21ರಿಂದ 27ರವರೆಗೆ ನಡೆಯುತ್ತಿರುವ ಅಂತಾರಾಷ್ಟ್ರೀಯ ಗ್ರೀನ್ ಫಿಲಂ ವೀಕ್‌ಗೆ 'ಹಕ್ಕಿಯ ನೆಲದ ಹಾಡು' ಚಿತ್ರವು ಸ್ಪರ್ಧೆ ಹಾಗೂ ಪ್ರದರ್ಶನಕ್ಕೆ ಆಯ್ಕೆಯಾಗಿದೆ.

ಚೀನಾ ಸರ್ಕಾರದ State Administration of Press Public Relation Radio Film and Television ಸಹಯೋಗದಲ್ಲಿ ಈ ಚಿತ್ರೋತ್ಸವ ನಡೆಯಲಿದೆ. ಪ್ರತಿಷ್ಠಿತ ಈ ಚಿತ್ರೋತ್ಸವವನ್ನು 'ಯಾಆ್ಯನ್ ಜೈಂಟ್ ಪಾಂಡ ಅಂಡ್ ನೇಚರ್ ಫಿಲಂ ವೀಕ್' (Ya'an Giant Ponda and Nature Film Week) ಎಂದು ಖ್ಯಾತಗೊಂಡಿದೆ.

ನಗರೀಕರಣದ ಒತ್ತಡದಿಂದಾಗಿ ವನ್ಯಜೀವಿಗಳ ಬದುಕಿನ ಹೋರಾಟದ ಕಥೆಯನ್ನು 'ನೆಲದ ಹಕ್ಕಿಯ ಹಾಡು' ಪ್ರಸ್ತುತಪಡಿಸಲಿದ್ದು, ಸಕಲ ಜೀವಿಗಳ ಬದುಕಿನ ಸೂಕ್ಷ್ಮತೆಯನ್ನು ಅರಿಯಲು ಈ ಸಾಕ್ಷ್ಯಚಿತ್ರ ಪ್ರೇರೇಪಿಸುವಂತಿದೆ.

ಅನೇಕ ವನ್ಯಜೀವಿಗಳ ದುರಂತ ಬದುಕಿಗೆ ಸಾಕ್ಷಿಯಂತಿರುವ ಈ ಚಿತ್ರ ಮೈಸೂರು ಹೊಸ ಬಡಾವಣೆಯ ವನ್ಯಜೀವಿಗಳ ಸಮಸ್ಯೆಯಾಗಿ ಮಾತ್ರ ಉಳಿದಿಲ್ಲ. ಇದು ವಿಶ್ವದ ಹೊಸ ಹೊಸ ಬಡಾವಣೆಯ ವನ್ಯಜೀವಿಗಳ ಸಮಸ್ಯೆಯಾಗಿರುವುದನ್ನು ಈ ಚಿತ್ರ ಹೇಳುತ್ತದೆ.

ಕನ್ನಡ ಭಾಷೆಯ ಈ ಚಿತ್ರವನ್ನು ಡಾ. ಲೋಕೇಶ್ ಮೊಸಳೆ ರೂಪಿಸಿದ್ದು, ಸ್ಕ್ರಿಪ್ಟ್ ಮತ್ತು ಸಿನಿಮಾಟೊಗ್ರಫಿ ಮಾಡಿದ್ದಾರೆ. ಸಂಕಲನ–ಎಂ.ಎನ್.ಸ್ವಾಮಿ, ಶಬ್ದವಿನ್ಯಾಸ–ಬಾಬು ಈಶ್ವರ್ ಪ್ರಸಾದ್, ಚಿತ್ರಕಥಾ ನಿರೂಪಣೆ–ಕೆ.ಟಿ.ಕೃಷ್ಣಕಾಂತ್, ಉಪಶೀರ್ಷಿಕೆ–ಕವಿ ಕಮಲಾಕರ ಭಟ್, ಕವಿತೆ ನುಡಿರಾಗ–ಪಿಚ್ಚಳ್ಳಿ ಶ್ರೀನಿವಾಸ್ ಗೋಪಾಲಕೃಷ್ಣ ಅಡಿಗರ 'ಭೂಮಿಗೀತ' ಕವನದ ಸಾಲುಗಳನ್ನು ಚಿತ್ರದಲ್ಲಿ ಬಳಸಲಾಗಿದೆ.

ಮೈಸೂರಿನ ಗ್ರಾವಿಟಿ ಒನ್ ಪ್ರಸ್ತುತಪಡಿಸಿದ ಈ ಚಿತ್ರವನ್ನು ಧನಂಜಯ್ ಬಸವರಾಜ್, ನಂದೀಶ್ ಬಿಳಿಕೆರೆ ನಿರ್ಮಿಸಿದ್ದಾರೆ.

ಮೈಸೂರಿನ ದಸರಾ ಚಲನ ಚಿತ್ರೋತ್ಸವದಲ್ಲಿ 'ನೆಲದ ಹಕ್ಕಿಯ ಹಾಡು' ಮಾಲ್ ಆಫ್ ಮೈಸೂರ್‌ನ ಐನಕ್ಸ್ ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ವಸ್ತುಪ್ರದರ್ಶನ ಆವರಣದಲ್ಲಿ ಕಲಾಕೃತಿಗಳ ಪ್ರದರ್ಶನ

ಮೈಸೂರು, ಅ.7– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಲಲಿತಕಲಾ ಮತ್ತು ಕರಕುಶಲ ವಿಭಾಗದ ವತಿಯಿಂದ ಲಲಿತಕಲಾ ಮತ್ತು ಕರಕುಶಲ ವಸ್ತು ಪ್ರದರ್ಶನದ ಆವರಣದಲ್ಲಿ ಮಹಿಳೆಯರು ಮತ್ತು ಮಕ್ಕಳು ತಯಾರಿಸಿದ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಕ್ಟೋಬರ್ 18ರಂದು ಬೆಳಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಆಸಕ್ತ ಕಲಾವಿದರಿಂದ ಕಲಾಕೃತಿಗಳನ್ನು ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2440828 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಟಿ.ಪಿ.ಕೈಲಾಸಂ ವಿರಚಿತ 'ಗಂಡಸ್ಕತ್ರಿ' ನಾಟಕ ಪ್ರದರ್ಶನ

ಮೈಸೂರು,ಅ.7–ಅದಮ್ಯ ರಂಗಶಾಲೆ ವತಿಯಿಂದ ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ಖ್ಯಾತ ನಾಟಕಕಾರ ಟಿ.ಪಿ.ಕೈಲಾಸಂ ರಚನೆಯ 'ಗಂಡಸ್ಕತ್ರಿ' ಎಂಬ ನಾಟಕ ಪ್ರದರ್ಶನವು ಅ.8ರಂದು ಸಂಜೆ 6 ಗಂಟೆಗೆ ಜಯಲಕ್ಷ್ಮಿಪುರಂನ ವಿವೇಕಾನಂದ ಪದವಿಪೂರ್ವ ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ ನಡೆಯಲಿದೆ. ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡುವರು. ನೇಗಿಲಯೋಗಿ ಸಮಾಜಸೇವಾ ಟ್ರಸ್ಟಿನ ಅಧ್ಯಕ್ಷ ಡಿ.ರವಿಕುಮಾರ್ ಅಧ್ಯಕ್ಷತೆ ವಹಿಸುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಮೈಸೂರಿನ ವಿಜಯನಗರ ಉಪವಿಭಾಗದ ಎಸಿಪಿ ಜಿ.ಎಸ್. ಗಜೇಂದ್ರಪ್ರಸಾದ್ ಶಿಬಿರಾರ್ಥಿಗಳಿಗೆ 'ಪ್ರಮಾಣ ಪತ್ರ' ವಿತರಿಸುವರು. ಯುವ ರಂಗಕರ್ಮಿ ವಿನೋದ್ ಸಿ. ಮೈಸೂರು ನಿರ್ದೇಶನದ 'ಗಂಡಸ್ಕತ್ರಿ' ನಾಟಕದಲ್ಲಿ ಮಾನಸ, ಉಲ್ಲಾಸ್, ಮನೋಜ್, ತೇಜಸ್ ಹಾಸನ ಕಲಾವಿದರು ಅಭಿನಯಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.8660103141 ಸಂಪರ್ಕಿಸಬಹುದೆಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಭಾರತದ 100 ಪದಕಗಳ ಸಾಧನೆ

ಭಾರತೀಯ ಕ್ರೀಡಾಪಟುಗಳಿಗೆ ಮೋದಿ ಅಭಿನಂದನೆ

ದೆಹಲಿ, ಅ.7– ಚೀನಾ ಆತಿಥ್ಯದಲ್ಲಿ ನಡೆಯುತ್ತಿರುವ 2023ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತ 100 ಪದಕಗಳ ಐತಿಹಾಸಿಕ ಸಾಧನೆ ಮಾಡಿದೆ. ಈ ಹಿನ್ನೆಲೆಯಲ್ಲಿ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕ್ರೀಡಾಪಟುಗಳನ್ನು ಅಭಿನಂದಿಸಿದ್ದಾರೆ.

13ನೇ ದಿನವಾದ ಶುಕ್ರವಾರ ಒಂದು ಚಿನ್ನ, ಎರಡು ಬೆಳ್ಳಿ, 6 ಕಂಚು ಸೇರಿ 9 ಪದಕಗಳನ್ನು ಬುಟ್ಟಿಗೆ ಹಾಕಿಕೊಂಡಿದ್ದ ಭಾರತೀಯರು, ಪದಕಗಳ ಸಂಖ್ಯೆಯನ್ನು 95ಕ್ಕೆ ಹಿಗ್ಗಿಸಿದ್ದರು. ಶನಿವಾರ ಭಾರತ ಕಬಡ್ಡಿ ಮಹಿಳಾ ತಂಡ ಚಿನ್ನದ ಪದಕವನ್ನು ಗೆಲ್ಲುತ್ತಿದ್ದಂತೆ ಭಾರತದ ಏಷ್ಯನ್ ಗೇಮ್ಸ್‌ನಲ್ಲಿ 100 ಪದಕಗಳ ಸಾಧನೆ ಮಾಡಿತು. ಭಾರತದ ಕ್ರೀಡಾಪಟುಗಳು 100 ಪದಕಗಳ ಸಾಧನೆಯ ಬೆನ್ನಲ್ಲೆ ಪ್ರಧಾನಿ ಟ್ವೀಟ್ ಮಾಡಿ ಅಭಿನಂದನೆ ಸಲ್ಲಿಸಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಮಹತ್ವದ ಸಾಧನೆ. ನಾವು 100 ಪದಕಗಳನ್ನು ತಲುಪಿರುವುದರಿಂದ ಭಾರತದ ಜನರು ರೋಮಾಂಚನಗೊಂಡಿದ್ದಾರೆ. ಭಾರತದ ಈ ಐತಿಹಾಸಿಕ ಸಾಧನೆಗೆ ನೆರವಾಗಿರುವ ಭಾರತದ ಪ್ರತಿಯೊಬ್ಬ ಕ್ರೀಡಾಪಟುವಿಗೂ ನನ್ನ ಹೃದಯ ಪೂರ್ವಕ ಅಭಿನಂದನೆ. ಪ್ರತಿ ವಿಸ್ಮಯಕಾರಿ ಪ್ರದರ್ಶನವು ಇತಿಹಾಸವನ್ನು ಸೃಷ್ಟಿಸಿದೆ ಮತ್ತು ನಮ್ಮ ಹೃದಯವು ಹೆಮ್ಮೆಯಿಂದ ತುಂಬಿದೆ. ಅಕ್ಟೋಬರ್ 10 ರಂದು ನಮ್ಮ ಏಷ್ಯನ್ ಗೇಮ್ಸ್ ಸಾಧಕರ ಜೊತೆ ಸಂವಾದ ನಡೆಸಲು ಎದುರು ನೋಡುತ್ತಿದ್ದೇನೆ ಎಂದು ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ವೀರಶೈವ ಲಿಂಗಾಯತ ಸಮುದಾಯದ ಹಿರಿಯ ಮುಖಂಡ ಗುರುಮಲ್ಲೇಶ್ ಇದ್ದಾರೆ.

ಹುಯಿಲಾಳು ರಾಮಸ್ವಾಮಿಗೆ ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್

ಮೈಸೂರು, ಅ.7–ನವದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯಿಂದ ಕೊಡಲ್ಪಡುವ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್‌ಗೆ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಭಾಜನರಾಗಿದ್ದಾರೆ.



ನವದೆಹಲಿಯಲ್ಲಿ ಡಿ.10 ಮತ್ತು 11ರಂದು ನಡೆಯಲಿರುವ ರಾಷ್ಟ್ರೀಯ ಸಾಹಿತ್ಯ ಸಮ್ಮೇಳನದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಹುಯಿಲಾಳು ರಾಮಸ್ವಾಮಿ ರಂಗಭೂಮಿ ಕಲಾವಿದರಾಗಿದ್ದು, ಸುವರ್ಣ ಕರ್ನಾಟಕ ಪ್ರಶಸ್ತಿ, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮನೆ ಮಂಚಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾಗಿರುವ ಇವರು ಹಲವಾರು ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ನಾಗವಾಲ ಗ್ರಾಪಂ ಸದಸ್ಯರಾಗಿದ್ದಾಗ ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ, ಸಮವಸ್ತ್ರ, ರೈತರಿಗೆ ರಸಗೊಬ್ಬರ, ತೆಂಗಿನ ಸಸಿ ಹಾಗೂ ಇತರ ಸವಲತ್ತುಗಳನ್ನು ಒದಗಿಸಿದ್ದು, ಇವರ ಸೇವಾ ಕಾರ್ಯ ಗುರುತಿಸಿ, ಅವರನ್ನು ಫೆಲೋಶಿಪ್‌ಗೆ ಆಯ್ಕೆ ಮಾಡಲಾಗಿದೆ.

ಇಂದು ವಿಶೇಷ ಚೇತನರು, ವೃದ್ಧರಿಗೆ ಸಾಮಗ್ರಿಗಳ ವಿತರಣೆ

ಮೈಸೂರು, ಅ.7–ಮೈಸೂರಿನ ಶಿವರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಇಂದು ಸಂಜೆ 5 ಗಂಟೆಗೆ ದೃಷ್ಟಿ ದೋಷದವರಿಗೆ, ವಿಶೇಷ ಚೇತನರಿಗೆ, ಅನಥಾಶ್ರಮ, ವೃದ್ಧಾಶ್ರಮಗಳಿಗೆ ಹಾಗೂ ವೃದ್ಧರಿಗೆ ಅವಶ್ಯವಿರುವ ಸಾಮಗ್ರಿಗಳನ್ನು ವಿತರಿಸುವ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಸಂಜೆ 6.30ಕ್ಕೆ ರಾಮ ಮಂದಿರದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀಮತಿ ಪರಿಮಳ ಮತ್ತು ಶ್ರೀಮತಿ ಪೂರ್ಣಿಮಾ ಅವರಿಂದ ದೇವರ ಕೀರ್ತನೆಗಳು ನಡೆಯಲಿದ್ದು, ಇವರಿಗೆ ವಿದ್ವಾನ್ ತುಮಕೂರು ಯಶಸ್ವಿ (ಪಿಟೀಲು), ವಿದ್ವಾನ್ ಪ್ರಹ್ಲಾದ ರಾವ್ (ಮೃದಂಗ) ಪಕ್ಕವಾದ್ಯ ಸಹಕಾರವಿದೆ. ಕಾರ್ಯಕ್ರಮಕ್ಕೆ ಮೈಪಾಲ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ನಾಗರಾಜನ್, ಸಿ.ವಿ.ಪಾರ್ಥಸಾರಥಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಾರಂಪರಿಕ ಸೈಕಲ್, ಟಾಂಗಾ ಸವಾರಿ, ಪಾರಂಪರಿಕ ನಡಿಗೆ

ಮೈಸೂರು, ಅ.7– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2023ರ ಅಂಗವಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಜನಸಾಮಾನ್ಯರು, ಆಸಕ್ತ ಹಾಗೂ ಪ್ರವಾಸಿಗರಿಗೆ ಮೈಸೂರಿನ ಇತಿಹಾಸ ಪಾರಂಪರಿಕ ಕಟ್ಟಡಗಳ ಹಿನ್ನೆಲೆ ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪ ಶೈಲಿಯ ಮಹತ್ವದ ಬಗ್ಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಅಕ್ಟೋಬರ್ 19ರಂದು ಪಾರಂಪರಿಕ ಸೈಕಲ್ ಸವಾರಿ, ಅ. 20 ರಂದು ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ, ಅ. 21ರಂದು ಪಾರಂಪರಿಕ ನಡಿಗೆಯನ್ನು ಬೆಳಗ್ಗೆ 7 ಗಂಟೆಗೆ ರಂಗಚಾರ್ಲು ಪುರಭವನದಿಂದ ಆಯೋಜಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂ: 0821–2424671 ಅಥವಾ 2424673 ಉಪ ನಿರ್ದೇಶಕರಾದ 8310250733), ಪ್ರಥಮ ದರ್ಜೆ ಸಹಾಯಕರಾದ ಶಶಿಧರ್ ಎಸ್.(7349057976) ಅವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆ ಮನೆಗಳಲ್ಲಿ ದಸರಾ ಗೊಂಬೆ; ವಸಿಷ್ಠ ಸಿಂಹ–ಹರಿಪ್ರಿಯ ತಾರಾ ದಂಪತಿ ಪೋಸ್ಟರ್ ಬಿಡುಗಡೆ

ಮೈಸೂರು, ಅ. 7– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂದರ್ಭ ದಲ್ಲಿ ಕೆ.ಎಂ.ಪ್ರವೀಣ್ ಕುಮಾರ್ ಚಾರಿ ಟಬಲ್ ಟ್ರಸ್ಟ್ ಹಾಗೂ ಸ್ಪಿರಿಟ್ ಇವೆಂಟ್ಸ್ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಮನೆ ಮನೆಗಳಲ್ಲಿ ದಸರಾ ಗೊಂಬೆ ಕೂರಿಸುವ ಸ್ಪರ್ಧೆಯನ್ನು ಆಯೋಜಿಸಿದ್ದು, ಅದರ ಪ್ರಚಾರ ಸಾಮಗ್ರಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಖ್ಯಾತ ಚಲನಚಿತ್ರ ನಟ ವಸಿಷ್ಠ ಸಿಂಹ ಹಾಗೂ ಹರಿಪ್ರಿಯ ಉದ್ಘಾಟಿಸಿದರು.



ಬಳಿಕ ಮಾತನಾಡಿದ ವಸಿಷ್ಠ ಸಿಂಹ, ನವರಾತ್ರಿಯು ಮೈಸೂರು ಪರಂಪರೆ ಯಲ್ಲಿ ಅತ್ಯಂತ ಪವಿತ್ರವಾದದ್ದು, ದಸರಾ ಗೊಂಬೆ ಪ್ರದರ್ಶನಕ್ಕೆ ಅತ್ಯಂತ ಮಹತ್ವವಿದೆ. ಪಟ್ಟದ ಗೊಂಬೆಗಳನ್ನು ಲಕ್ಷ್ಮಿ ನಾರಾಯಣ ಸ್ವರೂಪದಲ್ಲಿ ಪೂಜಿಸಿ ಪುರಾಣ ಪುಣ್ಯ ಕಥೆಗಳನ್ನು ಗೊಂಬೆಗಳ ಮೂಲಕ ರೂಪಕವಾಗಿ ಪ್ರಚುರಪಡಿಸಿ ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದೇ ಇದರ ಮೂಲ ಉದ್ದೇಶ. ಮೈಸೂರಿನ ಮನೆಮನೆ ಗಳಲ್ಲಿ ಕೂರಿಸುವುದರಿಂದ ಗೃಹಿಣಿಯರು ನಮ್ಮ ಪರಂಪರೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ ಎಂದರು.

ಈ ಸ್ಪರ್ಧೆಯಲ್ಲಿ ಸಂಸ್ಕೃತಿ ಇತಿಹಾಸ ಸಾರುವ ಹಾಗೂ ಐತಿಹಾಸಿಕ ಹಿನ್ನಲೆ ಒಳಗೊಂಡಂತೆ ಗೊಂಬೆಗಳ ಕೂರಿಸಿದವರಿಗೆ ಮೊದಲನೇ ಬಹುಮಾನ 2000 ರೂ., ಎರಡನೇ ಬಹುಮಾನ 1000 ರೂ ಮೂರನೇ 500 ರೂ ನಗದು ಪಾರಿತೋಷಕ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಸ್ಪರ್ಧೆಯಲ್ಲಿ ಸ್ಪರ್ಧಿಸಿದ ಎಲ್ಲಾ ಸ್ಪರ್ಧಾ ಳುಗಳಿಗೆ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಈ ಎಲ್ಲವೂ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಲ್ಲೇ ನೆರವೇರಲಿದೆ.

ಅ.25ರೊಳಗೆ, 9880752727 ಸಂಖ್ಯೆಗೆ ವ್ಯಾಟ್ಸಾಪ್ ಮೂಲಕ ಗೊಂಬೆ ಜೋಡಣೆ ಮಾಡಿರುವ ಚಿತ್ರ ಹಾಗೂ 3ನಿಮಿಷದ ವೀಡಿಯೊವನ್ನು ಕಳಿಸಿಕೊಡಬೇಕು. ಆನಂತರ ತೀರ್ಪುಗಾರರು ಅವರ ನಿವಾಸಕ್ಕೆ ತೆರಳಿ ವೀಕ್ಷಿಸಿ ಸಂಸ್ಕೃತಿ ಇತಿಹಾಸ ಸಾರುವ ಹಾಗೂ ಐತಿಹಾಸಿಕ ಹಿನ್ನೆಲೆ ಒಳಗೊಂಡ ಗೊಂಬೆ ಜೋಡಣೆ ಮಾಡಿದಂತಹ ಸ್ಪರ್ಧಿಗಳನ್ನು ಆಯ್ಕೆ ಮಾಡುತ್ತಾರೆ. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಅಜಯ್ ಶಾಸ್ತ್ರಿ, ರವಿಚಂದ್ರ, ಕಾರ್ತಿಕ್, ದರ್ಶನ್, ಮುರುಳಿ, ವರುಣಮಹದೇವ್, ಮಂಜು ಇನ್ನಿತರರು ಈ ವೇಳೆ ಹಾಜರಿದ್ದರು.

ಬೆಟ್ಟಗೇರಿ ವ್ಯಾಪ್ತಿಯಲ್ಲಿ ನಿರಂತರ ಆನೆ ದಾಳಿ: ಭತ್ತ, ಕಾಫಿ, ಜೋಳದ ಬೆಳೆಗಳು ನಾಶ

ಗುಡ್ಡೆಹೊಸೂರು, ಅ.7– ಇಲ್ಲಿಗೆ ಸಮೀಪದ ಬೆಟ್ಟಗೇರಿ ವ್ಯಾಪ್ತಿಯಲ್ಲಿ ನಿರಂತರವಾಗಿ ದಾಳಿ ನಡೆಸುತ್ತಿರುವ ಕಾಡಾನೆಗಳು ರೈತರ ಭತ್ತ, ಕಾಫಿ, ಜೋಳದ ಬೆಳೆಗಳನ್ನು ತಿಂದು ನಾಶಪಡಿಸುತ್ತಿವೆ.



ಬೆಟ್ಟಗೇರಿ ನಿವಾಸಿ ಕುಡೆಕ್ಕಲ್ ಯತೀಶ್, ಕೆ.ಕೆ.ತಿಮ್ಮಯ್ಯ, ಐಮುಡಿಯಂಡ ಕುಶಾಲಪ್ಪ (ಪಾಪ) ಇನ್ನೂ ಅನೇಕ ರೈತರ ಭತ್ತದ ಗದ್ದೆಯ ಬೆಳೆ ನಾಶವಾಗಿದ್ದು, ರೈತರು ಕಂಗಾಲಾಗಿದ್ದಾರೆ. ಭತ್ತದ ಗದ್ದೆಗಳಿಗೆ ದಾಳಿ ಇಡುವ ಆನೆಗಳು ದನಗಳು ಮೇಯುವ ರೀತಿಯಲ್ಲಿ ಭತ್ತದ ಬೆಳೆಯನ್ನು ತಿಂದು ತುಳಿದು ನಾಶಪಡಿಸುತ್ತಿವೆ. ಅಲ್ಲದೆ ಈ ವಿಭಾಗದಲ್ಲಿ ಒಂಟಿ ಸಲಗವೊಂದು ರೈತರು ನಿರ್ಮಿಸಿದ ಗೇಟ್ ಮೂಲಕವೇ ತೋಟಗಳಿಗೆ, ಗದ್ದೆಗಳಿಗೆ ಎಂಟ್ರಿ ಕೊಡುತ್ತಿದೆ. ಈ ಕಾರಣದಿಂದ ಈ ಭಾಗದ ರೈತರು ತಮ್ಮ ಮನೆಗಳಿಗೆ, ತೋಟಗಳಲ್ಲಿ ನಿರ್ಮಿಸಿದ ಗೇಟ್‌ಗಳನ್ನು ಬಂದ್ ಮಾಡುತ್ತಿಲ್ಲ. ಬದಲಿಗೆ ಲಾಕ್ ಮಾಡದೆ "ತೆರೆದಿದೆ ಮನೆ ಬಾ ಅತಿಥಿ" ಎಂಬಂತೆ ಓಪನ್ ಬಿಡುತ್ತಿದ್ದಾರೆ. ಸದ್ಯಕ್ಕೆ ಗೇಟಾದರು ಉಳಿಯಲಿ ಎಂಬ ಕಾರಣಕ್ಕೆ.

ಬಸವನಹಳ್ಳಿ, ಅತ್ತೂರು, ಹೊಸಕಾಡು ವಿಭಾಗದಲ್ಲೂ ಆನೆ ದಾಳಿ ನಡೆಸಿ ಬೆಳೆ ನಾಶಪಡಿಸುತ್ತಿರುವುದಾಗಿ ಆ ವಿಭಾಗದ ರೈತರು ದೂರಿದ್ದಾರೆ. ಕಳೆದ ರಾತ್ರಿ ಕೆ.ವಿ. ಯತೀಶ್ ಅವರ ಭತ್ತದ ಗದ್ದೆಗೆ ದಾಳಿಯಿಟ್ಟ ಆನೆಗಳ ಹಿಂಡು ಗದ್ದೆಯಲ್ಲೆ ದಾಂದಲೆ ನಡೆಸಿವೆ. ಆನೆಗಳು ಶಾಶ್ವತವಾಗಿ ಗದ್ದೆ, ತೋಟಗಳಿಗೆ ಬರದಂತೆ ಅರಣ್ಯ ಇಲಾಖೆ ಕ್ರಮಕೈಗೊಳ್ಳುವಂತೆ ಈ ವಿಭಾಗದ ರೈತರು ಮನವಿ ಮಾಡಿದ್ದಾರೆ.

ಮಡಿಕೇರಿ, ಗೋಣಿಕೊಪ್ಪ ದಸರಾಗೆ ಸರ್ಕಾರದಿಂದ 1.25 ಕೋಟಿ ಬಿಡುಗಡೆ

ಮಡಿಕೇರಿ,ಅ.7– ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಉತ್ಸವಕ್ಕೆ ರಾಜ್ಯ ಸರಕಾರ ಒಟ್ಟು 1.25 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಸೂಚಿಸಿದ್ದು, ಕೊಡಗು ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆಗೆ ಈ ಆದೇಶ ಹೊರಡಿಸಲಾಗಿದೆ.

ಮಡಿಕೇರಿಗೆ 75 ಲಕ್ಷ ರೂ. ಮತ್ತು ಗೋಣಿಕೊಪ್ಪ ದಸರಾಗೆ 50 ಲಕ್ಷ ರೂ.ಗಳ ಅನುದಾನವನ್ನು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರ ಮೂಲಕ ಕೊಡಗು ಜಿಲ್ಲಾಧಿಕಾರಿಗಳ ಖಾತೆಗೆ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಉತ್ಸವಕ್ಕೆ ಬಿಡುಗಡೆಯಾಗಿರುವ ಅನುದಾನವನ್ನು ಅದೇ ಉದ್ದೇಶಕ್ಕೆ ಬಳಸಬೇಕು. ಅನುದಾನ ಸಮರ್ಪಕ ಬಳಕೆಯಾಗಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು. ಕಾರ್ಯಕ್ರಮ ನಡೆದಿರುವ ಬಗ್ಗೆ ಕೊಡಗು ಜಿಲ್ಲಾಧಿಕಾರಿಗಳ ಮೂಲಕ ಖಾತ್ರಿ ಮಾಡಿಕೊಳ್ಳಬೇಕು ಎಂದು ಸರಕಾರದ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಕೊಡವರ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು

ಸಿಎನ್‌ಸಿಯ 3ನೇ ಹಂತದ ಪಾದಯಾತ್ರೆ ಆರಂಭ

ಮಡಿಕೇರಿ,ಅ.7– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ 9 ಪ್ರಮುಖ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸುತ್ತಿರುವ 5 ಹಂತಗಳ ಪಾದಯಾತ್ರೆಯಲ್ಲಿ 3ನೇ ಹಂತದ ಪಾದಯಾತ್ರೆ ಗೋಣಿಕೊಪ್ಪಲಿನಿಂದ ಆರಂಭಗೊಂಡಿತು.



ಪಟ್ಟಣದ ಶ್ರೀ ಉಮಾಮಹೇಶ್ವರಿ ದೇವಾಲಯದ ಬಳಿಯಿಂದ ಸಾಗಿದ ಪಾದಯಾತ್ರೆಯಲ್ಲಿ 'ಕೊಡವ ಲ್ಯಾಂಡ್' ಪರ ಘೋಷಣೆಗಳು ಮೊಳಗಿದವು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ನಿರ್ಮಿಸಿದ ಪ್ರಮುಖರು ಪ್ರಮುಖ ಬೇಡಿಕೆಗಳ ಹಕ್ಕೊತ್ತಾಯಗಳನ್ನು ಮಂಡಿಸಿದರು.

ನಂತರ ಮಾಯಮುಡಿಯ ಕಂಗಳತ್ತನಾಡ್ ಮತ್ತು ಬಾಳೆಲೆಯ ಅರ್ಕೇರಿನಾಡ್‌ಗೆ ಪಾದಯಾತ್ರೆ ಸಾಗಿತು. ಕೊಡವ ಜನಜಾಗೃತಿ ಸಭೆಯಲ್ಲಿ ಮಾತನಾಡಿದ ನಾಚಪ್ಪ ಅವರು ಬೇಡಿಕೆ ಈಡೇರುವವರೆಗೆ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯ ಹೋರಾಟ ನಿಲ್ಲದು ಎಂದು ಘೋಷಿಸಿದರು.

ಕೊಡವರ ಪರವಾಗಿ ಸಿಎನ್‌ಸಿ ಸಂಘಟನೆ ಕಳೆದ ಅನೇಕ ವರ್ಷಗಳಿಂದ ಶಾಂತಿಯುತ ಹೋರಾಟವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಕೊಡವ ಲ್ಯಾಂಡ್‌ಗಾಗಿ ನಡೆಸುತ್ತಿರುವ ಪಾದಯಾತ್ರೆಯಲ್ಲಿ ಕೊಡವರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಹೋರಾಟಕ್ಕೆ ಬಲ ತುಂಬುತ್ತಿರುವುದು ಶ್ಲಾಘನೀಯವೆಂದರು.

ಸಿಎನ್‌ಸಿ ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು ನ್ಯಾಯಸಮ್ಮತವಾಗಿದೆ. ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗ ಕೊಡವರಿಗೆ ನ್ಯಾಯಯುತವಾಗಿ ಸಾಂವಿಧಾನಿಕ ಭದ್ರತೆ ಸಿಗುವ ಅಗತ್ಯವಿದೆ. ಸಣ್ಣ ಜನಾಂಗಕ್ಕೆ ರಕ್ಷಣೆ ನೀಡದಿದ್ದಲ್ಲಿ ಒಂದು ವಿಶಿಷ್ಟ ಸಂತತಿಯೇ ಅಳಿದು ಹೋಗುವ ಆತಂಕವಿದೆ. ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ನೀಡಬೇಕು. ಕೊಡಗಿನ ಆದಿಮಸಂಜಾತ ಕೊಡವ ಜನಾಂಗವನ್ನು ಸುವಿಧಾನದ ಶೆಡ್ಯೂಲ್ ಪಟ್ಟಿಯಲ್ಲಿ ಸೇರಿಸುವುದರಿಂದ ಕೊಡವರಿಗೆ ಭದ್ರತೆ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭ ಮದ್ರಿರ ಕುಂಬಯ್ಯ, ಜಮ್ಮಡ ನಂದ, ಜಮ್ಮಡ ಮೋಹನ್, ಕೋಣಿಯಂಡ ಸಂಜು, ಅಜ್ಜಿಕುಟ್ಟೀರ ಲೋಕೇಶ್, ಅಪ್ಪೆಂಗಡ ಮಾಲೆ, ಜಮ್ಮಡ ಜಯ, ಕಾಂಡೇರ ಸುರೇಶ್, ಜಮ್ಮಡ ಜಗನ್, ಜಮ್ಮಡ ಡೀನ, ಕಾಡ್ಯಮಾಡ ಮನು ಸೋಮಯ್ಯ, ಪುಚ್ಚಿಮಾಡ ಸುಭಾಷ್, ಪುಚ್ಚಿಮಾಡ ರಾಯ್, ಕಿರಿಯಮಾಡ ಶಯನ್, ಕಿರಿಯಮಾಡ ಶಾನ್, ಮಾಪಂಗಡ ಬೆಳ್ಯಪ್ಪ ಸೇರಿದಂತೆ ನೂರಾರು ಮಂದಿ ಪ್ರಮುಖರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಪೌರಕಾರ್ಮಿಕರಿಗೆ ಎಲ್ಲಾ ಸವಲತ್ತು ಒದಗಿಸಿ ಕೊಡಿ

ವಿರಾಜಪೇಟೆ, ಅ.7– ಪೌರಕಾರ್ಮಿಕರ ಹೊಣೆಗಾರಿಕೆ ಮಹತ್ವವಾದದ್ದು, ಅವರಿಗೆ ಆಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡುವುದು ಅಧಿಕಾರಿಗಳ ಆದ್ಯ ಕರ್ತವ್ಯವಾಗಿದೆ ಎಂದು ತಹಶೀಲ್ದಾರ್ ರಾಮಚಂದ್ರ ತಿಳಿಸಿದರು.



ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ವಿರಾಜಪೇಟೆ ಪುರಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರು ಒಂದು ದಿನ ತಮ್ಮ ಪಾಲಿನ ಕರ್ತವ್ಯ ನಿಭಾಯಿಸದಿದ್ದಲ್ಲಿ ಪಟ್ಟಣ ಹಾಗೂ ಇತರೆಡೆಗಳಲ್ಲಿ ನಾವು ಶುಚಿತ್ವವನ್ನು ಕಾಣಲು ಮತ್ತು ಜನರು ನೆಮ್ಮದಿಯಿಂದ ಇರಲು ಸಾಧ್ಯವಾಗುವುದಿಲ್ಲ ಎಂದರು.

ಪೌರಕಾರ್ಮಿಕರ ತಾಲೂಕು ಸಂಘದ ಅಧ್ಯಕ್ಷ ಇರ್ಫಾನ್ ಅಮು ಮಾತನಾಡಿ, ಪುರಸಭೆಯ ನೌಕರರು ಎಲ್ಲಾ ಇಲಾಖೆಗಿಂತ ಮಹತ್ವದ ಹೊಣೆಗಾರಿಕೆ ನಿಭಾಯಿಸುತ್ತಿದ್ದು, ತಮ್ಮ ಗೌರವದ ಬಗ್ಗೆ ಅರಿತು ಕೊಳ್ಳಬೇಕು. ಸರಕಾರ ನಮಗೆ ಸಂಬಳ ಮತ್ತು ಸೌಲತ್ತು ನೀಡುತ್ತದೆ. ಈ ದಿನ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಖಾಯಂ ನೌಕರರಿಗೆ ಏಳು ಸಾವಿರ ರೂ. ಭತ್ಯೆ ನೀಡಿದ್ದಾರೆ. ನಮಗೆ ಇನ್ನಷ್ಟು ಸೌಲಭ್ಯಗಳನ್ನು ನೀಡಿದಲ್ಲಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವ ಅಗತ್ಯ ಇರುವುದಿಲ್ಲ. ಎಂದರಲ್ಲದೆ ಪೌರಕಾರ್ಮಿಕರು ಸಂಘಟಿತರಾಗಬೇಕೆಂದು ಕರೆ ನೀಡಿದರು.

ಪುರಸಭೆಯ ಮುಖ್ಯಾಧಿಕಾರಿ ಚಂದ್ರಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ಪೌರಕಾರ್ಮಿಕ ಹೆಚ್.ಎಂ.ವೇಲು ಇತರರಿಗೆ ವೇದಿಕೆಯಲ್ಲಿ ಸನ್ಮಾನಿಸಿ, ಗೌರವಿಸಲಾಯಿತು. ಪುರಸಭೆ ಕಂದಾಯಾಧಿಕಾರಿ ಮನೋಜ್, ಕಚೇರಿ ವ್ಯವಸ್ಥಾಪಕಿ ಸುಜಾತ, ವೇಲುಮುರುಗನ್, ಸಂಘದ ಗೌ. ಕಾರ್ಯದರ್ಶಿ ಕೋಮಲ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕಂದಾಯ ಉಪ ನಿರೀಕ್ಷಕಿ ಸುಲೇಖ ಕಾರ್ಯಕ್ರಮ ನಿರೂಪಿಸಿದರು. ಪೌರಕಾರ್ಮಿಕ ದಿನಾಚರಣೆ ಪ್ರಯುಕ್ತ ತಾಲೂಕು ಮೈದಾನದಲ್ಲಿ ವಿವಿಧ ಕ್ರೀಡಾಕೂಟ ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಣೆ ಮತ್ತು ಖಾಯಂ ಪೌರಕಾರ್ಮಿಕರಿಗೆ ಸರಕಾರದ ಭತ್ಯೆ 7 ಸಾವಿರ ರೂ. ಗಳನ್ನು ಸಾಂಕೇತಿಕವಾಗಿ ವಿತರಣೆ ಮಾಡಲಾಯಿತು.

ಗುಡುಗು ಸಹಿತ ಮಳೆ



ನಾಪೋಕ್ಲು: ನಾಪೋಕ್ಲು ವ್ಯಾಪ್ತಿಯಲ್ಲಿ ಶನಿವಾರ ಉತ್ತಮ ಮಳೆ ಸುರಿಯಿತು. ಮಧ್ಯಾಹ್ನ 3 ಗಂಟೆಯಿಂದ ಸುಮಾರು ಅರ್ಧ ಗಂಟೆಗಳ ಕಾಲ ಬಿರುಸಿನ ಮಳೆ ಸುರಿಯಿತು. ಬೆಳಗ್ಗೆಯಿಂದ ಬಿಸಿಲಿನ ವಾತಾವರಣವಿತ್ತು. ಮಧ್ಯಾಹ್ನ ಗುಡುಗು ಸಹಿತ ಮಳೆಯಾಯಿತು. ಪಟ್ಟಣ ವ್ಯಾಪ್ತಿಯಲ್ಲೂ ಬಿರುಸಿನ ಮಳೆ ಸುರಿಯಿತು.

ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ನಾಳೆ ವಿಶೇಷ ಸಭೆ

ಮಡಿಕೇರಿ,ಅ.7– ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಶನ್‌ನ ಕೊಡಗು ಶಾಖೆ ವತಿಯಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನದ ಕುರಿತು ಅ.9ರಂದು ಮಡಿಕೇರಿಯಲ್ಲಿ ಶಿಕ್ಷಣ ತಜ್ಞರ ವಿಶೇಷ ಸಭೆ ನಡೆಯಲಿದೆ ಎಂದು ಸಂಸ್ಥೆಯ ಕೊಡಗು ಜಿಲ್ಲಾ ಸಂಚಾಲಕ ಜಯಪ್ರಕಾಶ್ ಎಸ್. ತಂಟೆಪಾಡಿ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30 ಗಂಟೆಗೆ ನಗರದ ಕಾವೇರಿ ಹಾಲ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಧ್ಯಕ್ಷತೆಯನ್ನು ಪೊನ್ನಂಪೇಟೆ ಸಾಯಿಶಂಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಕೊಡಗು ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘದ ಅಧ್ಯಕ್ಷ ಕೋಳೆರ ಝರು ಗಣಪತಿ ವಹಿಸಲಿದ್ದಾರೆ ಎಂದು ಹೇಳಿದ್ದಾರೆ.

ಮಾಜಿ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹಾಗೂ ಮಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ಸುಬ್ರಮಣ್ಯ ಯಡಿಪಡಿತ್ತಾಯ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಹಾಲಿ ಹಾಗೂ ಮಾಜಿ ಶಾಸಕರು, ವಿಶ್ರಾಂತ ಕುಲಪತಿಗಳು, ಹಾಲಿ, ಮಾಜಿ ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ್ ಸದಸ್ಯರು, ಶಿಕ್ಷಣ ತಜ್ಞರು, ಪ್ರಾಂಶುಪಾಲರು, ಉಪನ್ಯಾಸಕರು, ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು, ಆಡಳಿತ ಮಂಡಳಿ, ಬರಹಗಾರರು, ಅಂಕಣಕಾರರು, ಸಾಹಿತಿಗಳು ಹಾಗೂ ಚಿಂತಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಂಗಳೂರು ವಿವಿ ನಿಕಟಪೂರ್ವ ಸಿಂಡಿಕೇಟ್ ಸದಸ್ಯ ಹಾಗೂ ಪೀಪಲ್ಸ್ ಫೋರಂ ಫಾರ್ ಕರ್ನಾಟಕ ಎಜುಕೇಶನ್‌ನ ಮಂಗಳೂರು ವಿಭಾಗದ ಸಂಚಾಲಕ ಕೆ.ರಮೇಶ್ ಮಾತನಾಡಿ, ದೇಶದಲ್ಲಿ ಮೊದಲ ಬಾರಿಗೆ 2020–21ರಲ್ಲಿ ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡಲಾಗಿದೆ. ಆದರೆ ಇಂತಹ ಶಿಕ್ಷಣ ನೀತಿಯನ್ನು ರದ್ದುಗೊಳಿಸಲು ಹೊರಟಿರುವ ಸರ್ಕಾರದ ನಿರ್ಧಾರ ಪೂರ್ವಾಗ್ರಹವಾಗಿದೆ ಎಂದು ಆರೋಪಿಸಿದರು.

ಸಭೆಯಲ್ಲಿ ಶಿಕ್ಷಣ ನೀತಿಯ ಸಾಧಕ ಬಾಧಕಗಳ ಕುರಿತು ಚರ್ಚೆ ನಡೆಯಲಿದ್ದು, ಎನ್‌ಇಪಿಯನ್ನು ರದ್ದುಪಡಿಸುವ ನಿರ್ಧಾರವನ್ನು ಖಂಡಿಸಿ ಮತ್ತು ಇದರ ಪರಿಣಾಮವನ್ನು ಅವಲೋಕಿಸಲು ಶಿಕ್ಷಣ ತಜ್ಞರ ವಿಶೇಷ ಸಭೆಯನ್ನು ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮದೆನಾಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಧನಂಜಯ ಅಗೋಳಿಕಜೆ ಉಪಸ್ಥಿತರಿರುವರು.

ಕೊಡವ ಅಭಿವೃದ್ಧಿ ನಿಗಮ, ಅನುದಾನದ ಬಗ್ಗೆ ಗೊಂದಲ

ನೈಜಾಂಶ ಬಹಿರಂಗ ಪಡಿಸಲು ಆಮ್ ಆದ್ಮಿ ಪಾರ್ಟಿ ಆಗ್ರಹ

ಮಡಿಕೇರಿ,ಅ.7– ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆ ಮತ್ತು ಅನುದಾನ ಬಿಡುಗಡೆಯ ಕುರಿತು ಗೊಂದಲಗಳು ಮುಂದುವರೆದಿದ್ದು, ನೈಜಾಂಶ ಏನು ಎಂಬುದನ್ನು ಸರ್ಕಾರ ಕೊಡಗಿನ ಜನತೆಯ ಮುಂದೆ ಬಹಿರಂಗಪಡಿಸಬೇಕೆಂದು ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಭೋಜಣ್ಣ ಸೋಮಯ್ಯ ಹಾಗೂ ಪ್ರಮುಖರಾದ ಸಿ.ಎಸ್.ರವೀಂದ್ರ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೊಡವ ಅಭಿವೃದ್ಧಿ ನಿಗಮದ ವಿಚಾರದಲ್ಲಿ ಜನರನ್ನು ಗೊಂದಲದಲ್ಲಿ ಸಿಲುಕಿಸಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕಾಂಗ್ರೆಸ್ ಮತ್ತು ಬಿಜೆಪಿ ಹವಣಿಸುತ್ತಿವೆ ಎಂದು ಟೀಕಿಸಿದ್ದಾರೆ. ವಿರಾಜಪೇಟೆಯ ಕಾರ್ಯಕ್ರಮವೊಂದರಲ್ಲಿ ಸಂಸದ ಪ್ರತಾಪ್ ಸಿಂಹ ಅವರು ಈ ಹಿಂದಿನ ಬಿಜೆಪಿ ಸರ್ಕಾರ ನಿಗಮ ಸ್ಥಾಪಿಸಿ 10 ಕೋಟಿ ರೂ. ಅನುದಾನ ನೀಡಿದೆ ಎಂದು ಹೇಳಿದ್ದಾರೆ. ಆದರೆ ಇದೇ ವೇದಿಕೆಯಲ್ಲಿ ಕಾಂಗ್ರೆಸ್ ಶಾಸಕರು ನಿಗಮಕ್ಕೆ ಯಾವುದೇ ಹಣ ಬಿಡುಗಡೆಯಾಗಿಲ್ಲವೆಂದು ತಿರುಗೇಟು ನೀಡಿದ್ದಾರೆ. ಈ ಬೆಳವಣಿಗೆಗಳನ್ನು ಗಮನಿಸಿದರೆ ಕೊಡವ ಅಭಿವೃದ್ಧಿ ನಿಗಮ ಅಸ್ತಿತ್ವದಲ್ಲಿದೆಯೇ ಎನ್ನುವ ಸಂಶಯ ಮೂಡುತ್ತದೆ. ಅಲ್ಲದೆ ಅನುದಾನ ಬಿಡುಗಡೆಯಾಗಿದ್ದರೆ ಹಣ ಎಲ್ಲಿಗೆ ಹೋಯಿತು, ಅಧ್ಯಕ್ಷರ ನೇಮಕವಾಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಜನರಲ್ಲಿ ಮೂಡಿರುವ ಸಂಶಯಗಳನ್ನು ದೂರ ಮಾಡಬೇಕಾದರೆ ಸರ್ಕಾರ ಸೂಕ್ತ ತನಿಖೆ ನಡೆಸಿ ಅಭಿವೃದ್ಧಿ ನಿಗಮದ ಅಸ್ತಿತ್ವದ ಕುರಿತು ಸ್ಪಷ್ಟೀಕರಣ ನೀಡಬೇಕು. ಒಂದು ವೇಳೆ ನಿಗಮ ಅಧಿಕೃತವಾಗಿದ್ದರೆ ಈಗಿನ ಸರ್ಕಾರ ತಕ್ಷಣ ಅಧ್ಯಕ್ಷರನ್ನು ನೇಮಕ ಮಾಡಬೇಕು ಮತ್ತು ಘೋಷಿಸಿರುವ ಅನುದಾನವನ್ನು ಬಿಡುಗಡೆ ಮಾಡಿ ಕೊಡವರ ಅಭಿವೃದ್ಧಿಗೆ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಕೊಡವರ ಭಾವನೆಗಳಿಗೆ ಧಕ್ಕೆ ಉಂಟು ಮಾಡಿ ಕ್ಷುಲ್ಲಕ ರಾಜಕೀಯ ಮಾಡುವುದನ್ನು ಮೊದಲು ನಿಲ್ಲಿಸಬೇಕೆಂದು ಆಗ್ರಹಿಸಿದ್ದಾರೆ.

ಬಾಲಕೃಷ್ಣ ನಿಧನ

ನಾಪೋಕ್ಲು: ನಾಪೋಕ್ಲು ಇಂದಿರಾನಗರ ನಿವಾಸಿ ಸ್ಥಳೀಯ ಶ್ರೀ ಪೊನ್ನುಮುತ್ತಪ್ಪ ದೇವಸ್ಥಾನದ ಮಾಜಿ ಅಧ್ಯಕ್ಷ ಟಿ.ಕೆ. ಬಾಲಕೃಷ್ಣ (ವಿಜಯನ್) ಅವರು ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 66 ವರ್ಷ ವಯಸ್ಸಾಗಿತ್ತು.



ಮೃತರು ಪತ್ನಿ ವಿಲಾಸಿನಿ, ಪುತ್ರ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಇಲ್ಲಿಯ ಹಿಂದೂ ರುದ್ರಭೂಮಿಯಲ್ಲಿ ಜರುಗಲಿದೆ.



ಎದೆ ಮೇಲೆ ಚಪ್ಪಡಿ ಇಟ್ಟುಕೊಂಡು ಪ್ರತಿಭಟನೆ

ಚಾಮರಾಜನಗರ, ಅ.7– ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾಪಡೆಯ ಕಾರ್ಯಕರ್ತರು ಎದೆ ಮೇಲೆ ಚಪ್ಪಡಿ ಕಲ್ಲು ಇಟ್ಟಿಕೊಂಡು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಚಾ.ರಂ. ಶ್ರೀನಿವಾಸಗೌಡ, ಶಾ. ಮುರಳಿ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೇಂದ್ರ, ರಾಜ್ಯ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಚಾ.ಹ. ರಾಮು, ರವಿಚಂದ್ರಪ್ರಸಾದ್ ಕಹಳೆ, ಗು. ಪುರುಷೋತ್ತಮ್, ನಿಜಧ್ವನಿ ಗೋವಿಂದರಾಜು, ಸೋಮವಾರಪೇಟೆ ಮಂಜು, ಅಂಕಶೆಟ್ಟಿ, ತಾಂಡವಮೂರ್ತಿ ಇತರರು ಭಾಗವಹಿಸಿದ್ದರು.

ಸಮರ್ಪಕ ಕರೆಂಟ್‌ಗೆ ಆಗ್ರಹಿಸಿ ಕೆಪಿಟಿಸಿಎಲ್‌ಗೆ ಬೀಗ ಹಾಕಿ ಪ್ರತಿಭಟನೆ



ಚಾಮರಾಜನಗರ, ಅ.7– ತಾಲೂಕಿನ ಯಾನಗಹಳ್ಳಿ ಗ್ರಾಮದ ಬಳಿಯ ಚೆಸ್ಕಾಂ ಉಪ ವಿಭಾಗದಿಂದ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿ ವಿವಿಧ ಗ್ರಾಮಗಳ ರೈತರು, ಗ್ರಾಮಸ್ಥರು ವಿದ್ಯುತ್ ಪ್ರಸರಣ ನಿಗಮಕ್ಕೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಗ್ರಾಮದ ಹೊರವಲಯದಲ್ಲಿರುವ ಚೆಸ್ಕಾಂ ಉಪವಿಭಾಗಕ್ಕೆ ಮುತ್ತಿಗೆ ಹಾಕಿದ ಪ್ರತಿಭಟನಾಕಾರರು ಚೆಸ್ಕಾಂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕರಿಕಲ್ಲು ಕ್ವಾರಿಗಳಿಗೆ ನಿರಂತರವಾಗಿ ವಿದ್ಯುತ್ ನೀಡುತ್ತಾರೆ. ಆದರೆ, ರೈತರಿಗೆ, ಗ್ರಾಮಗಳಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ. ಕಳೆದ ಮೂರು ದಿನಗಳಿಂದ ರೈತರ ಪಂಪ್‌ಸೆಟ್‌ಗಳಿಗೆ ಕೇವಲ ಒಂದು ಗಂಟೆಗಳು ಮಾತ್ರ ವಿದ್ಯುತ್ ನೀಡಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರ ಹಾಕಿದರು.

ರೈತರ ಪಂಪ್‌ಸೆಟ್‌ಗಳಿಗೆ ಹಾಗೂ ಗ್ರಾಮಗಳಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ. ಇದರಿಂದಾಗಿ ಫಸಲೆಲ್ಲಾ ಒಣಗುತ್ತಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಪ್ರಾರಂಭವಾಗಿದ್ದು, ಅವರಿಗೂ ಸಹ ಓದಿಕೊಳ್ಳಲು ಅಡಚಣೆಯಾಗುತ್ತಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ರೈತ ಮುಖಂಡ ಶ್ರೀಕಂಠಪ್ಪ ಮಾತನಾಡಿ, ಪಂಪ್‌ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ನೀಡದೆ ಚೆಸ್ಕಾಂ ಅಧಿಕಾರಿಗಳು ರೈತರೊಂದಿಗೆ ಕಣ್ಣಾಮುಚ್ಚಾಲೆ ಆಡುತ್ತಿದ್ದಾರೆ. ಇದರಿಂದಾಗಿ ಸಾಲ ಮಾಡಿ ಫಸಲು ಬೆಳೆಯುತ್ತಿದ್ದು, ನೀರಿಲ್ಲದೇ ಎಲ್ಲಾ ಒಣಗುತ್ತಿದೆ. ಆದ್ದರಿಂದ ಜಿಲ್ಲಾಡಳಿತ ನಮಗೆ ದಯಾಮರಣಕ್ಕಾಗಲಿ, ಇಲ್ಲವೇ ಹೊರ ರಾಜ್ಯಕ್ಕೆ ಗುಳೆ ಹೋಗಲು ಅನುಮತಿ ನೀಡಿ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಕಿಲಗೆರೆ ಗ್ರಾಮದ ರೈತರು, ಯಾನಗಹಳ್ಳಿ, ಮೇಲೂರು, ನರಸಮಂಗಲ, ಯರಗನಹಳ್ಳಿ, ಅಚ್ಚಟ್ಟಿಪುರ, ಮಾದಲವಾಡಿ, ಅರಕಲವಾಡಿ, ಲಿಂಗನಪುರ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ರಾಜ್ಯ ಸರ್ಕಾರದಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ದುರ್ಬಳಕೆ

ಉತ್ತರಿಸುವಂತೆ ಮುಖ್ಯಮಂತ್ರಿಗಳಿಗೆ ಮಾಜಿ ಸಚಿವ ಶ್ರೀರಾಮುಲು ಆಗ್ರಹ

ಚಾಮರಾಜನಗರ, ಅ.7– ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರಿಸಬೇಕು ಎಂದು ಮಾಜಿ ಸಚಿವ ಶ್ರೀರಾಮುಲು ಒತ್ತಾಯಿಸಿದರು.

ನಗರದ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆಯಿಂದ ನಡೆದ ಕರ್ನಾಟಕ ಕಾಂಗ್ರೆಸ್ ಸರ್ಕಾರದಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ದುರ್ಬಳಕೆ ಬಗ್ಗೆ ಎಸ್‌ಸಿ, ಎಸ್‌ಟಿ ಜನಾಂದೋಲನ, ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು, ಆದಿಕವಿ ಶ್ರೀ ವಾಲ್ಮೀಕಿಯವರು ಸೂರ್ಯ, ಚಂದ್ರರು ಇರುವ ತನಕ ಶಾಶ್ವತವಾಗಿ ಇರುತ್ತಾರೆ. ಸಂವಿಧಾನದಡಿ ಆಯವ್ಯಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಅನುದಾನವನ್ನು ಮೀಸಲಿಟ್ಟಿರುವ ಅನುದಾನವನ್ನು ಕಸಿಯುವ ಕೆಲಸವನ್ನು ಯಾವುದೇ ಸರ್ಕಾರ ಮಾಡಬಾರದು ಎಂದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗೆ ವಿರೋಧವಿಲ್ಲ: ರಾಜ್ಯ ಕಾಂಗ್ರೆಸ್ ಸರ್ಕಾರ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಗಳ ಸಾವಿರಾರು ಕೋಟಿ ರೂ. ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿದೆ. ಇದರಿಂದ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಅನ್ಯಾಯವಾಗಿದೆ. ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಗೆ ನಮ್ಮ ಅಭ್ಯಂತರ ಇಲ್ಲ. ಜನತೆಗೆ ಇನ್ನಷ್ಟು ಯೋಜನೆ ಸಿಗಲಿ. ಆದರೆ ಎಸ್‌ಸಿ, ಎಸ್‌ಟಿ ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಸಬಾರದು. ಗ್ಯಾರಂಟಿ ಯೋಜನೆಗೆ ಎಸ್‌ಸಿ, ಎಸ್‌ಟಿ ಅನುದಾನ ಬಳಕೆ ಮಾಡಿರುವುದರಿಂದ ಸಮುದಾಯದ ಜನರಿಗೆ ಕೊಳವಿಬಾವಿ ಸಿಗುತ್ತಿಲ್ಲ. ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ವಸತಿ ಶಾಲೆಗಳಿಗೆ ಅನುದಾನ ಬರುತ್ತಿಲ್ಲ. ಉನ್ನತ ಶಿಕ್ಷಣಕ್ಕೆ ಅನುದಾನ ದೊರೆತಿಲ್ಲ. ಪರಿಶಿಷ್ಟ ಬೀದಿಗಳಲ್ಲಿ ರಸ್ತೆ ಆಗುತ್ತಿಲ್ಲ, ಪರಿಶಿಷ್ಟ ನಿಗಮಗಳಿಗೆ ಅನುದಾನ ಕಡಿತವಾಗಿ ಸೌಲಭ್ಯಗಳು ಸಿಗುತ್ತಿಲ್ಲ. ಇದರ ಬಗ್ಗೆ ಒಬ್ಬ ಎಸ್‌ಸಿ, ಎಸ್‌ಟಿ ಸಮುದಾಯದ ಸಚಿವರು, ಶಾಸಕರು ಚಕಾರ ಎತ್ತುತ್ತಿಲ್ಲ ಎಂದು ಆರೋಪಿಸಿದರು.

ಎಸ್‌ಸಿ, ಎಸ್‌ಟಿ ಸಚಿವರು ಸರ್ಕಾರದ ಕೈಗೊಂಬೆ: ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಕಾಂಗ್ರೆಸ್‌ನ ಮನಸ್ಥಿತಿ ಎಸ್‌ಸಿ, ಎಸ್‌ಟಿಗಳಿಗೆ ಅನ್ಯಾಯ ಮಾಡುವುದೇ ಆಗಿದೆ. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್. ಆದರೆ, ಅವರು ಬಿಜೆಪಿ ಸಂವಿಧಾನ ಬದಲಿಸುತ್ತದೆ ಎಂದು ಅಪಪ್ರಚಾರ ಮಾಡಿಕೊಂಡು ಅಧಿಕಾರಕ್ಕೆ ಬಂದು ಎಸ್‌ಸಿ, ಎಸ್‌ಟಿ ಅನುದಾನ ದುರ್ಬಳಕೆ ಮಾಡಿಕೊಂಡಿದೆ. ಇದರ ಬಗ್ಗೆ ಎಸ್‌ಸಿ, ಎಸ್‌ಟಿ ಶಾಸಕರು, ಸಚಿವರು ಚಕಾರ ಎತ್ತದೆ ಸರ್ಕಾರದ ಕೈಗೊಂಬೆಯಾಗಿದ್ದಾರೆ ಎಂದು ಆರೋಪಿಸಿದರು.

ನಂತರ ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ನಾಲ್ಕು ಭಾಗ ಮಾಡಿ ಅದರಲ್ಲಿ ಶೇ.40ರಷ್ಟು ಅನುದಾನವನ್ನು ಶಿಕ್ಷಣ, ಉದ್ಯೋಗ ಸೃಷ್ಟಿಗೆ ಕೊಡಬೇಕು. ಶೇ.10ರಷ್ಟು ಅನುದಾನವನ್ನು ಆರೋಗ್ಯ ಕ್ಷೇತ್ರಕ್ಕೆ ಕೊಡಬೇಕು. ಶೇ.25ರಷ್ಟು ಆರ್ಥಿಕ ಅಭಿವೃದ್ಧಿಗೆ ಕೊಡಬೇಕು. ಶೇ.25ರಷ್ಟು ವಸತಿ ಮತ್ತು ಮೂಲಸೌಕರ್ಯಗಳಿಗೆ ಕೊಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ದುರ್ಬಳಕೆ ಮಾಡಿಕೊಂಡಿರುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಸಮತಾ ಸೈನಿಕದಳ ರಾಜ್ಯಾಧ್ಯಕ್ಷ ವೆಂಕಟಸ್ವಾಮಿ, ಪತ್ರಕರ್ತ ಶಿವಕುಮಾರ್ ಬೆಳ್ಳಿತಟ್ಟೆ, ಜಿಪಂ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಮುಖಂಡರಾದ ಸುಂದರ್, ಮಲ್ಲೇಶ್, ಅರಕಲವಾಡಿ ನಾಗೇಂದ್ರ, ಸಿ.ಎಂ. ಕೃಷ್ಣಮೂರ್ತಿ, ಮಾದಿಗ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ್, ಪರ್ವತ್‌ರಾಜ್, ನಾರಾಯಣ್, ಶಿವು ವಿರಾಟ್, ದುಗ್ಗಹಟ್ಟಿ ಮಾದೇಶ್, ಜಯಸುಂದರ್, ಕೆರೆಹಳ್ಳಿ ಮಹದೇವಸ್ವಾಮಿ, ಅಗರರಾಜು, ಮೂಡ್ನಕೂಡು ಪ್ರಕಾಶ್, ಬೂದಿತಿಟ್ಟು ರಾಜೇಂದ್ರ, ಹೊಂಗನೂರು ಮಹದೇವಸ್ವಾಮಿ, ಮುತ್ತಿಗೆ ಮೂರ್ತಿ, ಪರಮೇಶ್ ನಲ್ಲೂರು ಇತರರು ಹಾಜರಿದ್ದರು.

ಉನ್ನತಿ ಟ್ರಸ್ಟ್, ಅರಣ್ಯ ಇಲಾಖೆಯಿಂದ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಪ್ಲಾಸ್ಟಿಕ್ ತೆರವು



ಚಾಮರಾಜನಗರ, ಅ.7– ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಳ್ಳೂರು ಗೇಟಿನಿಂದ ರಾಮಪುರ ಕ್ರಾಸ್‌ವರೆಗೆ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಅನ್ನು ಆಯ್ದುಕೊಳ್ಳುವ ಮೂಲಕ ಉನ್ನತಿ ಟ್ರಸ್ಟ್, ಅರಣ್ಯ ಇಲಾಖೆಯ ಸಹಯೋಗದಲ್ಲಿ ಪ್ಲಾಸ್ಟಿಕ್ ಮುಕ್ತ ಅರಣ್ಯಗೊಳಿಸಲಾಯಿತು.

ಈ ಸಂದರ್ಭದಲ್ಲಿ ಉನ್ನತಿ ಟ್ರಸ್ಟ್ ಅಧ್ಯಕ್ಷ ರಮೇಶ್ ಮಾತನಾಡಿ, ಪ್ಲಾಸ್ಟಿಕ್ ಪರಿಸರಕ್ಕೆ ಮಾರಕವಾಗಿದೆ. ನಮ್ಮ ಟ್ರಸ್ಟ್, ಅರಣ್ಯ ಇಲಾಖೆಯ ಸಹಯೋಗದಲ್ಲಿ ಪುಣಜನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಳ್ಳೂರು ಗೇಟಿನಿಂದ ರಾಮಪುರ ಕ್ರಾಸ್‌ವರೆಗೆ ಸುಮಾರು 6 ಕಿ.ಮೀ ದೂರ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಅನ್ನು ಆಯ್ದು ಪ್ಲಾಸ್ಟಿಕ್ ಮುಕ್ತ ಅರಣ್ಯವಾಗಿ ಪರಿವರ್ತಿಸಲಾಗಿದೆ ಎಂದರು.

ವಲಯ ಸಂರಕ್ಷಣಾಧಿಕಾರಿ ವಿನೋದ, ಅರಣ್ಯ ಸಿಬ್ಬಂದಿಗಳು, ಟ್ರಸ್ಟ್ ಗೌರವ ಅಧ್ಯಕ್ಷ ಎಸ್.ಆರ್.ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಡಾ.ಶಿವಕುಮಾರ್, ಉಪಾಧ್ಯಕ್ಷ ಗುರುಸ್ವಾಮಿ, ಖಜಾಂಚಿ ಶಿವಬಸವಣ್ಣ, ಪುಷ್ಪಲತಾ, ಪಿಡಿಓ ಸಿದ್ದಪ್ಪಾಜಿ, ಅಟ್ಟುಗುಳಿಪುರ ಗ್ರಾ.ಪಂ ಸದಸ್ಯರು, ಸಿದ್ದಯ್ಯನಪುರ ಅಂಬೇಡ್ಕರ್ ಸಂಘದ ಸದಸ್ಯರು ಭಾಗವಹಿಸಿದ್ದರು.

ತಗಡೂರು ರಾಮಚಂದ್ರರಾವ್ ಜನ್ಮ ದಿನಾಚರಣೆ

ಚಾಮರಾಜನಗರ, ಅ.7– ನಗರದ ಜೈಹಿಂದ್ ಕಟ್ಟೆಯಲ್ಲಿ ಜೈಹಿಂದ್ ಪ್ರತಿಷ್ಠಾನ ಮತ್ತು ಋಗ್ವೇದಿ ಯೂತ್ ಕ್ಲಬ್ ವತಿಯಿಂದ ಮೈಸೂರು ಗಾಂಧಿ ತಗಡೂರು ರಾಮಚಂದ್ರ ರಾವ್ ಅವರ ಜನ್ಮದಿನವನ್ನು ಆಚರಿಸಲಾಯಿತು.



ನಿವೃತ್ತ ಶಿಕ್ಷಕರಾದ ಚಂದ್ರಕಲಾ ಅವರು ಪುಷ್ಪ ಹಾಗೂ ನೂಲಿನ ಹಾರ ಅರ್ಪಿಸಿ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಗಡೂರು ರಾಮಚಂದ್ರ ರಾವ್ ಮೈಸೂರು ಭಾಗದ ಮಹಾನ್ ಶಿಕ್ಷಣ ಪ್ರೇಮಿ ಹಾಗೂ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಯಾಗಿದ್ದವರು. ಅವರ ಪ್ರಭಾವದಿಂದ ನೂರಾರು ಜನ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ, ಭಾರತದ ಸೇವೆ ಸಲ್ಲಿಸಿದರು ಎಂದರು.

ಜೈ ಹಿಂದ್ ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ್ ಎನ್.ಋಗ್ವೇದಿ ಮಾತನಾಡಿ, ತಗಡೂರು ರಾಮಚಂದ್ರ ರಾವ್ ತಮ್ಮ ಬಾಲ್ಯದಲ್ಲೇ ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸೈಮನ್ ಆಯೋಗದ ವಿರುದ್ಧ ಹೋರಾಟ ನಡೆಸಿ ಮೈಸೂರು ಭಾಗದ ಮೊದಲ ರಾಜಕೀಯ ಕೈದಿಯಾದವರು.

ತಗಡೂರು ರಾಮಚಂದ್ರರಾವ್ ಮಹಾತ್ಮ ಗಾಂಧೀಜಿಯವರನ್ನು ಮೈಸೂರು ತಗಡೂರು ಬದನವಾಳು ಗ್ರಾಮಗಳಿಗೆ ಕರೆ ತಂದವರು. ಇಡೀ ಜೀವನವನ್ನು ಭಾರತದ ಸ್ವಾತಂತ್ರ್ಯ ಚಳುವಳಿ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಲಕ್ಷಾಂತರ ಜನರಿಗೆ ಶಿಕ್ಷಣ ನೀಡಿದ ಸರಳ ಜೀವಿ ಎಂದರು. ಜೈಹಿಂದ್ ಪ್ರತಿಷ್ಠಾನದ ಕುಸುಮ, ಶ್ರಾವ್ಯ ಇದ್ದರು.

ಅ.10ರಂದು ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕ ಹಣ ಎಣಿಕೆ

ಚಾಮರಾಜನಗರ, ಅ.7– ಮಲೆ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಅ.10ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಭಾನುವಾರ 8 ಅಕ್ಟೋಬರ್ 2023

ಒಂದನೇ ಪುಟದಿಂದ

ಜಾತಿಗಣತಿ

ಮಟ್ಟದಲ್ಲಿ ಮದ್ಯದಂಗಡಿ ತೆರೆಯಲು ಅವಕಾಶ ನೀಡಲ್ಲ. ಹೊಸದಾಗಿ ಪರವಾನಗಿ ನೀಡುವ ಉದ್ದೇಶ ಸರ್ಕಾರದ ಮುಂದೆ ಇಲ್ಲ. ಸಾರ್ವಜನಿಕರ ಅಭಿಪ್ರಾಯಕ್ಕೂ ನಾವು ಮನ್ನಣೆ ನೀಡಬೇಕು. ಅದಕ್ಕಾಗಿ ಹೊಸ ಮದ್ಯದ ಅಂಗಡಿಗಳಿಗೆ ಅನುಮತಿ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಸಿಎಂ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕುಡಿಯುವವರನ್ನು ತಡೆಯಲು ಆಗುವುದಿಲ್ಲ, ಅದರಿಂದ ಉದ್ಯೋಗ ಸೃಷ್ಟಿ ಯಾಗುತ್ತದೆ ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರು ಹೊಸದಾಗಿ ಮದ್ಯದ ಅಂಗಡಿ ತೆರೆಯುತ್ತೇವೆ ಎಂದು ಹೇಳಿಲ್ಲ ಅವರ ಅಭಿಪ್ರಾಯ ಹೇಳಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಪ್ರತಿಕ್ರಿಯೆ ನೀಡಲ್ಲ: ಲಿಂಗಾಯತ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ ಎಂಬ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಹೇಳುವುದು ಒಂದು, ಮಾಡುವುದು ಇನ್ನೊಂದು: ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದಂತೆ ನಡೆದುಕೊಳ್ಳುವು ದಿಲ್ಲ. ಒಂದೆಡೆ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎನ್ನುತ್ತಾರೆ. ಆದರೆ, ಅವರು ವಾಸ್ತವವಾಗಿ ಎಲ್ಲರನ್ನು ಸರಿ ಸಮಾನವಾಗಿ ನೋಡುತ್ತಾರಾ ಎಂದು ಪ್ರಶ್ನಿಸಿದರು. ಚುನಾವಣೆಯಲ್ಲಿ ಸ್ಪರ್ಧಿಸಲು ಮುಸಲ್ಮಾನರಿಗೆ ಟಿಕೆಟ್ ಕೊಡದೆ ಹೋದರೆ ಸಬ್ ಕಾ ಸಾಥ್ ಆಗು ತ್ತದೆಯೇ. ಎಲ್ಲರನ್ನೂ ಒಳಗೊಂಡಂತೆ ಆಗುತ್ತದೆಯೇ? ಹೇಳುವುದಕ್ಕೂ, ಮಾಡುವುದಕ್ಕೂ ವ್ಯತ್ಯಾಸವಿದೆ. ಹೇಳೋದು ಬೇರೆ, ವಸ್ತುಸ್ಥಿತಿ ಬೇರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಟೀಕಿಸುವ ಮಾಧ್ಯಮಗಳ ಮೇಲೆ ದೇಶದ್ರೋಹದ ಪ್ರಕರಣ ಹಾಕುವುದು ಎಷ್ಟು ಸರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಅದು ಸರಿಯಲ್ಲ ಎಂದರು.

ಭಾರತದ ಅಭಿವೃದ್ಧಿ ಸಾಧ್ಯವಾಗದು

ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತ. ಜಾತಿ ರಹಿತವಾದ ವೈಚಾರಿಕ ಸಮಾಜದ ನಿರ್ಮಾಣ ಮಾಡಲು ಯತ್ನಿಸಿದ ಬಸವಾದಿ ಶರಣರ ಬಗ್ಗೆ ನನಗೆ ಅಪಾರ ಗೌರವ ಹಾಗೂ ಪ್ರೀತಿ ಇದೆ. ಈ ಹಿನ್ನೆಲೆಯಲ್ಲಿ ಬಸವ ತತ್ವಾದರ್ಶದಲ್ಲಿ ನಡೆಯುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಬಸವ ಪ್ರೇರಣೆ: ನುಡಿದಂತೆ ನಡೆಯುವ ಬಸವಾದಿ ಶರಣರ ತತ್ವ ಸಿದ್ಧಾಂತವನ್ನು ಸಾಕಾರಗೊಳಿಸುವ ದೃಷ್ಟಿಯಿಂದ 2013ರಲ್ಲಿ ಬಸವ ಜಯಂತಿ ದಿನದಂದೇ ನಾನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದೆ. ಮುಖ್ಯಮಂತ್ರಿಯಾದ ಮೊದಲ ದಿನವೇ ಅನ್ನಭಾಗ್ಯ ಯೋಜನೆ ಘೋಷಣೆ ಮಾಡಿದೆ. ತದನಂತರ ಕ್ಷೀರ ಭಾಗ್ಯ, ಕೃಷಿ ಭಾಗ್ಯ, ಸಾಲ ಮನ್ನಾ ಸೇರಿದಂತೆ ಹಲವು ಯೋಜನೆಗಳನ್ನು ಅನುಷ್ಠಾನ ಮಾಡಿದೆ. ನಾವು ಬಸವಾದಿ ಶರಣರಂತಾಗಲು ಸಾಧ್ಯವಿಲ್ಲ. ಕನಿಷ್ಠ ಅವರ ಮಾರ್ಗದಲ್ಲಿ ಸಾಗುವ ಪ್ರಾಮಾಣಿಕ ಪ್ರಯತ್ನವನ್ನಾದರೂ ಮಾಡೋಣವೆಂದು ಅಂದು ಈ ನಿರ್ಧಾರ ಕೈಗೊಂಡೆ ಎಂದರು. ಚಲನರಹಿತ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಈ ಕಾರಣದಿಂದ ಬಸವಣ್ಣನವರು ಜಡ್ಡುಗಟ್ಟಿದ ಸಮಾಜಕ್ಕೆ ಚಲನಶೀಲತೆ ನೀಡಿ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕಿದರು. ಮೌಢ್ಯ ಹಾಗೂ ಕಂದಾಚಾರವನ್ನು ಕಿತ್ತೆಸೆದರು. ವೈಚಾರಿಕತೆಯ ಮಹತ್ವವನ್ನು ಸಾರಿ ಹೇಳಿದರು.

ವೈಚಾರಿಕ ಹಾಗೂ ವಿಚಾರಶೀಲತೆ ಗಟ್ಟಿಗೊಂಡಾಗ ಮಾತ್ರ ಮಾನವೀಯ ಸಮಾಜ ನಿರ್ಮಾಣ ಸಾಧ್ಯ. ಇದನ್ನು ಮನಗಂಡು ಜಾತಿ ಹೆಸರಿನಲ್ಲಿ ಸಮಾಜ ಇಬ್ಭಾಗ ಆಗಬಾರದು ಎಂದು ಬಸವಣ್ಣನವರು ಕರೆ ನೀಡಿದ್ದರು ಎಂದರು.

ರಾಷ್ಟ್ರಕವಿ ಕುವೆಂಪು ಹೇಳಿದಂತೆ ಅಲ್ಪ ಮಾನವರಾಗುವ ಬದಲು ನಾವು ವಿಶ್ವಮಾನವರಾಗಬೇಕು. ಮೇಲು-ಕೀಳು ಎಂಬ ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದ ಸಮಾಜ ಮುಕ್ತ ಮಾಡಬೇಕು. ಮೇಲಿರುವವನು ಶ್ರೇಷ್ಠ, ಕೆಳಗಿರುವವನು ಕನಿಷ್ಠ ಎಂಬ ಮನೋಭಾವ ದೂರವಾಗಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

12ನೇ ಶತಮಾನದ ಬಸವಣ್ಣನವರ ಕಾಲದಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿತ್ತು. ಇವತ್ತಿನ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಪರಿಕಲ್ಪನೆ ಅಂದೇ ಅನುಭವ ಮಂಟಪದ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಅನುಭವ ಮಂಟಪದ್ದವರು ಶೂದ್ರರು, ಶೋಷಿತರ ಪರವಾಗಿ ಕೆಲಸ ಮಾಡಿದರು. ಜಾತ್ಯಾತೀತ ಮನೋಭಾವ ಹೊಂದಿದ್ದ ಅವರೆಲ್ಲರೂ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಅಂತರ್ಜಾತಿ ವಿವಾಹ ಮಾಡಿಸಿದರು. ಬಾಲ್ಯ ವಿವಾಹ ಮಾಡದಂತೆ ಪರಿಣಾಮಕಾರಿ ಜಾಗೃತಿ ಮೂಡಿಸಿದ್ದರು ಎಂದು ಹೇಳಿದರು.

ಆದರೆ, ಈ ಬದಲಾವಣೆಯನ್ನು ಬಹಳಷ್ಟು ಜನರು ವಿರೋಧಿಸಿದರು. ಜಾತ್ಯಾತೀತ ವ್ಯವಸ್ಥೆ ರೂಪುಗೊಳ್ಳಲು ಕ್ರಾಂತಿಕಾರಿ ಬದಲಾವಣೆ ತಂದ ಬಸವಣ್ಣನವರ ವಿರುದ್ಧವೇ ಬಿಜ್ಜಳನನ್ನು ಎತ್ತಿಕಟ್ಟಿದರು. ಅಷ್ಟೆಲ್ಲಾ ವಿರೋಧದ ನಡುವೆ ಅಂದು ರೂಪಿಸಿದ ಜಾತ್ಯಾತೀತ ತತ್ವ ಸಿದ್ಧಾಂತವನ್ನು ಬಸವಾದಿ ಶರಣರು ಸಾರಿದರು.

ಸ್ವಾತಂತ್ರ್ಯ ಬಂದು 76 ವರ್ಷವಾದರೂ ಇನ್ನೂ ಆರ್ಥಿಕ, ರಾಜಕೀಯ ಅಸಮಾನತೆ ಬೇರೂರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಈ ಕಾರಣದಿಂದ ಜಾತಿ, ಧರ್ಮದ ತಾರತಮ್ಯ ಮಾಡದೆ ನಾನು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾಗೊಳಿಸಿದ್ದೇನೆ. ಯಾವುದೇ ಜಾತಿ, ಧರ್ಮದ ಭೇದ ಭಾವವಿಲ್ಲದೆ ಜೂನ್ 11 ರಿಂದ ಇಲ್ಲಿ ತನಕ ಕರ್ನಾಟಕದಲ್ಲಿ 73 ಕೋಟಿ ಮಹಿಳೆಯರು ಉಚಿತವಾಗಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣ ಮಾಡಿದ್ದಾರೆ. ಅನ್ನ ಭಾಗ್ಯ ಯೋಜನೆಯಲ್ಲಿ ಅಕ್ಕಿ ಪಡೆದಿದ್ದಾರೆ, ಗೃಹಲಕ್ಷ್ಮಿ ಯೋಜನೆಯಲ್ಲಿ ಹಣ ಪಡೆದಿದ್ದಾರೆ. ಬಸವ ತತ್ವಾದರ್ಶಗಳೇ ಈ ಎಲ್ಲಾ ಯೋಜನೆ ಸಾಕಾರಗೊಳಿಸಲು ಕಾರಣ ಎಂದು ಸಿದ್ದರಾಮಯ್ಯ ತಿಳಿಸಿದರು. ಪ್ರೊ.ಬಿ.ಸೋಮಶೇಖರ್ ರಚಿತ ಹನ್ನೆರಡನೇ ಶತಮಾನದ ಶರಣ ದಂಪತಿ ಹಾಗೂ ಡಿ.ನಾಗೇಂದ್ರಪ್ಪ ರಚಿತ ಬಸವಣ್ಣನವರ ಆಯ್ಕೆ ನೂರೆಂಟು ವಚನಗಳು ಕೃತಿಯನ್ನು ಈ ವೇಳೆ ಬಿಡುಗಡೆ ಮಾಡಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಅರಣ್ಯ ಸಚಿವರೂ ಆದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಬಿ.ಈಶ್ವರ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ್, ಶಾಸಕರಾದ ತನ್ವೀರ್ ಸೇಠ್, ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ್, ಮರಿತಿಬ್ಬೇಗೌಡ, ಮಾಜಿ ಶಾಸಕ ಡಾ.ಯತೀಂದ್ರ, ಅಶೋಕ್ ಖೇಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರೈತರಿಗೆ ಹೆಣ್ಣು ಸಿಗುತ್ತಿವೆ! ಓದಿದ ನಿರುದ್ಯೋಗಿಗೆ ಹೆಣ್ಣು ಸಿಗಲ್ಲ!!

"ಹೌದು, ಹುಲಿಯಾ": ಸಿಎಂ ಸಿದ್ದರಾಮಯ್ಯರ ಮಾತಿಗೆ ಸಭಿಕನ ಸಹಮತ

ಮೈಸೂರು, ಅ.7(ಬಿಎಲ್‌ಯು)-ಈಗ ರೈತರಿಗೆ ಹೆಣ್ಣು ಕೊಡುತ್ತಾರೆ, ಆದರೆ ಚೆನ್ನಾಗಿ ಓದಿದ್ದರೂ ಉದ್ಯೋಗವಿಲ್ಲದವರಿಗೆ ಹೆಣ್ಣು ಕೊಡದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ವೇಳೆ, ಮದುವೆಯಾಗಲು ರೈತರಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ. ಆದ ಕಾರಣ ರೈತ ಪರ ಯೋಜನೆ ರೂಪಿಸಿ ಎಂದು ಸಭಿಕರೊಬ್ಬರು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಮದುವೆಯಾಗಲು ರೈತರಿಗೆ ಹೆಣ್ಣು ಕೊಡುತ್ತಿಲ್ಲ ಎಂಬುದು ಸುಳ್ಳು. ಹಾಗೊಂದು ವೇಳೆ ನೀನೇಳುವ ಮಾತು ನಿಜವಾಗಿದ್ದರೆ ನಾನು ಸೇರಿದಂತೆ ಇಲ್ಲಿರುವ ಬಹಳಷ್ಟು ಜನರು ಮದುವೆಯಾಗಲು ಸಾಧ್ಯವೆ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಮದುವೆಯಾಗಲು ರೈತರಿಗೆ ಹೆಣ್ಣು ಸಿಗುತ್ತಿವೆ. ಆದರೆ ಚೆನ್ನಾಗಿ ಓದಿದ್ದರೂ ಉದ್ಯೋಗವಿಲ್ಲದ ಬಹಳಷ್ಟು ಜನರಿಗೆ ಹೆಣ್ಣು ಸಿಗುತ್ತಿಲ್ಲ. ಈ ವಿಚಾರ ವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ರೈತರಿಗೆ ಹೆಣ್ಣು ಕೊಡುತ್ತಿಲ್ಲ ಎಂಬ ವಾದವನ್ನು ನಾನು ಒಪ್ಪುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಮಾತನ್ನು ಹೇಳುತ್ತಿದ್ದಂತೆ ಸಭಿಕರೊಬ್ಬರು ಏರು ಧ್ವನಿಯಲ್ಲಿ "ಹೌದು, ಹುಲಿಯಾ" ಎಂದು ಕೂಗಿ ಹೇಳಿದರು. ಈ ವೇಳೆ ಇಡೀ ಸಭಾಂಗಣ ನಗೆಗಡಲಲ್ಲಿ ಮುಳುಗಿತು.

ಯಾವುದೇ ಧರ್ಮದ ಬೋಧನೆಯಾದರೂ ಅದನ್ನು ಅರ್ಥವಾಗುವ ಭಾಷೆಯಲ್ಲಿ ಹೇಳಿ ಕೊಡಬೇಕು. ಈ ಕಾರಣದಿಂದಲೇ ಬಸವಾದಿ ಶರಣರ ವಚನ ಸಾಹಿತ್ಯ ಜನರಿಗೆ ಮುಟ್ಟಿತು ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಸರಳವಾಗಿ ಹೇಳುವುದನ್ನು ಬಿಟ್ಟು ಸಂಸ್ಕೃತದಲ್ಲಿ ಹೇಳಿದರೆ ಅದು ಜನರಿಗೆ ಚೆನ್ನಾಗಿ ಅರ್ಥವಾಗುವುದೇ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಸಂಸ್ಕೃತವನ್ನು ದೈವ ಭಾಷೆ ಎನ್ನುತ್ತಾರೆ. ಆದರೆ ಅದು ನಮಗೆ ಅರ್ಥವಾಗಬೇಕಲ್ಲ ಎಂದರು. ನಾನು ಚಿಕ್ಕವನಾಗಿದ್ದಾಗ ಸಂಸ್ಕೃತದಲ್ಲಿ ಅಮರಕೋಶ ಹೇಳಿಕೊಡುತ್ತಿದ್ದರು. ಆದರೆ ನನಗೆ ಒಂದು ಚೂರು ಅರ್ಥವಾಗುತ್ತಿರ ಲಿಲ್ಲ. ಆದರೆ ಅರ್ಥವಾಗದಿದ್ದರೂ ಬಾಯಿ ಪಾಠ ಮಾಡುತ್ತಿದ್ದೆ ಎಂದು ತಮ್ಮ ಬಾಲ್ಯದ ಪ್ರಸಂಗವನ್ನು ಈ ವೇಳೆ ಮೆಲುಕು ಹಾಕಿದರು. ಮೈಸೂರಿನ ಜೆಎಸ್‌ಎಸ್ ಬಡಾವಣೆಯಲ್ಲಿ ಬಸವ ಭವನ ನಿರ್ಮಾಣ ಮಾಡಲು ಸರ್ಕಾರದಿಂದ ಹಣ ಸಹಾಯ ಕೇಳಿದ್ದೀರಾ. ನೀವು ಕೇಳಿದಷ್ಟು ಹಣ ಕೊಡಲು ಸಾಧ್ಯವಾಗದಿದ್ದರೂ ಮುಂದಿನ ಬಜೆಟ್‌ನಲ್ಲಿ ಎಷ್ಟು ಸಾಧ್ಯವಾಗುತ್ತೊ ಅಷ್ಟು ಹಣ ಕೊಡುತ್ತೇನೆ ಎಂದು ಸಿದ್ದರಾಮಯ್ಯ ಈ ವೇಳೆ ಭರವಸೆ ನೀಡಿದರು. ಸಚಿವ, ಶಾಸಕರ ಭಾಷಣ ಕೇಳಿದ್ದ ಜನರು ಸಿದ್ದರಾಮಯ್ಯ ಮಾತನಾಡುವ ವೇಳೆ ಸಭಾಂಗಣದಿಂದ ಎದ್ದು ಹೋಗಲು ಮುಂದಾ ದರು. ನನಗೂ ಹೊಟ್ಟೆ ಹಸಿದಿದೆ. ಆದರೂ ನಾನು ಇಲ್ಲಿ ನಿಂತಿಲ್ವಾ ಎಲ್ಲಾ ಕೂತುಕೊಳ್ಳಿ ಎಂದು ಸಿದ್ದರಾಮಯ್ಯ ತಮ್ಮದೇ ಧಾಟಿಯಲ್ಲಿ ತಾಕೀತು ಮಾಡಿ, ಜನರನ್ನು ಕೂರಿಸಿದರು.

ಅ.13ರಂದು ಚಾಮುಂಡಿಬೆಟ್ಟದ ಮಹಿಷ ಮಹೋತ್ಸವ

●ಅಶೋಕಪುರಂನಿಂದ ಬೆಟ್ಟದ ಮಹಿಷನ ಪ್ರತಿಮೆವರೆಗೆ ಬೈಕ್ ರ್‍ಯಾಲಿ ●ಪುಷ್ಪಾರ್ಚನೆ ನಂತರ ಕಲಾತಂಡಗಳು, ಸ್ತಬ್ಧಚಿತ್ರಗಳೊಂದಿಗೆ ಮೆರವಣಿಗೆ ●ಪುರಭವನದಲ್ಲಿ ಸಭಾ ಕಾರ್ಯಕ್ರಮ



ಮೈಸೂರು, ಅ.7(ಜಿಎ)-ಮಹಿಷಾ ದಸರಾ ಆಚರಣಾ ಸಮಿತಿ ವತಿಯಿಂದ 50ನೇ ವರ್ಷದ ಮಹಿಷ ಮಹೋತ್ಸವವನ್ನು ಅ.13ರಂದು ಏರ್ಪಡಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಅಶೋಕಪುರಂನಿಂದ ಚಾಮುಂಡಿಬೆಟ್ಟದ ಮಹಿಷನ ಪ್ರತಿಮೆ ಬಳಿಗೆ ಸಾವಿರಾರು ಮಂದಿ ಬೈಕ್ ರ್‍ಯಾಲಿ ಮೂಲಕ ತೆರಳಿ, ಮಹಿಷನಿಗೆ ಪುಷ್ಪಾರ್ಚನೆ ಮಾಡುತ್ತೇವೆ. ಬಳಿಕ ಚಾಮುಂಡಿಬೆಟ್ಟದ ತಪ್ಪಲಿನಿಂದ ವಿವಿಧ ಕಲಾತಂಡಗಳ ಜತೆ ಒಂದು ಸ್ತಬ್ಧಚಿತ್ರದಲ್ಲಿ ಬುದ್ಧ, ಬಸವಣ್ಣ, ಫುಲೆ, ಅಶೋಕ, ಕುವೆಂಪು, ವಾಲ್ಮೀಕಿಯವರ ಭಾವಚಿತ್ರ ಮೆರವಣಿಗೆ ಹಾಗೂ ಬುದ್ಧ ರಥವೂ ಸಾಗಲಿದ್ದು, ನಂತರ ಪುರಭವನದ ಸಭಾಂಗಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮವನ್ನು ಲೇಖಕಿ ಬಿ.ಟಿ.ಲಲಿತಾ ನಾಯಕ್ ಉದ್ಘಾಟಿಸಲಿದ್ದಾರೆ. ಉರಿಲಿಂಗಿ ಪೆದ್ದೀಶ್ವರ ಮಠದ ಜ್ಞಾನಪ್ರಕಾಶ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಇತಿಹಾಸ ಸಂಶೋಧಕ ಡಾ.ತಲಕಾಡು ಚಿಕ್ಕರಂಗೇಗೌಡ, ವಿಚಾರವಾದಿ ಡಾ.ಜೆ.ಎಸ್.ಪಾಟೀಲ್, ನಿವೃತ್ತ ಪ್ರಾಂಶುಪಾಲೆ ಬಿ.ಸಿ.ಇಂದ್ರಮ್ಮ ಮತ್ತು ಹೈಕೋರ್ಟ್ ವಕೀಲ ಎಚ್.ಮೋಹನ್ ಕುಮಾರ್ ಉಪಸ್ಥಿತರಿರುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಂತಕ ಪ್ರೊ.ಕೆ.ಎಸ್.ಭಗವಾನ್ ವಹಿಸಲಿದ್ದು, ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು, ಲೇಖಕ ಸಿದ್ದಸ್ವಾಮಿ, ಅಂಬೇಡ್ಕರ್‌ವಾದಿ ಡಾ.ಕೃಷ್ಣಮೂರ್ತಿ ಚಮರಂ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಹಿಷಾ ದಸರಾ ಕಾರ್ಯಕ್ರಮ ಮುಗಿಯುವವರೆಗೂ ಸಂಸದ ಪ್ರತಾಪಸಿಂಹ ಅವರನ್ನು ಬಂಧಿಸಿ ಎಂದು ಆಗ್ರಹಪಡಿಸಿದ ಅವರು, ಸಂಘರ್ಷ ಎಂದಿದ್ದಿರಿ, ನಿಮ್ಮನ್ನು ಯಾರು ಸಂಘರ್ಷಕ್ಕೆ ಕರೆದಿದ್ದಾರೋ ಅವರೊಟ್ಟಿಗೆ ಸಂಘರ್ಷ ಮಾಡಿ. ಅವರು ಹೇಳಿದ್ದನ್ನು ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ನೋಡುತ್ತಾ ಕುಳಿತಿದೆ. ಶೀಘ್ರವೇ ಅವರನ್ನು ಬಂಧಿಸಬೇಕಿತ್ತು. ಯಾರು ಸಂಘರ್ಷ ಎಂಬ ಪದ ಬಳಸುತ್ತಾರೋ ಅವರನ್ನು ಕೂಡಲೇ ಬಂಧಿಸಬೇಕು. ಅವರ ವಿರುದ್ಧ ದೂರು ಕೊಡಲು ನಮ್ಮ ಸಮಿತಿ ನಿರ್ಣಯಿಸಿದೆ. ಇಂತಹವರಿಂದ ಸಮಾಜಕ್ಕೆ ಬಹಳಷ್ಟು ಕೆಡುಕು ಆಗುತ್ತದೆ. ಸಮಾಜವನ್ನು ಎತ್ತಿಕಟ್ಟುವ ಕೆಲಸ ಇಂದು ಪ್ರತಾಪಸಿಂಹ ಅವರಿಂದ ಆಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಾಮುಂಡಿಬೆಟ್ಟ ಚಲೋ ಎಂಬ ಹೆಸರಲ್ಲಿ ರಾಜಕಾರಣ ಮಾಡಿಕೊಂಡು ಜನರಿಗೆ ಸುಳ್ಳುಗಳನ್ನು ಹೇಳಿಕೊಂಡು 5ರಿಂದ 10 ಸಾವಿರ ಜನ ಸೇರಿಸುತ್ತೇನೆ. ಯಾವುದೇ ಕಾರಣಕ್ಕೂ ಪುಷ್ಪಾರ್ಚನೆ ಮಾಡಲು ಬಿಡುವುದಿಲ್ಲ ಎನ್ನುತ್ತಿದ್ದಾರೆ. ನಾವೇನು ಅವರ ಜಾಗಕ್ಕೆ ಬಂದಿದ್ದೇವಾ? ಎಂದು ಪ್ರಶ್ನಿಸಿದರು.

ಚಾಮುಂಡಿ ವಿರೋಧಿಗಳು ನಾವಲ್ಲ. ಮಹಿಷಾ ದಸರಾ 1973ರಿಂದಲೂ ಮಂಟೆಲಿಂಗಯ್ಯ ಅವರು ಮಾಡಿಕೊಂಡು ಬಂದಿದ್ದರು. 2015ರ ಮಹಿಷಾ ಮಂಡಲ ಪುಸ್ತಕ ಪ್ರಕಟವಾದ ನಂತರ ಆಚರಣೆ ಮುನ್ನೆಲೆಗೆ ಬಂದಿದೆ. ಯಾವ ವರ್ಷವೂ ಅದನ್ನು ನಿಲ್ಲಿಸಿಲ್ಲ. ಹೀಗಾಗಿ ಈ ವಿಚಾರವಾಗಿ ಮಾತನಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಸಂಸದ ಪ್ರತಾಪಸಿಂಹ ಅವರು ಚಾಮುಂಡಿಬೆಟ್ಟ ಚಲೋ ಎಂಬ ಸಂದೇಶ ನೀಡಿರುವುದು ಸರಿಯಲ್ಲ ಎಂದರು.

ಇಂತಹ ಸಂಸದರನ್ನು ಇತಿಹಾಸದಲ್ಲಿ ನೋಡಿಲ್ಲ. ಬಹಳಷ್ಟು ಮಂದಿ ಸಂಸದರು ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತಂದಿದ್ದಾರೆ. ದೇವೇಗೌಡರು, ಅಂಬರೀಶ್, ಸುಮಲತಾ, ವಿಶ್ವನಾಥ್, ಶ್ರೀನಿವಾಸ್ ಪ್ರಸಾದ್, ದಾಸಪ್ಪ ಸೇರಿ ಅನೇಕರು ನಾಡಿಗೆ ಹಿರಿಮೆ ತಂದಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಲೇಖಕ ಸಿದ್ದಸ್ವಾಮಿ, ಕೃಷ್ಣಮೂರ್ತಿ ಚಮರಂ, ದ್ಯಾವಪ್ಪನಾಯಕ ಇನ್ನಿತರರು ಉಪಸ್ಥಿತರಿದ್ದರು

> ಮಹಿಷ ರಾಕ್ಷಸ ಆಗಿದ್ದರೆ ಮೈಸೂರಿಗೆ ಏಕೆ ಆತನ ಹೆಸರಿಡುತ್ತಿದ್ದರು. ಇಂತಹ ಸಾಮಾನ್ಯ ಜ್ಞಾನ ನಿಮಗಿಲ್ಲವೇ? ನಮಗೆ ಸಂವಿಧಾನವೇ ಸರ್ವಶ್ರೇಷ್ಠ ಗ್ರಂಥ. ಅದನ್ನು ಬಿಟ್ಟು ಬೇರೆಯದನ್ನು ಒಪ್ಪುವುದಿಲ್ಲ.
> - ಪ್ರೊ.ಕೆ.ಎಸ್.ಭಗವಾನ್, ಪ್ರಗತಿಪರ ಚಿಂತಕ

> ನಾವು ಚಾಮುಂಡಿ ವಿರೋಧಿಗಳಲ್ಲ. ವೈಯಕ್ತಿಕ ದ್ವೇಷಕ್ಕಿಳಿಯುವುದು ನಮ್ಮ ಮನಸ್ಥಿತಿಯಲ್ಲ. ಹೀಗಾಗಿ ನಾವು ಯಾವ ಸಂಘರ್ಷಕ್ಕೂ ಇಳಿಯದೇ ಕಾರ್ಯಕ್ರಮ ಮಾಡುತ್ತೇವೆ. ಬೇರೊಬ್ಬರ ಭಾವನೆಗೆ ಧಕ್ಕೆ ತರುವ ಪ್ರಯತ್ನ ಮಾಡುವುದಿಲ್ಲ. ಅವರು ಬೇಕಿದ್ದರೆ ಚಾಮುಂಡಿಯನ್ನು ಸುತ್ತುವರೆದು ರಕ್ಷಣೆ ಕೊಡಲಿ ನಮ್ಮ ಅಭ್ಯಂತರ ಇಲ್ಲ. ಅವರ ಆಚರಣೆಗೆ ನಾವು ಅಡ್ಡಿಯಾಗುವುದಿಲ್ಲ. ನಮ್ಮ ಆಚರಣೆಗೆ ಅವರು ಸಹ ಅಡ್ಡಿಯಾಗಬಾರದು. ನಾವು ಬುದ್ಧನ ಅನುಯಾಯಿಗಳಾಗಿದ್ದು ಶಾಂತಿ, ಸಾಮರಸ್ಯದ ಸಂದೇಶ ಸಾರುವುದೇ ನಮ್ಮ ಮೂಲ ಉದ್ದೇಶ. ಈಗಾಗಲೇ ಮಹಿಷಾ ದಸರೆ ತಡೆಯುವವರ ವಿರುದ್ಧ ದೂರು ನೀಡಿದ್ದೇವೆ. ನಮ್ಮ ದೂರಿಗೆ ಸ್ಪಂದಿಸದಿದ್ದರೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ವಿರುದ್ಧವೂ ಎಸ್ಸಿ, ಎಸ್ಟಿ ದೌರ್ಜನ್ಯ ಕಾಯಿದೆಯಡಿ ದೂರು ದಾಖಲಿಸಲು ನಿಶ್ಚಯಿಸಿದ್ದೇವೆ.
> -ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗಿ ಪೆದ್ದಿಮಠ

ಬುಡಕಟ್ಟು ಮಕ್ಕಳ ಶ್ರವಣ ದೋಷಕ್ಕೆ ಉಚಿತ ಚಿಕಿತ್ಸೆ

ಆಯುಷ್ ನಿರ್ದೇಶಕಿ ಡಾ. ಪುಷ್ಪವತಿ ಭರವಸೆ




ಮೈಸೂರು, ಅ.7(ಎಂಟಿವೈ)- ಆಶ್ರಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬುಡಕಟ್ಟು ಸಮುದಾಯದ ಮಕ್ಕಳಿಗೆ ಶ್ರವಣದೋಷವಿದ್ದರೆ ಉಚಿತ ಪರೀಕ್ಷೆ ನಡೆಸಿ, ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಷ್ ನಿರ್ದೇಶಕಿ ಡಾ.ಪುಷ್ಪವತಿ ತಿಳಿಸಿದ್ದಾರೆ.

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಹುಣಸೂರು ತಾಲೂಕಿನ ನಲ್ಲೂರುಪಾಲ ಆಶ್ರಮ ಶಾಲೆಯ 42 ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳಿಗೆ ಶ್ರವಣ ದೋಷ ಕಂಡು ಬಂದಲ್ಲಿ ಪೋಷಕರು ಉದಾಸೀನ ಮಾಡದೆ ತಜ್ಞ ವೈದ್ಯರಿಗೆ ತೋರಿಸಿ ಚಿಕಿತ್ಸೆ ಕೊಡಿಸಬೇಕು. ಮಕ್ಕಳು ಕಿವಿಗೆ ಕಡ್ಡಿ ಹಾಕುವುದಾಗಲೀ, ಕೋಳಿ ಪುಕ್ಕ ಹಾಕುವುದಾಗಲೀ, ಕಬ್ಬಿಣದ ಪಿನ್ನುಗಳನ್ನು ಹಾಕುವುದಾಗಲೀ ಮಾಡಬಾರದು ಎಂದು ಸಲಹೆ ನೀಡಿದರು.

ಸಂವಹನ ನ್ಯೂನತೆಗಳ ತಡೆಗಟ್ಟುವಿಕೆ ವಿಭಾಗದ ಮುಖ್ಯಸ್ಥ ಡಾ.ಎಂ.ಸಂದೀಪ್ ಮಾತನಾಡಿ, ಆಶ್ರಮ ಶಾಲೆಗಳ ಮಕ್ಕಳಿಗೆ ಪ್ರಥಮವಾಗಿ ಉಚಿತ ಚಿಕಿತ್ಸೆ ನೀಡುತ್ತಿದ್ದೇವೆ. ಸಾಮಾನ್ಯ ಮಕ್ಕಳಲ್ಲಿ ಶೇ.20ರಷ್ಟು ಕಿವಿಯಲ್ಲಿ ಸಮಸ್ಯೆ ಕಂಡು ಬಂದರೆ, ಹಾಡಿಗಳ ಮಕ್ಕಳಲ್ಲಿ ಶೇ.50ರಷ್ಟು ಸಮಸ್ಯೆ ಗೋಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಎರಡು ವಿಭಾಗಗಳು ಸಮನ್ವಯತೆಯಿಂದ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಮಾತನಾಡಿ, ಮೈಸೂರು ಜಿಲ್ಲೆಯ ಎಲ್ಲಾ ಆಶ್ರಮ ಶಾಲೆಗಳಲ್ಲೂ ಇಲಾಖೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಆಶ್ರಮ ಶಾಲೆಯಲ್ಲಿ ಬುಡಕಟ್ಟು ಸಮುದಾಯದ ಮಕ್ಕಳು ಶಿಕ್ಷಣ ಪಡೆಯುತ್ತಿರುವುದರಿಂದ ಅವರ ಆರೋಗ್ಯ ಕಾಪಾಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ತಪಾಸಣಾ ಶಿಬಿರಗಳ ಮೂಲಕ ಮಕ್ಕಳಲ್ಲಿ ಕಾಡುತ್ತಿರುವ ಆರೋಗ್ಯ ಸಮಸ್ಯೆಯನ್ನು ಗುರುತಿಸಿ, ಚಿಕಿತ್ಸೆ ಕೊಡಿಸಲಾಗುತ್ತಿದೆ. ತಪಾಸಣೆ ವೇಳೆ ಕಿವಿಯಲ್ಲಿ ಸಮಸ್ಯೆ ಕಂಡು ಬಂದ ಮಕ್ಕಳಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲು ವಾಕ್ ಮತ್ತು ಶ್ರವಣ ಸಂಸ್ಥೆಗೆ ಕರೆದುಕೊಂಡು ಬಂದಿದ್ದು ಮಕ್ಕಳಿಗೆ ಸಾರಿಗೆ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಆಯುಷ್ ಸಂಸ್ಥೆಯ ಡಾ.ಮಹಾದೇವಪ್ಪ, ಡಾ.ರವೀಶ್‌ಗಣಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನದ ಅಂಗವಾಗಿ ಅಶೋಕಪುರಂ ಫ್ರೆಂಡ್ಸ್ ಬಳಗದ ವತಿಯಿಂದ ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದ ಕುಸ್ತಿ ಅಖಾಡದಲ್ಲಿ ಏರ್ಪಡಿಸಿದ್ದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಗರ ಪಾಲಿಕೆ ಮಾಜಿ ಸದಸ್ಯ ಎಂ. ಪ್ರದೀಪ್ ಕುಮಾರ್ ಭಾಗವಹಿಸಿದ್ದರು.

ಅ.10, ಸನಾತನ ಧರ್ಮ ಕುರಿತು ಉಪನ್ಯಾಸ



ಮೈಸೂರು, ಅ.7(ಜಿಎ)-ಮೈಸೂರು ವಿವಿ ಸಂಶೋಧಕರ ಸಂಘ, ಮಾನಸ ಗಂಗೋತ್ರಿಯ ದಲಿತ ವಿದ್ಯಾರ್ಥಿ ಒಕ್ಕೂಟ, ಅಂಗಳ ಸಾಹಿತ್ಯ ಬಳಗ, ಈದಿನ.ಕಾಮ್ ಸಹಯೋಗದಲ್ಲಿ ಅ.10 ರಂದು ಬೆಳಗ್ಗೆ 10.30ಕ್ಕೆ ಸನಾತನ ಧರ್ಮ ಕುರಿತ ಡಾ.ಜಿ.ರಾಮಕೃಷ್ಣ ಅವರ ವಿಡಿಯೋ ಪ್ರದರ್ಶನ ಹಾಗೂ ಭಾರತದಲ್ಲಿ ಮಾನವತೆ ವಿಕಾಸಕ್ಕೆ ಇರುವ ಸವಾಲುಗಳು ಕುರಿತ ವಿಶೇಷ ಉಪನ್ಯಾಸ ಮತ್ತು ಮುಕ್ತ ಸಂವಾದ ಕಾರ್ಯಕ್ರಮವನ್ನು ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ವಿವಿ ಸಂಶೋಧಕರ ಸಂಘದ ಕಾರ್ಯಾಧ್ಯಕ್ಷ ಕಲ್ಲಹಳ್ಳಿ ಆನಂದ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಡಾ.ಜಿ.ರಾಮಕೃಷ್ಣ ಅವರು ಉಪ ನ್ಯಾಸ ನೀಡುವರು. ಲೇಖಕ ನಾ.ದಿವಾಕರ್ ಆಶಯ ಮಾತುಗಳನ್ನಾಡುವರು. ಮಹಿಳಾ ಹೋರಾಟಗಾರ್ತಿ ಈ.ರತಿರಾವ್ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಜಿ. ಮೋಹನ್, ಮೈಸೂರು ವಿವಿ ಸಂಶೋ ಧಕರ ಸಂಘದ ಅಧ್ಯಕ್ಷ ಸಿ.ಮಹೇಶ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾದ ಪರಂಜ್ಯೋತಿ ಉಪಸ್ಥಿತಿ ಇರುವರು ಎಂದರು.

ಭಾರತಾದ್ಯಂತ ಸನಾತನ ಧರ್ಮ ಚರ್ಚೆ ನಡೆಯುತ್ತಿದ್ದು, ಸನಾತನ ಧರ್ಮ ಕುರಿತು ತಪ್ಪು ತಪ್ಪಾದ ಮಾಹಿತಿಗಳು ಹರಡುತ್ತಿದೆ. ಸನಾತನ ಧರ್ಮವನ್ನು ರಾಜಕೀಯವಾಗಿ ತೆಗೆದುಕೊಳ್ಳಲಾಗುತ್ತಿದೆ. ಸನಾತನ ಧರ್ಮ ಕುರಿತು ಸರಿಯಾಗಿ ದೇಶಕ್ಕೂ ನಾಡಿಗೂ ತಿಳಿಸಲು ಈ ಉಪನ್ಯಾಸವನ್ನು ಏರ್ಪಡಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ವಿವಿ ಸಂಶೋಧಕರ ಸಂಘದ ಉಪಾಧ್ಯಕ್ಷ ಎಂ.ಲಿಂಗರಾಜು, ಸಂಶೋಧಕ ವರಹಳ್ಳಿ ಆನಂದ, ಅಂಗಳ ಸಾಹಿತ್ಯ ಬಳಗ ಸದಸ್ಯ ಸಂಜಯ ಕುಮಾರ್ ಉಪಸ್ಥಿತರಿದ್ದರು.

ಅ.10, ಮೈಸೂರಲ್ಲಿ ಮೆಗಾ ಬ್ರೈಡಲ್ ಸ್ಪರ್ಧೆ



ಮೈಸೂರು, ಅ.7(ಜಿಎ)-ಮೈಸೂರು ಬ್ಯೂಟಿಷಿಯನ್ಸ್ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರಿನ ಕೌಂಟ್ ಆನ್ ಅಸ್ ಅಕಾಡೆಮಿ ಸಹಯೋಗದಲ್ಲಿ ಅ.10ರಂದು ಬೆಳಗ್ಗೆ 10.30ಕ್ಕೆ ಮೆಗಾ ಬ್ರೈಡಲ್ ಸ್ಪರ್ಧೆ (ಮದುವೆ ವಧುವಿನ ಆರತಕ್ಷತೆ ಅಲಂಕಾರ)ಯನ್ನು ನಗರದ ಹೋಟೆಲ್ ಪ್ರೆಸಿಡೆಂಟ್‌ನಲ್ಲಿ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷೆ ಕೆ.ವೇದಾವತಿ ಎನ್.ರೈ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ದಕ್ಷಿಣ ಭಾರತದ ನಟಿ ಹಾಗೂ ಅಂತಾರಾಷ್ಟ್ರೀಯ ಭರತನಾಟ್ಯ ಕಲಾವಿದೆ ಸಾಯಿ ಜ್ಯೋತಿ ಉದ್ಘಾಟಿಸುವರು. ಅಂತಾರಾಷ್ಟ್ರೀಯ ಮಹಿಳಾ ವೃತ್ತದ ಅಧ್ಯಕ್ಷೆ ನಮ್ರತಾ ಶೆಣೈ ಮುಖ್ಯ ಅತಿಥಿಯಾಗಿ ಆಗಮಿಸುವರು. ಬಾಲಿವುಡ್ ಸೆಲೆಬ್ರಿಟಿ ಮೇಕಪ್ ಕಲಾವಿದೆ ಅಲ್ಪಾ ರಾಜ್ಗೋರ್ ಉಪನ್ಯಾಸ ನೀಡುವರು. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮೇಕಪ್ ಕಲಾವಿದರು ಭಾಗವಹಿಸಲಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಘದ ಸದಸ್ಯರು ಮತ್ತು ಮೇಕಪ್ ಕಲಾವಿದರಿಗೆ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ. ಮಾಹಿತಿಗಾಗಿ ಮೊ.ಸ. 9886608022/ 9945517399 ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್ ಕಾರ್ಯದರ್ಶಿ ಎಂ.ಎ. ಸಬೀನಾ, ಜಂಟಿ ಕಾರ್ಯದರ್ಶಿ ಎಂ. ಮಂಜುಳಾ, ಸದಸ್ಯರಾದ ಪ್ರತಿಭಾ ಶೆಟ್ಟಿ, ಆರ್.ಮಾಲಿನಿ, ಅಹಲ್ಯಾ ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮ

ಮೈಸೂರು, ಅ.7- ರಾಜ್ಯ ನಗರಾಭಿವೃದ್ಧಿ ಸಂಸ್ಥೆ ವತಿಯಿಂದ ಅ. 10ರಿಂದ 12 ರವರೆಗೆ ಕೆಪಾಸಿಟಿ ಬಿಲ್ಡಿಂಗ್ ಟ್ರೈನಿಂಗ್ ಪ್ರೋಗ್ರಾಂ ಫಾರ್ ಎಲೆಕ್ಟೆಡ್ ವುಮೆನ್ ರೆಪ್ರೆಸೆಂಟೇಟಿವ್ ಫಾರ್ ಯುಎಲ್‌ಬಿಎಸ್ ವಿಷಯ ಕುರಿತು ತರಬೇತಿ ಕಾರ್ಯಕ್ರಮವನ್ನು ಲಲಿತಮಹಲ್ ರಸ್ತೆಯಲ್ಲಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನೇತ್ರಾವತಿ ನಿಲಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ರಾಜಮಾರ್ಗದಲ್ಲಿ ಪಾಲಿಕೆ ಆಯುಕ್ತರ ಪಾದಯಾತ್ರೆ

ದಸರಾ ಸಿದ್ಧತೆ, ಕಾಮಗಾರಿ, ಸ್ವಚ್ಛತೆ ಪರಿಶೀಲನೆ



ಮೈಸೂರು, ಅ. 7(ಆರ್‌ಕೆ)- 2023ರ ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಆರಂಭವಾಗುತ್ತಿದ್ದಂತೆಯೇ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಇಂದು ಅಧಿಕಾರಿಗಳೊಂದಿಗೆ ರಾಜಮಾರ್ಗದಲ್ಲಿ ಪಾದಯಾತ್ರೆ ನಡೆಸಿದರು.

ಪುರಭವನದ ಆವರಣದಲ್ಲಿ ಬೆಳಗ್ಗೆ 7 ಗಂಟೆಗೆ ಜಮಾಯಿಸಿದ ಅವರು, ಅಲ್ಲಿನ ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆ ಕಾಮಗಾರಿ ವೀಕ್ಷಿಸಿ, ಅಂತಿಮ ಹಂತದಲ್ಲಿರುವ ಕಾಮಗಾರಿ ಪೂರ್ಣಗೊಳಿಸಿ ದಸರಾ ಒಳಗಾಗಿ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸುವಂತೆ ವಲಯಾಧಿಕಾರಿ ಹಾಗೂ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಲ್ಲಿಂದ ಪಾದಯಾತ್ರೆ ಆರಂಭಿಸಿದ ಆಯುಕ್ತರು, ದೊಡ್ಡ ಗಡಿಯಾರ ಪಾರಂಪರಿಕ ಸ್ಮಾರಕವನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸುವಂತೆ ಸಲಹೆ ನೀಡಿದರು. ಮುಂದೆ ಹಾರ್ಡಿಂಜ್ ಸರ್ಕಲ್‌ಗೆ ತೆರಳಿ ಸೆಸ್ಕ್‌ನಿಂದ ಕೈಗೊಂಡಿರುವ ವಿದ್ಯುದ್ದೀಪಾಲಂಕಾರ, ಫುಟ್‌ಪಾತ್ ರಿಪೇರಿ ಕಾಮಗಾರಿ ಪ್ರಗತಿ ವೀಕ್ಷಿಸಿದ ಬಳಿಕ ಅರಮನೆ ಉತ್ತರ ದ್ವಾರದ ಆವರಣ, ಕೆಆರ್. ಸರ್ಕಲ್‌ಗಳಲ್ಲೂ ಸ್ವಚ್ಛತೆ ಪರಿಶೀಲಿಸಿದರು.

ಸಯ್ಯಾಜಿರಾವ್ ರಸ್ತೆ, ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಯ ಫುಟ್‌ಪಾತ್ ಕಾಮಗಾರಿ, ರೈಲು ನಿಲ್ದಾಣ ಸರ್ಕಲ್, ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ಕೈಗೊಂಡಿರುವ ಸ್ವಚ್ಛತೆ ಹಾಗೂ ದೀಪಾಲಂಕಾರ ಸಿದ್ಧತೆಗಳನ್ನು ವೀಕ್ಷಿಸಿದ ಬಳಿಕ, ಖಾಸಗಿ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪಾಲಿಕೆ ಜಾಗದಲ್ಲಿ ಖಾಸಗಿ ಬಸ್ ನಿಲ್ದಾಣವಿದೆ. ಆದರೆ ಬಸ್ ಮಾಲೀಕರಿಂದ ಪಾಲಿಕೆಗೆ ಯಾವುದೇ ವರಮಾನ ಬರುತ್ತಿಲ್ಲ. ಮುಂದಿನ ದಿನಗಳಲ್ಲಿ ಹರಾಜು ಅಥವಾ ಟೆಂಡರ್ ಮೂಲಕ ನೆಲಬಾಡಿಗೆ ಸಂಗ್ರಹ ಮಾಡಲು ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾದಯಾತ್ರೆ ಮುಂದುವರಿಸಿದ ಅವರು, ಹೈವೇ ಸರ್ಕಲ್, ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋ, ಪಂಜಿನ ಕವಾಯತು ಮೈದಾನ ತಲುಪಿ, ಮಾರ್ಗದುದ್ದಕ್ಕೂ ಒಳಚರಂಡಿ ವ್ಯವಸ್ಥೆ, ಬೀದಿದೀಪ, ಸ್ವಚ್ಛತಾ ಕಾರ್ಯಗಳನ್ನು ಪರಿಶೀಲಿಸಿದರಲ್ಲದೆ, ದಸರಾ ಜಂಬೂಸವಾರಿ ಮೆರವಣಿಗೆಗೆ ಸಿದ್ಧತೆ ಮಾಡುವಂತೆಯೂ ಸೂಚಿಸಿದರು.

ನಂತರ ಪಂಜಿನ ಕವಾಯತು ಮೈದಾನದಲ್ಲಿ ವೈಮಾನಿಕ ಸಮೀಕ್ಷೆ ದಸರಾ ಟಾರ್ಚ್ ಲೈಟ್ ಪರೇಡ್‌ಗೆ ಕೈಗೊಂಡಿರುವ ಸಿದ್ಧತೆ, ಪ್ರವೇಶ ದ್ವಾರಗಳು, ವಾಹನ ನಿಲುಗಡೆ ವ್ಯವಸ್ಥೆ ಬಗ್ಗೆಯೂ ಪರಿಶೀಲಿಸಿದರಲ್ಲದೇ, ಜೊತೆಯಲ್ಲೇ ಇದ್ದ ಸ್ವಚ್ಛತಾ ಸಿಬ್ಬಂದಿಗಳಿಂದ ಮೈದಾನದ ಸುತ್ತಲಿನ ರಸ್ತೆ ಬದಿಯ ಕಸವನ್ನು ತೆರವುಗೊಳಿಸಿದರು.

ಎಲ್‌ಐಸಿ ಸರ್ಕಲ್, ಟಿಪ್ಪು ಸರ್ಕಲ್, ಫೌಂಟೇನ್ ಸರ್ಕಲ್‌ಗಳಲ್ಲಿ ಪರಿಶೀಲನೆ ನಡೆಸಿದ ಷರೀಫ್, 10.30 ಗಂಟೆ ವೇಳೆಗೆ ಪಾದಯಾತ್ರೆಯನ್ನು ಅಂತ್ಯಗೊಳಿಸಿದರು. ಫುಟ್‌ಪಾತ್, ರಸ್ತೆ ಗುಂಡಿ ಮುಚ್ಚುವುದು, ದಸರಾ ಸಿವಿಲ್ ಕಾಮಗಾರಿ, ಸ್ವಚ್ಛತಾ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಂಡು, ದಸರಾ ಉದ್ಘಾಟನೆ ವೇಳೆ ರಾಜಮಾರ್ಗ ಸೇರಿದಂತೆ ಮೈಸೂರು ನಗರ ಸ್ವಚ್ಛವಾಗಿರುವಂತೆ ಕ್ರಮವಹಿಸಬೇಕೆಂದು ಪಾಲಿಕೆ ಆಯುಕ್ತರು ಪಾದಯಾತ್ರೆಯಲ್ಲಿದ್ದ ಅಧಿಕಾರಿಗಳಿಗೆ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ. ಸಿಂಧು, ಉಪ ಆಯುಕ್ತ (ಆಡಳಿತ)ರಾದ ಸೋಮಶೇಖರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ನಾಗರಾಜ್, ಮಹೇಶ್, ಹಿರಿಯ ಆರೋಗ್ಯಾಧಿಕಾರಿ ಡಾ. ಎನ್.ಪಿ. ವೆಂಕಟೇಶ್, ಪರಿಸರ ಇಂಜಿನಿಯರ್ ಎಸ್. ಮೈತ್ರಿ, ಪಾಲಿಕೆ ವಲಯ ಕಚೇರಿಗಳ ವಲಯ ಅಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಡಾ.ಅಮ್ಮಸಂದ್ರ ಸುರೇಶ್
ಮೊ. 9448402346

ಈಗಲೂ ಅಚ್ಚುಮೆಚ್ಚು ಅಂಚೆ ಅಣ್ಣ...

ಅಂಚೆಯ ಅಣ್ಣ ಬಂದಿಹೆ ಚಿಣ್ಣ
ಅಂಚೆಯ ಹಂಚಲು
ಮನೆ ಮನೆಗೆ.

ಸಾವಿರ ಸುದ್ದಿಯ ಸಾರುತ
ಬರುವೆನು ತುಂಬಿದ
ಚೀಲದ ಹೆಗಲೊಳಗೆ.

ಬಾಗಿಲ ತಟ್ಟಿ ಚಿಲಕವ ಕುಟ್ಟಿ
ಸದ್ದನು ಮಾಡುತ
ಕರೆಯುವೆನು.

ಕಾಗದ ಬಂದಿದೆ... ಬೇಗನೆ
ಬನ್ನಿರಿ... ಕಾಗದ ಕೊಳ್ಳಿರಿ
ಎನ್ನುವೆನು...





ಇದು ದಿನಕರ ದೇಸಾಯಿಯವರ ಕವಿತೆ. ಇಂದಿಗೂ ಅಂಚೆ ಅಣ್ಣನ ಕುರಿತು ಸುಂದರವಾದ ಚಿತ್ರಣವನ್ನು ನಮ್ಮೆದುರು ತೆರೆದಿಡುತ್ತದೆ.

ಕಂಪ್ಯೂಟರ್ ಆಗಮನದ ನಂತರ ಅಂತರಜಾಲ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಉಂಟಾಯಿತು. ಇ-ಮೇಲ್ ಸೇರಿದಂತೆ ಹಲವು ಸಂವಹನ ಮಾಧ್ಯಮಗಳು ಹೆಚ್ಚು ಜನಪ್ರಿಯತೆ ಪಡೆದವು. ಸ್ಮಾರ್ಟ್ ಫೋನ್‌ಗಳು ಬಂದ ಮೇಲೆ ವಾಟ್ಸಾಪ್, ಎಕ್ಸ್, ಇನ್ಸ್ಟಾಗ್ರಾಮ್, ಫೇಸ್‌ಬುಕ್‌ನಂತಹ ಹಲವು ಸಾಮಾಜಿಕ ಮಾಧ್ಯಮಗಳು ಹೆಚ್ಚು ಜನಪ್ರಿಯವಾದವು. ಇವುಗಳ ಮೂಲಕ ಯಾವುದೇ ಸಂದೇಶವನ್ನಾದರೂ ತಕ್ಷಣ ಒಬ್ಬರಿಂದ ಮತ್ತೊಬ್ಬರಿಗೆ ಕಳುಹಿಸುವ ಅವಕಾಶ ಲಭಿಸಿತು. ಸಂವಹನ ಕ್ಷೇತ್ರದಲ್ಲಾದ ಈ ಕ್ಷಿಪ್ರ ಬೆಳವಣಿಗೆಯ ಸಂದರ್ಭದಲ್ಲಿ ಅಂಚೆ ಇಲಾಖೆ ಇನ್ನು ಹೆಚ್ಚು ದಿನ ಉಳಿಯಲಾರದು ಎಂಬ ಮಾತುಗಳು ಕೇಳಿಬಂದವು.

ಆದರೆ ಸಂವಹನ ಕ್ಷೇತ್ರದಲ್ಲಿ ಆದ ಈ ಎಲ್ಲಾ ಬೆಳವಣಿಗೆಗಳು ಘಟಿಸಿ ದಶಕಗಳು ಕಳೆದರೂ ಅಂಚೆ ಇಲಾಖೆ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಮತ್ತು ಆಧುನಿಕ ತಂತ್ರಜ್ಞಾನಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಳ್ಳುವ ಮೂಲಕ ಪ್ರಬಲವಾಗಿ ಬೆಳೆಯುತ್ತಲೇ ಸಾಗಿದೆ. ಇಂದು ವಿಶ್ವ ಅಂಚೆ ದಿನ, ಹಾಗೆಯೇ ಪ್ರತಿ ವರ್ಷ ಅ.9 ರಂದು ವಿಶ್ವ ಅಂಚೆ ದಿನವನ್ನಾಗಿ ಜಗತ್ತಿನಾದ್ಯಂತದ ಎಲ್ಲಾ ದೇಶಗಳು ಅತ್ಯಂತ ಸಂಭ್ರಮದಿಂದ ಆಚರಿಸುತ್ತವೆ.

ಅದರಲ್ಲೂ ಭಾರತದಲ್ಲಿ ಈ ದಿನವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಜನರ ಜೀವನದೊಂದಿಗೆ ಇಂದಿಗೂ ಹಾಸುಹೊಕ್ಕಾಗಿರುವ, ದೇಶದ ಸಂವಹನದ ಜೀವನಾಡಿಯಾಗಿರುವ ಹಾಗೂ ಭಾರತದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿರುವ ಅಂಚೆ ಇಲಾಖೆಯ ಮಹತ್ವವನ್ನು ತಿಳಿದುಕೊಳ್ಳಲು ಈ ದಿನ ಉತ್ತಮವಾದ ಅವಕಾಶವನ್ನು ಮಾಡಿಕೊಡುತ್ತದೆ. 1969ರಲ್ಲಿ ಯುನಿವರ್ಸಲ್ ಪೋಸ್ಟಲ್ ಯೂನಿಯನ್ ಜಗತ್ತಿಗೆ ಅಂಚೆ ಸೇವೆಯ ಮಹತ್ವವನ್ನು ನೆನಪಿಸಲು ವಿಶ್ವ ಅಂಚೆ ದಿನವನ್ನು ಆಚರಿಸಲು ನಿರ್ಧರಿಸಿತು. ವಿಶ್ವದ ಮೊದಲ ಅಂಚೆ ದಿನವನ್ನು ಅಕ್ಟೋಬರ್ 9, 1969ರಂದು ಆಚರಿಸಲಾಯಿತು.

"ನಂಬಿಕೆಗಾಗಿ ಒಟ್ಟಿಗೆ : ಸುರಕ್ಷಿತ ಮತ್ತು ಸಂಪರ್ಕದ ಭವಿಷ್ಯಕ್ಕಾಗಿ ಸಹಯೋಗ" ಎಂಬುದು ಈ ವರ್ಷದ ವಿಶ್ವ ಅಂಚೆ ದಿನದ ಧ್ಯೇಯ ವಾಕ್ಯವಾಗಿದೆ.

ಅಂಚೆ ಇಲಾಖೆ ಭಾರತದಲ್ಲಿ ಹಲವು ಮೊದಲುಗಳಿಗೆ ಸಾಕ್ಷಿಯಾಗಿದೆ. ಭಾರತದಲ್ಲಿ ಮೊದಲು ಉಳಿತಾಯ ಖಾತೆ, ಜೀವವಿಮೆಯನ್ನು ಆರಂಭಿಸಿದ ಕೀರ್ತಿ ಅಂಚೆ ಇಲಾಖೆಯದ್ದಾಗಿದೆ. ದೇಶದಲ್ಲಿ ಮೊದಲ ಬಾರಿಗೆ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ಅಂಚೆ ಇಲಾಖೆ. ಕಾಲ ಕಳೆದಂತೆ ಸಾರ್ವಜನಿಕರ ಬೇಡಿಕೆಗೆ ತಕ್ಕಂತೆ ಅಂಚೆ ಇಲಾಖೆ ತನ್ನನ್ನು ತಾನು ಉನ್ನತೀಕರಿಸಿಕೊಂಡು ಸಾಗಿದೆ. ನೂತನ ತಂತ್ರಜ್ಞಾನ ಮತ್ತು ಹೊಸ ಹೊಸ ಸೇವೆಗಳ ಸೇರ್ಪಡೆಯ ಮೂಲಕ ಭಾರತೀಯ ಅಂಚೆ ತನ್ನ ಗ್ರಾಹಕರಿಗೆ ಆಧುನಿಕ ಮತ್ತು ಬಹು ವಿಧದ ಸೇವೆಗಳನ್ನು ಒದಗಿಸುತ್ತಿದೆ. ಇದು ಭಾರತ ಸರಕಾರ ನಡೆಸುವ ಸಾರ್ವಜನಿಕ ಅಂಚೆ ವ್ಯವಸ್ಥೆಯಾಗಿದೆ. ಅಂಚೆ ಕಚೇರಿಗಳ ಜಾಲದ ಮೂಲಕ ಸರ್ಕಾರದಿಂದ ಜಾರಿ ಮಾಡಲಾಗುವ ಹಲವಾರು ಕಲ್ಯಾಣ ಯೋಜನೆಗಳ ಪ್ರಯೋಜನಗಳ ಕಟ್ಟಕಡೆಯ ಜನರಿಗೂ ತಲುಪಿಸುವ ಮೂಲಕ ಭಾರತೀಯರ ಮನ ಮತ್ತು ಮನೆಯಲ್ಲಿ ಅಂಚೆ ಇಲಾಖೆ ಹಾಸುಹೊಕ್ಕಾಗಿದೆ.

1,55,000ಕ್ಕೂ ಹೆಚ್ಚು ಅಂಚೆ ಕಚೇರಿಗಳನ್ನು ಹೊಂದುವ ಮೂಲಕ ಭಾರತೀಯ ಅಂಚೆ ವಿಶ್ವದಲ್ಲೇ ಅತೀ ದೊಡ್ಡ ಸಂಪರ್ಕ ಜಾಲವನ್ನು ಹೊಂದಿದ ಕೀರ್ತಿಗೆ ಪಾತ್ರವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿಯೇ 1,39,182 ಅಂಚೆ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಭೌಗೋಳಿಕವಾಗಿ ದೇಶದ ಮೂಲೆ ಮೂಲೆಯನ್ನು ನೇರವಾಗಿ ತಲುಪುವ ಏಕೈಕ ಇಲಾಖೆ ಎಂಬ ಕೀರ್ತಿಗೂ ಪಾತ್ರವಾಗಿದೆ. ದೇಶದಲ್ಲಿ 6585 ಜನರಿಗೆ ಒಂದರಂತೆ ಒಂದು ಅಂಚೆ ಕಚೇರಿ ಕಾರ್ಯ ನಿರ್ವಹಿಸುತ್ತಿದೆ. ಪ್ರತಿ 21.13 ಚ.ಕಿ.ಮೀಗೆ ಒಂದು ಅಂಚೆ ಕಚೇರಿ ಸಾರ್ವಜನಿಕರ ಸೇವೆಯಲ್ಲಿ ನಿರತವಾಗಿದೆ. ಅಂಚೆ ಇಲಾಖೆಯಲ್ಲಿ ಒಟ್ಟು ಸುಮಾರು 5,37, 334 ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. 150 ವರ್ಷಗಳಿಗೂ ಹೆಚ್ಚು ಕಾಲ ಅಂಚೆ ಇಲಾಖೆ ದೇಶದ ಸಂವಹನದ ಬೆನ್ನೆಲುಬಾಗಿದೆ ಮತ್ತು ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ.

> ಮೈಸೂರಿನ ನಾಗರಿಕರಿಗೆ ಹಲವು ವಿಶೇಷ ಸೌಲಭ್ಯಗಳನ್ನು ಅಂಚೆ ಇಲಾಖೆ ಒದಗಿಸುತ್ತಿದೆ. ಮೈಸೂರು ಪ್ರಧಾನ ಅಂಚೆ ಕಚೇರಿಯಲ್ಲಿ ಗ್ರಾಹಕರು ಬೇರೆ ಕಡೆಗೆ ರವಾನಿಸಲು ತರುವ ವಸ್ತುಗಳನ್ನು ಪ್ಯಾಕಿಂಗ್ ಮಾಡಿ ಕೊಡುವ ಅನುಕೂಲವನ್ನು ಕಲ್ಪಿಸಲಾಗಿದೆ. ಕೈಗೆಟಕುವ ಬೆಲೆಯಲ್ಲಿ ಈ ಸೌಲಭ್ಯ ದೊರೆಯುತ್ತದೆ. ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ರೈಲ್ವೇ ಮೇಲ್ ಸರ್ವಿಸ್ ಕಟ್ಟಡದಲ್ಲಿ ಬಿಎನ್‌ಪಿಎಲ್ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು ಬಲ್ಕ್ ಆಗಿ ಸ್ಪೀಡ್ ಪೋಸ್ಟ್, ಬ್ಯುಸಿನೆಸ್ ಪಾರ್ಸಲ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಎರಡೂ ಸೇವೆಗಳಿಗೆ ಸಿಓಡಿ (ಕ್ಯಾಷ್ ಆನ್ ಡೆಲಿವರಿ) ವ್ಯವಸ್ಥೆ ಕೂಡ ಲಭ್ಯವಿದೆ. ನೋಂದಾವಣೆಯಾಗುವ ಕಾರ್ಪೊರೇಟ್ ಗ್ರಾಹಕರು, ವ್ಯಾಪಾರಸ್ಥರ ಸ್ಥಳದಿಂದಲೇ ನೇರವಾಗಿ ಉಚಿತವಾಗಿ ಪತ್ರಗಳನ್ನು ಮತ್ತು ಪಾರ್ಸಲ್‌ಗಳನ್ನು ತೆಗೆದುಕೊಂಡು ಬರುವ ವ್ಯವಸ್ಥೆಯನ್ನು ಮಾಡಲಾಗಿದೆ. ಅಂಚೆ ಚೀಟಿ ಸಂಗ್ರಹಕಾರರಿಗೆ ಅನುಕೂಲವಾಗಲು ಮೈಸೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಫಿಲಾಟೆಲಿ ಬ್ಯೂರೋ ಕಾರ್ಯನಿರ್ವಹಿಸುತ್ತಿದೆ. ಹೊಸದಾಗಿ ಬಿಡುಗಡೆಯಾಗುವ ಎಲ್ಲಾ ಅಂಚೆ ಚೀಟಿಗಳು, ಮೊದಲ ದಿನದ ಕವರ್‌ಗಳು, ವಿಶೇಷ ಲಕೋಟೆಗಳು ಹೀಗೆ ಫಿಲಾಟೆಲಿಗೆ ಸಂಬಂಧಿಸಿದ ಎಲ್ಲಾ ರೀತಿಯ ಸೌಲಭ್ಯಗಳು ಈ ಕೇಂದ್ರದಲ್ಲಿ ಲಭ್ಯವಿವೆ. ವಿದೇಶಗಳಿಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡುವ ವ್ಯಾಪಾರಸ್ತರಿಗಾಗಿ ಮೈಸೂರಿನ ಪ್ರಧಾನ ಅಂಚೆ ಕಚೇರಿ ಮತ್ತು ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗಳಲ್ಲಿ ಡಾಕ್ ನಿರ್ಯಾತ್ ಕೇಂದ್ರಗಳನ್ನು ಆರಂಭಿಸಲಾಗಿದೆ. ನಗರದಲ್ಲಿರುವ ಅಂಚೆ ತರಬೇತಿ ಸಂಸ್ಥೆ ದೇಶದ ಪ್ರಮುಖ ಅಂಚೆ ತರಬೇತಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಅಂಚೆ ಇಲಾಖೆಗೆ ಬೇಕಾಗುವ ನೂತನ ತಂತ್ರಜ್ಞಾನಗಳನ್ನು ಆವಿಷ್ಕರಿಸಿ ದೇಶದಾದ್ಯಂತ ಜಾರಿಗೆ ತರಲು ಅನುವಾಗಲು ನಗರದ ಅಂಚೆ ತರಬೇತಿ ಸಂಸ್ಥೆಯ ಆವರಣದಲ್ಲಿರುವ ಅಂಚೆ ಉನ್ನತ ತಂತ್ರಜ್ಞಾನ ಉತ್ಕೃಷ್ಟತಾ ಸಂಸ್ಥೆ ಪ್ರಮುಖ ಪಾತ್ರ ವಹಿಸಿದೆ.
>
> –ಡಾ.ಏಂಜಲ್ ರಾಜ್, ಹಿರಿಯ ಅಂಚೆ ಅಧೀಕ್ಷಕರು, ಮೈಸೂರು ಅಂಚೆ ವಿಭಾಗ, ಮೈಸೂರು

ಮೈ ಸ್ಟಾಂಪ್



ನಿಮ್ಮದೇ ಭಾವಚಿತ್ರವನ್ನು ಅಂಚೆ ಚೀಟಿಯನ್ನಾಗಿ ಹೊರ ತರುವ ವಿನೂತನ ಯೋಜನೆಯೊಂದನ್ನು ಭಾರತೀಯ ಅಂಚೆ ಜಾರಿಗೆ ತಂದಿದೆ, ಅದೇ ಮೈಸ್ಟಾಂಪ್. ಕೇವಲ 300 ರೂಪಾಯಿಗಳನ್ನು ಪಾವತಿ ಮಾಡುವ ಮೂಲಕ ಮೈಸೂರಿನ ಪ್ರಧಾನ ಅಂಚೆ ಕಚೇರಿಯಲ್ಲಿರುವ ಫಿಲಾಟೆಲಿ ಬ್ಯೂರೋದಲ್ಲಿ ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಆಸಕ್ತರು ತಮ್ಮ ಸ್ನೇಹಿತರಿಗೆ ಅಥವಾ ಸಂಬಂಧಿಕರಿಗೆ ಶುಭ ಸಮಾರಂಭಗಳ ಸಂದರ್ಭದಲ್ಲಿ ಅವರದೇ ಭಾವಚಿತ್ರವಿರುವ ಅಂಚೆ ಚೀಟಿಯನ್ನು ಮಾಡಿಸಿ ಉಡುಗೊರೆಯ ರೂಪದಲ್ಲಿ ಕೊಡಬಹುದು.

ಮುಖ್ಯವಾಗಿ ಕಾಗದ ಪತ್ರಗಳ ವಿತರಣೆ, ಸಣ್ಣ ಉಳಿತಾಯ ಯೋಜನೆಗಳ ಅಡಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವುದು, ಅಂಚೆ ಜೀವ ವಿಮೆ ಮತ್ತು ಗ್ರಾಮೀಣ ಅಂಚೆ ಜೀವ ವಿಮೆ ಅಡಿಯಲ್ಲಿ ಜೀವ ವಿಮಾ ರಕ್ಷಣೆಯನ್ನು ಒದಗಿಸುವುದು ಮತ್ತು ಬಿಲ್ ಸಂಗ್ರಹಣೆಯಂತಹ ಚಿಲ್ಲರೆ ಸೇವೆಗಳನ್ನು ಒದಗಿಸುವುದು, ಗೋಲ್ಡ್ ಬಾಂಡ್ ವಿತರಣೆ, ಇ-ಪೇಮೆಂಟ್, ಇ-ಎಂಒ, ಐಎಂಟಿ ಸೇರಿದಂತೆ ಹಣ ವರ್ಗಾವಣೆಯ ಹಲವು ಸೇವೆಗಳನ್ನು ಒದಗಿಸುವ ಮೂಲಕ ಇಂದು ಅಂಚೆ ಇಲಾಖೆಯು ಭಾರತೀಯ ನಾಗರಿಕರ ಜೀವನದ ಬಹುಮುಖ್ಯ ಭಾಗವಾಗಿದೆ. ಈ ಸೇವೆಗಳ ಜೊತೆಗೆ ಡೈರೆಕ್ಟ್ ಪೋಸ್ಟ್, ಮೀಡಿಯಾ ಪೋಸ್ಟ್, ಬ್ಯುಸಿನೆಸ್ ಪೋಸ್ಟ್, ವಿದ್ಯುತ್ ಬಿಲ್ ಸಂಗ್ರಹ, ರೈಲ್ವೇ ರಿಸರ್ವೇಷನ್ ಸೌಲಭ್ಯ, ವಿದೇಶಗಳಿಗೆ ರಫ್ತು ಮಾಡಲು ಅನುವಾಗಲು ಡಾಕ್ ನಿರ್ಯಾತ್ ಕೇಂದ್ರದ ವ್ಯವಸ್ಥೆ, ಆಧಾರ್ ಸೌಲಭ್ಯ, ಪಾಸ್‌ಪೋರ್ಟ್ ಸೇವೆ, ಕಾಮನ್ ಸರ್ವಿಸ್ ವ್ಯವಸ್ಥೆಯಡಿ ಹಲವು ಸೌಲಭ್ಯಗಳು, ಎಇಪಿಎಸ್, ಇ-ಪೋಸ್ಟ್, ಮೈಸ್ಟಾಂಪ್, ಪೋಸ್ಟ್ ಕ್ರಾಸಿಂಗ್, ಫಿಲಾಟೆಲಿ ಅಥವಾ ಅಂಚೆ ಚೀಟಿ ಸಂಗ್ರಹ ಹವ್ಯಾಸ, ದೀನ್ ದಯಾಳ್ ಸ್ಪರ್ಶ್ ಸ್ಕಾಲರ್‌ಶಿಪ್ ಯೋಜನೆ ಸೇರಿದಂತೆ ಹಲವು ಸೇವೆಗಳನ್ನು ಒದಗಿಸುತ್ತಾ ಭಾರತೀಯರ ಜೀವನಾಡಿಯಾಗಿ ಹೊರಹೊಮ್ಮಿದೆ. ಭಾರತದಲ್ಲಿ ಹೆಚ್ಚುತ್ತಿರುವ ವಾಣಿಜ್ಯ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅಂಚೆ ಇಲಾಖೆಯು ಡೈರೆಕ್ಟ್ ಪೋಸ್ಟ್ ಸೇವೆಯನ್ನು ಪರಿಚಯಿಸಿದೆ. ಇದೊಂದು ಜಾಹೀರಾತು ಮಾಧ್ಯಮವಾಗಿದ್ದು ವ್ಯಾಪಾರ ಸಂಸ್ಥೆಗಳು, ತಮ್ಮ ಉತ್ಪನ್ನ, ಸೇವೆಗಳನ್ನು ಜನರಿಗೆ ತಲುಪಿಸುವಲ್ಲಿ ಜಾಹೀರಾತು ಪ್ರಮುಖ ಪಾತ್ರವನ್ನು ವಹಿಸುತ್ತದೆ. ವ್ಯಾಪಾರಿ ಸಂಸ್ಥೆಗಳು ತಮ್ಮ ಪ್ರಚಾರದ ವಸ್ತುಗಳನ್ನು ಡೈರೆಕ್ಟ್ ಪೋಸ್ಟ್ ಮೂಲಕ ಜನರಿಗೆ ತಲುಪಿಸಬಹುದು. ಕರಪತ್ರ, ಆಹ್ವಾನ ಪತ್ರಿಕೆ, ಪೋಸ್ಟರ್, ತಮ್ಮ ಉತ್ಪನ್ನದ ವಿವರಗಳನ್ನೊಳಗೊಂಡ ಬ್ರೋಷರ್‌ಗಳು ಹೀಗೆ ವಿವಿಧ ಪರಿಕರಗಳನ್ನು ಡೈರೆಕ್ಟ್ ಪೋಸ್ಟ್ ಮೂಲಕ ಜನರಿಗೆ ತಲುಪಿಸಬಹುದು. ಅಂಚೆ ಇಲಾಖೆಯಲ್ಲಿರುವ ಮತ್ತೊಂದು ಜಾಹೀರಾತು ಮಾಧ್ಯಮವೆಂದರೆ ಮೀಡಿಯಾ ಪೋಸ್ಟ್. ಪರಿಮಾಣ ಮತ್ತು ವ್ಯಾಪ್ತಿಯ ವಿಷಯದಲ್ಲಿ ಬೇರೆ ಯಾವುದೇ ಇಲಾಖೆಯು ಅಂಚೆ ಇಲಾಖೆಗೆ ಸರಿಸಾಟಿಯಾಗಲಾರದು. ಇಂತಹ ಅಗಾಧ ಶಕ್ತಿಯನ್ನು ಹೊಂದಿರುವ ಅಂಚೆ ಇಲಾಖೆಯು ತನ್ನ ಉಳಿತಾಯ ಯೋಜನೆಗಳಿಗೆ ಗ್ರಾಹಕರಿಗೆ ನೀಡುವ ಪಾಸ್ ಪುಸ್ತಕ ಸೇರಿದಂತೆ ಸ್ಟೇಷನರಿಗಳ ಮೇಲೆ ಜಾಹೀರಾತುಗಳನ್ನು ಪ್ರಕಟಿಸುತ್ತದೆ. ಇದೇ ಮೀಡಿಯಾ ಪೋಸ್ಟ್, ಎಲ್ಲಾ ಬಗೆಯ ವ್ಯಾಪಾರ ಸಂಸ್ಥೆಗಳು, ಆಭರಣ ಮಾರಾಟಗಾರರು, ಈ ಸೌಲಭ್ಯವನ್ನು ಬಳಸಿಕೊಳ್ಳುವ ಮೂಲಕ ತಮ್ಮ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿಕೊಳ್ಳಲು ವಿಪುಲ ಅವಕಾಶಗಳಿವೆ.

ಮೈಸೂರು ಅಂಚೆ

ಭಾರತೀಯ ಸಂಸ್ಥಾನಗಳ ಪೈಕಿ ಅತ್ಯಂತ ಉನ್ನತ ಸ್ಥಿತಿಯಲ್ಲಿದ್ದ ಮತ್ತು ಜನಪರ ಆಡಳಿತಕ್ಕೆ ಹೆಸರುವಾಸಿಯಾಗಿದ್ದ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಪ್ರಮುಖವಾದುದು. ಅಂತಹ ರಾಜ್ಯಾಡಳಿತದಲ್ಲಿ ಕೈಗೊಳ್ಳಲಾದ ದೂರದೃಷ್ಟಿಯ ಯೋಜನೆಗಳಲ್ಲಿ ನಾಲ್ಕು ಶತಮಾನಗಳಿಗೂ ಹೆಚ್ಚು ಆಡಳಿತದೊಂದಿಗೆ ಹಾಸುಹೊಕ್ಕಾಗಿದ್ದ ಮೈಸೂರು ಅಂಚೆ ಕೂಡ ಒಂದು. 1672ರಲ್ಲಿ ಮಹಾರಾಜರಾದ ಚಿಕ್ಕದೇವರಾಜ ಒಡೆಯರ್‌ರವರು ಮೈಸೂರು ಅಂಚೆಯನ್ನು ಆರಂಭಿಸಿದರು. ಅವರು ತಮ್ಮ ಆಡಳಿತಾವಧಿಯಲ್ಲಿ 18 ಇಲಾಖೆಗಳನ್ನು ಒಳಗೊಂಡ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದರು. ಈ ಎಲ್ಲಾ ಇಲಾಖೆಗಳು ಕಾರ್ಯನಿರ್ವಹಿಸಲು 'ಅಠಾರ ಕಚೇರಿ' ಆರಂಭಿಸಿದರು. ಇವುಗಳ ಪೈಕಿ ಮೈಸೂರು ಅಂಚೆ ಕೂಡ ಒಂದು. ಕಾಗದ ಪತ್ರಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುವುದರ ಜೊತೆಗೆ ತಾವು ಕಂಡು ಕೇಳಿದ ಸಮಾಚಾರಗಳನ್ನು ಮಹಾರಾಜರ ಗಮನಕ್ಕೆ ತರುವುದು ಅಂಚೆ ಇಲಾಖೆಯ ಬಹುಮುಖ್ಯ ಕೆಲಸವಾಗಿತ್ತು. ಆರಂಭದಲ್ಲಿ ಕೇವಲ ರಾಜಪ್ರಭುತ್ವದ ಆಡಳಿತಕ್ಕೆ ಸಂಬಂಧಪಟ್ಟ ಪತ್ರಗಳನ್ನು ಬಟವಾಡೆ ಮಾಡುವ ಉದ್ದೇಶದಿಂದ ಆರಂಭವಾದ ಈ ವ್ಯವಸ್ಥೆ ಕ್ರಮೇಣ ಸಾರ್ವಜನಿಕರಿಗೂ ದೊರೆಯಿತು. ಕಾಗದ ಪತ್ರಗಳ ವಿಲೇವಾರಿಗಾಗಿ ಅಲ್ಲಲ್ಲಿ ಅಂಚೆ ಕೇಂದ್ರಗಳನ್ನು ತೆರೆಯಲಾಗಿತ್ತು. ಕಾಗದ ಪತ್ರಗಳನ್ನು ಸಾಗಿಸುವವರಿಗೆ 'ರನ್ನರ್ಸ್' ಎಂದು ಕರೆಯಲಾಗುತ್ತಿತ್ತು. ಅಂಚೆ ಇಲಾಖೆಯ ಮುಖ್ಯಸ್ಥರನ್ನು ಅಂಚೆ ಭಕ್ಷಿ ಎಂದು ಕರೆಯಲಾಗತ್ತಿತ್ತು. ಅಂಚೆ ಭಕ್ಷಿಯು 1867–68ರಲ್ಲಿ ಬ್ರಿಟಿಷ್ ಕಮಿಷನರ್ ಅವರ ನಿಯಂತ್ರಣದಲ್ಲಿದ್ದರು. ಅಂಚೆ ಭಕ್ಷಿಯವರ ಕೈಕೆಳಗೆ ಅಂಚೆ ಶಿರಸ್ತೆದಾರರು, ಪೇಷ್ಕಾರರು, ಗುಮಾಸ್ತರು, ಶರಾಫರು, ದಫೇದಾರರು, ತನಿಖಾಧಿಕಾರಿಗಳು, ಮುತ್ಸದ್ದಿಗಳು ಹಾಗೂ ಜವಾನರು ಕಾರ್ಯನಿರ್ವಹಿಸುತ್ತಿದ್ದರು. ಅಂದಿನ ಕಾಲಕ್ಕೆ ಮೈಸೂರು ಸಂಸ್ಥಾನದಲ್ಲಿ 1511 ಜನ ರನ್ನರ್‌ಗಳು ಅಂದರೆ ಓಲೆಕಾರರು, ಗೆಜ್ಜೆ ಕಟ್ಟಿದ ದಂಡವನ್ನು ಹಿಡಿದುಕೊಂಡು ಕಾಡುಮೇಡು ಎನ್ನದೇ ನಡೆದುಕೊಂಡೇ ಪತ್ರಗಳನ್ನು ತುಂಬಿದ ಚೀಲಗಳನ್ನು ರಾಜ್ಯದ ಉದ್ದಗಲಕ್ಕೂ ಸಾಗಿಸುತ್ತಿದ್ದರು. 1863ರಲ್ಲಿ ಬ್ರಿಟಿಷ್ ಸರ್ಕಾರದ ಅಧೀನದಲ್ಲಿದ್ದ ಶ್ರೀರಂಗಪಟ್ಟಣ, ಪಾಂಡವಪುರ, ಶಿವಮೊಗ್ಗ, ತುಮಕೂರು, ಹುಣಸೂರು ಅಂಚೆ ಕಚೇರಿಗಳೂ ಕೂಡ ಮೈಸೂರು ಅಂಚೆಯ ತೆಕ್ಕೆಗೆ ಸೇರಿಕೊಂಡವು. 1873ರ ಏಪ್ರಿಲ್ 1ರಂದು ಮೈಸೂರು ಅಂಚೆ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿತು. ಆಗ 151 ಅಂಚೆ ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ಭಾರತದಲ್ಲಿಯೇ ಅತ್ಯುತ್ತಮ ಪ್ರಾದೇಶಿಕ ಅಂಚೆ ಸೇವೆ ಎಂಬ ಹೆಗ್ಗಳಿಕೆಗೂ ಮೈಸೂರು ಅಂಚೆ ಒಳಗಾಯಿತು. 1880ರ ಏಪ್ರಿಲ್ 1ರಂದು ಮೈಸೂರು ಅಂಚೆಯ ಪ್ರತ್ಯೇಕ ಅಸ್ತಿತ್ವ ಕೊನೆಗೊಂಡು ಬ್ರಿಟಿಷ್ ಇಂಪೀರಿಯಲ್ ಅಂಚೆಯಲ್ಲಿ ವಿಲೀನಗೊಂಡಿತು.

ಮೈಸೂರಿನಲ್ಲಿ ಬ್ಯುಸಿನೆಸ್ ಪೋಸ್ಟ್ ಸೆಂಟರ್

ವಾಣಿಜ್ಯ ಸಂಸ್ಥೆಗಳಿಗೆ ಮತ್ತು ದೊಡ್ಡ ದೊಡ್ಡ ಸಂಸ್ಥೆಗಳಿಗೆ ಪತ್ರ ವ್ಯವಹಾರಕ್ಕೆ ಬೇಕಾಗುವ ಎಲ್ಲಾ ರೀತಿಯ ಅನುಕೂಲಗಳನ್ನು ಒಂದೇ ಸೂರಿನಡಿ ಕಲ್ಪಿಸುವ ಸಲುವಾಗಿ ಅಂಚೆ ಇಲಾಖೆಯು ಬ್ಯುಸಿನೆಸ್ ಪೋಸ್ಟ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಮೈಸೂರು ನಗರದ ಶೇಷಾದ್ರಿಅಯ್ಯರ್ ರಸ್ತೆಯಲ್ಲಿರುವ ರೈಲ್ವೇ ಮೇಲ್ ಸರ್ವಿಸ್ ಕಟ್ಟಡದಲ್ಲಿ ಬ್ಯುಸಿನೆಸ್ ಪೋಸ್ಟ್ ಸೆಂಟರ್ ಕಾರ್ಯನಿರ್ವಹಿಸುತ್ತಿದೆ. ಬಲ್ಕ್ ಪೋಸ್ಟ್ ಮಾಡುವವರು ಮುದ್ರಣಾಲಯದಿಂದ ನೇರವಾಗಿ ಈ ಕೇಂದ್ರಕ್ಕೆ ಅಂಚೆ ಮೂಲಕ ಕಳುಹಿಸಬೇಕಾಗಿರುವ ಪತ್ರಗಳನ್ನು ತರಬಹುದು. ಈ ಕೇಂದ್ರದಲ್ಲಿ ವಿಳಾಸಗಳನ್ನು ಅಂಟಿಸುವುದು, ಮಡಚುವುದು, ಕವರ್‌ನೊಳಗೆ ಹಾಕುವುದು, ಅಂಟಿಸುವುದು, ಅಂಚೆ ಶುಲ್ಕವನ್ನು ಮುದ್ರಿಸುವುದು ಅಂದರೆ ಫ್ರಾಂಕಿಂಗ್ ಮಾಡುವುದು, ಸಾರ್ಟಿಂಗ್ ಸೇರಿದಂತೆ ಎಲ್ಲಾ ಕೆಲಸವನ್ನು ಒಂದೇ ಕಡೆ ನಿರ್ವಹಿಸಲಾಗುತ್ತದೆ. ಈ ಎಲ್ಲಾ ಸೇವೆಗಳು ಗ್ರಾಹಕರ ಕೈಗೆಟುಕುವ ದರದಲ್ಲಿ ಲಭ್ಯವಿವೆ. ಬಲ್ಕ್ ಪೋಸ್ಟ್ ಮಾಡುವವರಿಗೆ ಬ್ಯುಸಿನೆಸ್ ಪೋಸ್ಟ್ ಸೆಂಟರ್ ವರದಾನವಾಗಿದೆ.





ವಾರಭವಿಷ್ಯ

8.10.2023 ರಿಂದ 14.10.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ಕಟಕ, ಸಿಂಹ, ಕನ್ಯಾ, ಕುಜ-ತುಲಾ, ಬುಧ-ಕನ್ಯಾ, ಗುರು-ಮೇಷ, ಶುಕ್ರ-ಸಿಂಹ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವೃತ್ತಿಪರ ಉದ್ಯೋಗಗಳಲ್ಲಿ ಹೆಚ್ಚುವರಿ ಕೆಲಸದ ಒತ್ತಡ ಇರುತ್ತದೆ. ಕೈಗೆತ್ತಿಕೊಂಡ ಕೆಲಸಗಳು ನಿಧಾನವಾಗಿ ಸಾಗುತ್ತವೆ ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಸಣ್ಣಪುಟ್ಟ ವಿಚಾರಗಳಿಗೆ ಕುಟುಂಬ ಸದಸ್ಯರೊಂದಿಗೆ ವಾಗ್ವಾದ ಉಂಟಾಗುತದೆ. ವಾರದ ಕಡೆಗೆ ಬಾಲ್ಯ ಸ್ನೇಹಿತರೊಂದಿಗೆ ಒಡನಾಟ, ಭೋಜನ, ಮನೋರಂಜನಾ ಕಾರ್ಯಕ್ರಮಗಳು ಜರುಗುವುದು. ಆರೋಗ್ಯದ ಬಗ್ಗೆ ಜಾಗ್ರತೆ ವಹಿಸಬೇಕು.
ಶ್ರೀ ಗಣಪತಿ ಸೇವೆ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಆಪ್ತ ಮಿತ್ರರ ಸಹಾಯದಿಂದ ಲಾಭವನ್ನು ಹೊಂದುವಿರಿ. ತಾಯಿ ಸಂಬಂಧಿತ ಆಸ್ತಿ ವಿಚಾರಗಳು ಅನುಕೂಲಕರವಾಗಿರುತ್ತವೆ. ಲಾಡ್ಜಿಂಗ್, ಹೋಟೆಲ್, ಕೆಟರಿಂಗ್ ವ್ಯವಹಾರಗಳು ಹೆಚ್ಚಿನ ಧನಲಾಭವನ್ನು ತರುವುದು. ವಾದ-ವಿವಾದಗಳು ಬಗೆಹರಿಯದೆ ಮನಸ್ಸಿಗೆ ಬೇಸರ. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದಲ್ಲಿ ಏರು-ಪೇರು ಉಂಟಾಗಬಹುದು. ಆಕಸ್ಮಿಕ ಪ್ರಯಾಣಗಳಿರುತ್ತವೆ.
ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಪ್ರಮುಖ ಕೆಲಸಗಳನ್ನು ಸರಿಯಾದ ಸಮಯಕ್ಕೆ ಪೂರ್ಣಗೊಳಿಸುತ್ತೀರಿ. ದೀರ್ಘಾವಧಿಯ ಸಮಸ್ಯೆಗಳು ಸಂಬಂಧಿಕರ ಸಹಾಯದಿಂದ ಬಗೆಹರಿಯುವುದು. ವ್ಯಾಪಾರ, ವ್ಯವಹಾರಗಳಲ್ಲಿ ಗುರುಕೃಪೆಯಿಂದ ನಿರೀಕ್ಷಿತ ಲಾಭ ದೊರೆಯುವುದು. ಮಕ್ಕಳ ಶಿಕ್ಷಣ ವಿಷಯದಲ್ಲಿ ನಿಮ್ಮ ನಿರೀಕ್ಷೆಗಳು ನಿಜವಾಗಲಿದೆ. ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚುವುದು. ವ್ಯರ್ಥ ಖರ್ಚುಗಳು ಎದುರಾಗಲಿವೆ.
ಶ್ರೀರಾಮ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶಿಗೆ ಬರುವ ನಿಮ್ಮ ರಾಶ್ಯಾಧಿಪತಿಯ ಅನುಗ್ರಹದಿಂದ ದೀರ್ಘಕಾಲದ ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಪರಿಹರಿಸಿಕೊಳ್ಳುವಿರಿ. ಕೈಗೆತ್ತಿಕೊಂಡ ಕೆಲಸಗಳು ಸಕಾಲದಲ್ಲಿ ಪೂರ್ಣಗೊಳ್ಳುತ್ತವೆ. ಮನೆಯಲ್ಲಿ ಶುಭ ಕಾರ್ಯದ ಬಗ್ಗೆ ಚರ್ಚೆಗಳು ನಡೆಯುತ್ತವೆ. ಹೊಸ ವ್ಯಾಪಾರಗಳು ಲಾಭದಾಯಕವಾಗಿ ನಡೆಯುತವೆ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಕಿರುಕುಳ. ಅನಾರೋಗ್ಯದ ಸೂಚನೆಗಳಿವೆ.
ಶ್ರೀ ದುರ್ಗಾ ಪ್ರಾರ್ಥನೆ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)

ವಾರದ ಆದಿಭಾಗಕ್ಕೆ ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ಮಿತ್ರರನ್ನು ಭೇಟಿಯಾಗಿ ಉತ್ಸಾಹದಿಂದ ಸಮಯ ಸಾಗುವುದು. ಆಸ್ತಿ ಪಾಸ್ತಿ, ನೂತನ ವಾಹನ ಹೊಂದುವ ಹಂಬಲ ಈಡೇರುವುದು. ನಿಮ್ಮ ಎಲ್ಲಾ ಕಾರ್ಯಗಳಲ್ಲಿ ಕುಟುಂಬ ವರ್ಗದ ಸಹಕಾರ ದೊರಕುವುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಹಿನ್ನಡೆ ಉಂಟಾಗುವುದು. ವಾಯು ಜನಿತ ಅನಾರೋಗ್ಯ ಕಾಡುವುದು.
ಶ್ರೀ ಗುರುವಂದನೆ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನೀವೊಂದು ಬಗೆದರೆ, ದೈವವೊಂದು ಬಗೆಯುತ್ತಿದೆ. ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕೆ ಇಲ್ಲ. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಅನ್ಯಥಾ ವಿಕೋಪಗಳು ಉಂಟಾದೀತು. ಸ್ಥಿರಾಸ್ತಿ ಮಾರಾಟದಲ್ಲಿ ಅಡಚಣೆಗಳು ಉಂಟಾಗುವುದು. ವಾರದ ಉತ್ತರಾರ್ಧದಲ್ಲಿ ಸಣ್ಣ ಕೈಗಾರಿಕೆಗಳಲ್ಲಿ ನಿರೀಕ್ಷೆಗಳು ಈಡೇರುತ್ತವೆ. ಆರ್ಥಿಕ ಪರಿಸ್ಥಿತಿಯು ಸುಧಾರಿಸುತ್ತದೆ. ಸ್ನಾಯು ತೊಂದರೆ ಕಾಡಬಹುದು.
ಶ್ರೀ ವೆಂಕಟೇಶ್ವರ ಅರ್ಚನೆ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಸ್ವಲ್ಪ ಸಮಯ ಮನೆಯವರೊಂದಿಗೆ ಪ್ರೀತಿ ವಾತ್ಸಲ್ಯದಿಂದ ಕಳೆಯುವಿರಿ. ಐಹಿಕ ಸುಖ ಭೋಗಗಳು ಅರಸಿ ಬರುವುದು. ಕೆಲವು ಮಹತ್ತರ ಕೆಲಸಗಳು ಸ್ವಪ್ರಯತ್ನದಿಂದಲೂ, ಕೆಲವು ಕೆಲಸಗಳು ಅಪ್ರಯತ್ನವಾಗಿಯೂ ಪೂರ್ಣಗೊಳ್ಳುವುದು. ಈ ಹಿಂದೆ ಮಾಡಿದ್ದ ಪ್ರತಿಜ್ಞಾ ಪರಿಪಾಲನೆಯನ್ನು ಪಾಲಿಸಿ ಜನ ಮೆಚ್ಚುಗೆಗೆ ಪಾತ್ರರಾಗುವಿರಿ. ನಿಮ್ಮ ರಾಶಿಯಲ್ಲಿ ಕೇತು, ಮಾರಕ ಸ್ಥಾನದಲ್ಲಿ ರಾಹು ನಿಮ್ಮ ಆತ್ಮಸ್ಥೈರ್ಯ ಪರೀಕ್ಷಿಸುವರು. ಶ್ರೀ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಗುರಿ ಸಾಧಿಸಲು ಗುರು ಮಾರ್ಗದರ್ಶನ ಬೇಕಾಗುತ್ತದೆ. ನಿರ್ಧಾರಕ್ಕೆ ಮುನ್ನ ನಿಧಾನಿಸಿ. ಗುರು-ಶನಿಗ್ರಹ ಅಶುಭ ಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ದುರ್ಘಟನೆ ಸ್ಥಳ, ವೇಳೆ ಹೇಳದೆ ಜರುಗಬಹುದು. ಸಹೋದರರೊಂದಿಗೆ ರಾಜೀ ಮಾರ್ಗ ಅನುಸರಿಸುವುದರಿಂದ ಸಮಸ್ಯೆಗಳು ನಿವಾರಣೆಯಾಗಲಿದೆ. ವಾರಾಂತ್ಯಕ್ಕೆ ಭೂಮಿಯಿಂದ ದೊರೆತ ಖನಿಜ ವಸ್ತುಗಳಿಂದ ಲಾಭವನ್ನು ಹೊಂದುವಿರಿ. ಜ್ವರ, ಉಷ್ಣಜನಿತ ಕಾಯಿಲೆ ಕಾಡಬಹುದು. ಶ್ರೀ ಸುಬ್ರಮಣ್ಯ ಆರಾಧನೆ. ಶುಭ ಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಮಾಜ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ವಿಶೇಷ ಗೌರವವನ್ನು ಪಡೆಯುವಿರಿ. ಗುರು ಬಲದ ಪರಿಣಾಮ ದೀರ್ಘಾವಧಿಯ ಸಮಸ್ಯೆಗಳಿಗೆ ಪರಿಹಾರವನ್ನು ಪಡೆಯುತ್ತೀರಿ. ಆರ್ಥಿಕವಾಗಿ ಸದೃಢರೆನಿಸಿ, ಮನೆಗೆ ಐಷಾರಾಮಿ ವಸ್ತುಗಳು ಬರುವುದು. ಪ್ರಮುಖ ವ್ಯಕ್ತಿಗಳ ಭೇಟಿಯಿಂದ ಕಾರ್ಯಾನುಕೂಲ. ಮಕ್ಕಳು ಶೈಕ್ಷಣಿಕ ವಿಚಾರದಲ್ಲಿ ಉನ್ನತ ಸಾಧನೆಯನ್ನು ಮಾಡುವರು. ವಾತಾ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಶ್ರೀಚಕ್ರ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ನೀವೊಂದು ಬಗೆದರೆ, ದೈವ ಮತ್ತೊಂದು ಬಗೆಯುತ್ತದೆ. ಕೈಗೆತ್ತಿಕೊಂಡ ಕೆಲಸಗಳಲ್ಲಿ ಅಡಚಣೆಗಳು ಉಂಟಾಗಬಹುದು. ಪ್ರಮುಖ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ವಿವಾದಗಳು ಬಗೆಹರಿಯುವುದು. ವಾರದ ಉತ್ತರಾರ್ಧಕ್ಕೆ ವ್ಯಾಪಾರ ವ್ಯವಹಾರಗಳು ಆಶಾದಾಯಕವಾಗಿದೆ. ಗೃಹ ನಿರ್ಮಾಣ ವಿಚಾರದಲ್ಲಿ ಕಾರ್ಮಿಕರ ಅಸಹಕಾರ, ವಂಚನೆಯಿಂದ ಮಾನಸಿಕ ವೇದನೆ, ನೇತ್ರ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಶ್ರೀನಿವಾಸ –ಪದ್ಮಾವತಿ ದರ್ಶನ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿರುದ್ಯೋಗಿಗಳಿಗೆ ಅಪರೂಪದ ಅವಕಾಶಗಳು ದೊರೆಯುವ ಸಾಧ್ಯತೆ ಇದೆ. ಇತರರಿಗೆ ಸಹಾಯ ಮಾಡುವುದರಿಂದ ಜನಾದರಕ್ಕೆ ಪಾತ್ರರಾಗುವಿರಿ. ವೃತ್ತಿಪರ ವ್ಯಾಪಾರಗಳು ಸಾಧಾರಣವಾಗಿ ಸಾಗುತ್ತದೆ. ಅನಿರೀಕ್ಷಿತ ಪ್ರಯಾಣಗಳು ಉಂಟಾಗುವುದು, ಡ್ರೈವಿಂಗ್ ಅತೀ ಎಚ್ಚರಿಕೆಯಿಂದ ಮಾಡಿ. ಮನೆಯಲ್ಲಿ ಕುಟುಂಬ ಸದಸ್ಯರ ವರ್ತನೆ ಕಿರಿಕಿರಿ ಉಂಟು ಮಾಡುತ್ತದೆ. ಅಗತ್ಯವಿದ್ದಾಗ ಕೈಯಲ್ಲಿ ಹಣ ಇರುವುದಿಲ್ಲ.
ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-8.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ವಾಹನ, ಭೂಮಿ ಮಾರಾಟದಲ್ಲಿ ಲಾಭವನ್ನು ನಿರೀಕ್ಷಿಸಬಹುದು. ಆರ್ಥಿಕ ವ್ಯವಹಾರಗಳು ತೃಪ್ತಿಕರವಾಗಿರುತ್ತದೆ. ನಿರುದ್ಯೋಗಿಗಳಿಗೆ ನೂತನ ಉದ್ಯೋಗ ದೊರೆಯುವುದು. ವಿದ್ಯಾರ್ಥಿಗಳಿಗೆ ಉತ್ತಮ ಶ್ರೇಣಿ ದೊರೆತು ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವವಿದೆ. ವಾರ್ತಾ ಸಂಸ್ಥೆಗಳಿಗೆ ಜನ ಮಾನ್ಯತೆ ದೊರೆಯುವುದು. ಆರೋಗ್ಯ ವಿಚಾರದಲ್ಲಿ ವೈದ್ಯಕೀಯ ಸಮಾಲೋಚನೆ ಅಗತ್ಯವೆನಿಸಲಿದೆ.
ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-2.

ಕಾಂಗ್ರೆಸ್ ಪ್ರಭಾವದಿಂದ ವಿರೋಧ ಪಕ್ಷಗಳಿಗೆ ಮರ್ಮಾಘಾತ

● ಸಚಿವ ಕೆ.ವೆಂಕಟೇಶ್ ಲೇವಡಿ ● ವಿವಿಧ ಗ್ರಾಮಗಳಲ್ಲಿ ಅಹವಾಲು ಸ್ವೀಕಾರ

ಬೆಟ್ಟದಪುರ, ಅ.7– ರಾಜ್ಯದಲ್ಲಿ ಕಾಂಗ್ರೆಸ್ ಅಲೆ ಮತ್ತು ಪ್ರಭಾವ ಹೆಚ್ಚಾಗುತ್ತಿರುವುದನ್ನು ಕಂಡು ವಿರೋಧ ಪಕ್ಷಗಳಿಗೆ ಮರ್ಮಾಘಾತವಾಗಿದೆ ಎಂದು ರೇಷ್ಮೆ ಮತ್ತು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಲೇವಡಿ ಮಾಡಿದರು.

ಪಿರಿಯಾಪಟ್ಟಣ ತಾಲೂಕಿನ ಪಿ.ಬಸವನಹಳ್ಳಿ, ಗಾಂಧಿನಗರ, ಚರಪುರ, ಪುನಾಡಹಳ್ಳಿ, ಮಲ್ಲಿನಾಥಪುರ, ಹುಣಸವಾಡಿ, ಕಿರಂಗೂರು, ನಂದಿನಾಥಪುರ, ಐಲಾಪುರ, ಕುಂದನಹಳ್ಳಿ ಸರ್ಕಲ್ ಹಾಗೂ ಬೂತನಹಳ್ಳಿ ಗ್ರಾಮಗಳಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಆರಂಭದಲ್ಲಿ ವಿರೋಧ ಪಕ್ಷಗಳು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಇವರಿಂದ ಸಾಧ್ಯವಿದೆಯೇ ಎಂದು ಅಪಹಾಸ್ಯ ಮಾಡಿದ್ದರು. ಆದರೆ, ಕೆಲವೇ ದಿನಗಳಲ್ಲಿ ಜನತೆಗೆ ನೀಡಿದ್ದ 5 ಭರವಸೆಗಳನ್ನು ಈಡೇರಿಸಿದ್ದೇವೆ. ಇದನ್ನು ನೋಡಿದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮೈಪರಚಿಕೊಳ್ಳುತ್ತಿದ್ದಾರೆ ಎಂದು ಛೇಡಿಸಿದರು.



ಬಲಿಯಾಗಬೇಡಿ: ನನ್ನ ರಾಜಕೀಯ ಜೀವನದಲ್ಲಿ ಯಾವುದೇ ಜಾತಿ, ಧರ್ಮದ ಹೆಸರಿನಲ್ಲಿ ಜನತೆಯನ್ನು ಎತ್ತಿಕಟ್ಟಿ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿಲ್ಲ. ಹೀಗಿರುವಾಗ ಕೆಲವರು ತಮ್ಮ ಸ್ವಾರ್ಥಕ್ಕೆ ಜನರನ್ನು ಬಲಿಪಶು ಮಾಡಲು ಹೊರಟಿದ್ದಾರೆ. ಇಂತಹವರ ಸ್ವಾರ್ಥಕ್ಕೆ ಜನತೆ ಬಲಿಯಾಗಬಾರದು ಎಂದರು.

ಪುನಾಡಹಳ್ಳಿ ಗ್ರಾಮ ಪಂಚಾಯಿತಿಗೆ 50 ಮನೆಗಳನ್ನು ಮಂಜೂರು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಮನೆ ನೀಡಲಾಗುವುದು. ಗ್ರಾಮದ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರ ನೀಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಯಾರೂ ಕೂಡ ಕುತಂತ್ರಕ್ಕೆ ಬಲಿಯಾಗಬೇಡಿ ಎಂದು ತಿಳಿಸಿದರು.

ಕೆರೆಗಳ ಒತ್ತುವರಿ ತೆರವುಗೊಳಿಸಿ: ಪಿ.ಬಸವನಹಳ್ಳಿ ಗ್ರಾಮದ ಸುತ್ತಮುತ್ತಲಿನ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದು, ಇವುಗಳನ್ನು ತೆರವುಗೊಳಿಸಬೇಕು. ಈ ಭಾಗದಲ್ಲಿ ಅನೇಕ ಸಂಪರ್ಕ ರಸ್ತೆಗಳು ಹಳ್ಳಕೊಳ್ಳಗಳಿಂದ ಕೂಡಿದ್ದು, ಇವುಗಳನ್ನು ರಿಪೇರಿ ಮಾಡಬೇಕು. ಪಂಚಾಯಿತಿ ವ್ಯಾಪ್ತಿಯ ಬಡಜನರಿಗೆ 50 ನಿವೇಶನ ಮಂಜೂರು ಮಾಡಿರುವುದು ಸ್ವಾಗತಾರ್ಹ. ಅದೇ ರೀತಿ ಮುಂದಿನ ದಿನಗಳಲ್ಲಿ ಮತ್ತಷ್ಟು ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಮುಖಂಡ ಬಿ.ಎ.ಪ್ರಕಾಶ್ ಸಚಿವರಿಗೆ ಮನವಿ ಮಾಡಿದರು.

ಇದೇ ವೇಳೆ ತಹಸೀಲ್ದಾರ್ ಕುಂಞ ಅಹಮದ್, ತಾಪಂ ಇಓ ಸುನೀಲ್ ಕುಮಾರ್, ಪಿಡಿಓ ಮಂಜುನಾಥ್, ನಾಗಶೆಟ್ಟಿ, ಅಧ್ಯಕ್ಷರಾದ ಜಯಮ್ಮ, ಲೋಕೇಶ್, ಉಪಾಧ್ಯಕ್ಷ ಶಿವನಂಜುಂಡ, ಮುಖಂಡರಾದ ಡಿ.ಟಿ.ಸ್ವಾಮಿ, ಪಿ.ಬಸವನಹಳ್ಳಿ ಪ್ರಕಾಶ್, ರಹಮತ್ ಜಾನ್‌ಬಾಬು, ಬಸವರಾಜ್, ನಾಗೇಗೌಡ, ಪಿ.ಮಹದೇವ್, ಯಜಮಾನ್ ರಾಜೇಗೌಡ, ಶಂಕರೇಗೌಡ, ಗಣೇಶ್, ಪಾಪೇಗೌಡ, ಬಸವಯ್ಯ, ಪ್ರತಾಪ್ ಕುಮಾರ್, ಸುರೇಶ್, ಮೋಹನ್ ಕುಮಾರ್, ಚಂದ್ರು, ನಂದಿನಾಥಪುರ ಸತೀಶ್, ಹುಣಸವಾಡಿ ಹರೀಶ್, ವಿವಿಧ ಇಲಾಖೆಯ ಅಧಿಕಾರಿಗಳಾದ ಡಾ.ವೈ.ಪ್ರಸಾದ್, ಡಾ.ಸೋಮಯ್ಯ, ವೆಂಕಟೇಶ್, ದಿನೇಶ್, ಮಾದೇಶ್, ಪ್ರಸಾದ್, ಧರ್ಮರಾಜ್, ಪ್ರಸಾದ್, ಚಂದ್ರೇಗೌಡ, ಬಸವರಾಜು, ಸಿಪಿಐ ಕೆ.ವಿ.ಶ್ರೀಧರ್ ಹಾಜರಿದ್ದರು.

ಹೊಸಕೋಟೆ ಗ್ರಾಪಂಗೆ ಪ್ರಶಸ್ತಿ ಪ್ರದಾನ



ತಿ.ನರಸೀಪುರ, ಅ.7–ಗಾಂಧಿಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ತಾಲೂಕಿನ ಹೊಸಕೋಟೆ (ಹಳೆಕೆಂಪಯ್ಯನಹುಂಡಿ) ಗ್ರಾಮ ಪಂಚಾಯಿತಿಗೆ ಶುಕ್ರವಾರ ಪ್ರಶಸ್ತಿ ನೀಡಲಾಯಿತು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಗ್ರಾಪಂ ಅಧ್ಯಕ್ಷೆ ನಂದಿನಿ, ಉಪಾಧ್ಯಕ್ಷೆ ಜಾನಕಮ್ಮ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಈಗಾಗಲೇ ಗ್ರಾಮ ಪಂಚಾಯಿತಿ ಹಲವು ಅಭಿವೃದ್ಧಿ ಕಾರ್ಯ ಮಾಡಿದ್ದು, ರಾಜ್ಯದಲ್ಲಿ ಮೊದಲ ಬಾರಿಗೆ ಸಮಗ್ರ ಸಹಭಾಗಿ ಕ್ರಿಯಾ ಯೋಜನೆಯನ್ನು ಪಂಚತಂತ್ರಾಂಶದಲ್ಲಿ ಅಳವಡಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಸಂಜೀವಿನಿ ಘಟಕ ನಿರ್ಮಾಣ, 15ನೇ ಹಣಕಾಸು ಹಾಗೂ ಡಿಜಿಟಲ್ ಗ್ರಂಥಾಲಯ ಮತ್ತು ವಿಶೇಷಚೇತನರಿಗಾಗಿ ಬೀಕಾನ್ ಗ್ರಂಥಾಲಯ, ಅಂಗನವಾಡಿ ಕೇಂದ್ರಕ್ಕೆ ಚಿಲಿಪಿಲಿ ತಂತ್ರಾಂಶ ಅಳವಡಿಕೆ, ಡಿಜಿಟಲೀಕರಣ, ಪ್ರಾಥಮಿಕ ಶಾಲೆಗೆ ಪ್ರೊಜೆಕ್ಟರ್ ಸ್ಕ್ರೀನ್, ಗೋಡೆ ಬರಹ ಹಾಗೂ ಪ್ರೌಢಶಾಲೆಗೆ ದಾನಿಗಳ ಸಹಯೋಗದೊಂದಿಗೆ ಸ್ಮಾರ್ಟ್‌ಕ್ಲಾಸ್ ನಿರ್ಮಾಣ ಮಾಡಿ ಮಾದರಿ ಗ್ರಾಮ ಪಂಚಾಯಿತಿಯಾಗಿದೆ.

ಗ್ರಾಪಂ ಮಾಜಿ ಅಧ್ಯಕ್ಷ ಆನಂದ, ಮಾಜಿ ಉಪಾಧ್ಯಕ್ಷೆ ಚೆನ್ನಮ್ಮ, ಸದಸ್ಯರಾದ ಬಾಲಕೃಷ್ಣ ನಾಗರಾಜು ಇಂಡುವಾಳು, ನಾಗರಾಜು ಹೊಸಕೆಂಪಯ್ಯನಹುಂಡಿ, ಗಂಗಾಧರ, ಶೋಭಾ, ಕಾವ್ಯಶ್ರೀ, ಜಯಲಕ್ಷ್ಮಿ, ನೀಲಮ್ಮ ರಾಯರಹುಂಡಿ, ಸತೀಶ, ಸಿಬ್ಬಂದಿಗೆ ಪಿಡಿಓ ಪೂರ್ಣಿಮಾ ಅಭಿನಂದನೆ ಸಲ್ಲಿಸಿದ್ದಾರೆ.

ಬೀದಿಬದಿ ವ್ಯಾಪಾರಿಗಳ ಸ್ಥಳಾಂತರಕ್ಕೆ ಪರಿಶೀಲನೆ

ಸರಗೂರು, ಅ.7– ಬೀದಿಬದಿ ವ್ಯಾಪಾರಿಗಳು ಹಾಗೂ ಖಾಸಗಿ ವಾಹನಗಳ ನಿಲುಗಡೆ ಸ್ಥಳಾಂತರಿಸಲು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್, ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ಹಾಗೂ ಪಿಎಸ್ಐ ನಂದೀಶ್ ಕುಮಾರ್ ಪಟ್ಟಣದಲ್ಲಿ ಶನಿವಾರ ಪರಿಶೀಲಿಸಿದರು.

ಸಾರ್ವಜನಿಕರ ಅನುಕೂಲಕ್ಕಾಗಿ ಪಟ್ಟಣದ ಬೀದಿಬದಿಯ ವ್ಯಾಪಾರಿಗಳು ಹಾಗೂ ವಾಹನಗಳ ನಿಲುಗಡೆಯನ್ನು ಸ್ಥಳಾಂತರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ನಿವಾಸಿಗಳು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ದೂರು ಬಂದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲಿಸಿ, ಪಪಂ ಸದಸ್ಯರಿಂದ ಮಾಹಿತಿ ಪಡೆದರು.



ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿ, ಫುಟ್‌ಪಾತ್ ಇಲ್ಲದೆ ಹಾಗೂ ವಾಹನ ದಟ್ಟಣೆಯಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಇದರಿಂದ ರಸ್ತೆಯಲ್ಲೇ ತಿರುಗಾಡಬೇಕಾಗಿದೆ. ಆದ್ದರಿಂದ ಬೀದಿಬದಿ ವ್ಯಾಪಾರಿಗಳು ಹಾಗೂ ವಾಹನಗಳ ನಿಲುಗಡೆಯನ್ನು ಸ್ಥಳಾಂತರಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಶಾಸಕರು ತಿಳಿಸಿದ್ದಾರೆ. ಬೀದಿಬದಿ ವ್ಯಾಪಾರಿಗಳು, ವಾಹನ ಮಾಲೀಕರು ಹಾಗೂ ಸಾರ್ವಜನಿಕರು ಸಹಕಾರ ನೀಡಬೇಕು. ಈ ಸಂಬಂಧ ಅ.10ರಂದು ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಬೀದಿಬದಿ ವ್ಯಾಪಾರಿಗಳ ಸಭೆ ಕರೆಯಲಾಗಿದೆ ಎಂದು ಹೇಳಿದರು.

ಪಟ್ಟಣ ಪಂಚಾಯಿತಿ ಸದಸ್ಯ ಎಸ್.ಎಲ್. ರಾಜಣ್ಣ ಮಾತನಾಡಿ, ಸರಗೂರು ತಾಲೂಕು ಕೇಂದ್ರವಾದ ಬಳಿಕ ಜನಸಂಖ್ಯೆ ಹೆಚ್ಚಾದಂತೆ ವಾಹನಗಳ ದಟ್ಟಣೆ ಹೆಚ್ಚಾಗುತ್ತಿದೆ. ಬೀದಿಬದಿ ವ್ಯಾಪಾರಿಗಳ ಸಂಖ್ಯೆಯು ಹೆಚ್ಚಾದ ಕಾರಣ ಕೆಲವರು ಮುಖ್ಯರಸ್ತೆಯ ಆಸುಪಾಸಿನಲ್ಲಿ ಅನಧಿಕೃತವಾಗಿ ಶೆಡ್ ನಿರ್ಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪಾದಚಾರಿಗಳು, ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕ, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾರಾಮು, ಸದಸ್ಯರಾದ ಎಸ್.ಎಲ್. ರಾಜಣ್ಣ, ಚಲುವಕೃಷ್ಣ, ಶಿವಕುಮಾರ್, ಸಿಪಿಐ ಲಕ್ಷ್ಮಿಕಾಂತ್, ಪಿಎಸ್ಐ ನಂದೀಶ್ ಕುಮಾರ್, ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿಗಳು, ಸರಗೂರು ಪೊಲೀಸ್ ಠಾಣೆ ಸಿಬ್ಬಂದಿ ಹಾಜರಿದ್ದರು.

ಮಾತನಾಡುವುದು ಒಂದು ಕಲೆ: ನ್ಯಾಯಾಧೀಶ ಸಮೀವುಲ್ಲಾ



ಪಿರಿಯಾಪಟ್ಟಣ, ಅ.7–ಇತ್ತೀಚಿನ ದಿನಗಳಲ್ಲಿ ಮಾತನಾಡುವುದು ಒಂದು ಕಲೆಯಾದರೆ, ಅದನ್ನು ಕೇಳಿಸಿಕೊಳ್ಳುವುದು ಮತ್ತೊಂದು ಕಲೆ. ಇವೆರಡನ್ನು ಸರಿಯಾಗಿ ಕರಗತ ಮಾಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಿವಿಲ್ ನ್ಯಾಯಾಧೀಶ ಸಮೀಉಲ್ಲಾ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋಟರಿ ಮಿಡ್‌ಟೌನ್ ವತಿಯಿಂದ ಆಯೋಜಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತಾಲೂಕು ಮಟ್ಟದ ಚರ್ಚಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ನಾವು ಹಾಡುವ ಭಾಷೆಯ ಮೇಲೆ ಹಿಡಿತ ಹೊಂದಿರಬೇಕು. ಯಾವ ವಿಷಯ ಯಾವ ಸಂದರ್ಭದಲ್ಲಿ ಪ್ರಸ್ತುತ ಎಂಬುದನ್ನು ಅರಿತು ಮಾತನಾಡಬೇಕು. ಇಲ್ಲದಿದ್ದಲ್ಲಿ ಅದು ಬೇರೆ ರೀತಿಯ ಅಡ್ಡ ಪರಿಣಾಮ ಉಂಟುಮಾಡುತ್ತದೆ ಎಂದರು.

ಇಂದಿನ ಚರ್ಚಾ ಸ್ಪರ್ಧೆಯ ವಿಷಯ ಪ್ರಸ್ತುತ ಕಾಲಘಟ್ಟದಲ್ಲಿ ಪ್ರೇಮ ವಿವಾಹ ಹಾಗೂ ನಿಶ್ಚಯ ವಿವಾಹ ಒಳ್ಳೆಯ ಚರ್ಚೆಯಾಗಿದೆ. ಇತ್ತೀಚಿನ ಸಮಾಜದಲ್ಲಿ ನಾವು ನೋಡಿದ ಹಾಗೆ ವಿವಾಹ ಕೇವಲ ಒಂದು ಕೌಟುಂಬಿಕ ಬಂಧನ ಆಗಬಾರದು. ಕೌಟುಂಬಿಕ ವ್ಯವಸ್ಥೆಯಲ್ಲಿ ಏನಾದರೂ ಏರುಪೇರಾದರೆ ಇವೆರಡರ ಪ್ರೇಮ ಬಂಧನ ನ್ಯಾಯಾಲಯಕ್ಕೆ ಪ್ರಕರಣ ಹೋಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಈ ಎರಡು ವ್ಯವಸ್ಥೆ ಯುವಕ–ಯುವತಿಯರು ಹಾಗೂ ಕುಟುಂಬದವರ ಮನಸ್ಥಿತಿಯ ಮೇಲೆ ನಿರ್ಧರಿಸುತ್ತದೆ ಎಂದು ತಿಳಿಸಿದರು.

ರೋಟರಿ ವಲಯ–6ರ ಮಾಜಿ ಅಸಿಸ್ಟೆಂಟ್ ಗವರ್ನರ್ ಬಿ.ವಿ.ಜವರೇಗೌಡ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಹಿರಿಯರ ಸಮ್ಮುಖದಲ್ಲಿ ಸಂಗಾತಿಯನ್ನು ಆರಿಸಿಕೊಳ್ಳುವುದಕ್ಕಿಂತ ತಾವೇ ತಮ್ಮ ಸಂಗಾತಿಯನ್ನು ಆರಿಸಿಕೊಂಡು ಪ್ರೇಮ ವಿವಾಹ ಆಗುವುದು ಒಳಿತು. ನಿಶ್ಚಿತ ವಿವಾಹ ಕೆಡುಕಲ್ಲ. ಆದರೆ, ಇವೆರಡರಲ್ಲಿ ಯುವಕ–ಯುವತಿಯರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಪರಸ್ಪರ ಹೊಂದಾಣಿಕೆಯಿಂದ ಬಾಳ್ವೆ ಮಾಡಿದಾಗ ಮಾತ್ರ ಜೀವನ ಸುಖಮಯವಾಗಿರುತ್ತದೆ ಎಂದರು.

ಸಮಾರಂಭದಲ್ಲಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಅಂಬಿಕಾ, ರೋಟರಿ ವಲಯ–6ರ ಅಸಿಸ್ಟೆಂಟ್ ಗವರ್ನರ್ ಸತ್ಯನಾರಾಯಣ, ರೋಟರಿ ಮಿಡ್‌ಟೌನ್ ಅಧ್ಯಕ್ಷ ರಾಜೇಗೌಡ, ಕಾರ್ಯದರ್ಶಿ ಪುರುಷೋತ್ತಮ್ ಹೆಗಡೆ, ರೋಟರಿ ಸದಸ್ಯರಾದ ಎಂ.ಎಂ.ರಾಜೇಗೌಡ, ಶ್ರೀಕಾಂತ್, ಸಣ್ಣೇಗೌಡ ಉಪಸ್ಥಿತರಿದ್ದರು.

ವಿಜೇತರು: ಚರ್ಚಾ ಸ್ಪರ್ಧೆಯಲ್ಲಿ ಪಿರಿಯಾಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಿ.ಆರ್.ಅಶ್ವತ್ ಪ್ರಥಮ, ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವೇದಾಂತ್ ದ್ವಿತೀಯ, ಕೊಪ್ಪದ ಭಾರತ್ ಮಾತಾ ಪ್ರಥಮ ದರ್ಜೆ ಕಾಲೇಜಿನ ಸಂಜನಾ ತೃತೀಯ ಹಾಗೂ ಪಿರಿಯಾಪಟ್ಟಣ ಪ್ರಥಮ ದರ್ಜೆ ಕಾಲೇಜಿನ ಸಚಿನ್ 4ನೇ ಬಹುಮಾನ ಪಡೆದುಕೊಂಡರು. ಸ್ಪರ್ಧೆಯ ತೀರ್ಪುಗಾರರಾಗಿ ಶಿವಸ್ವಾಮಿ ಹಾಗೂ ಬೇಬಿ ಕಾರ್ಯನಿರ್ವಹಿಸಿದರು.

ಇಂದು ನಾಗರಹೊಳೆಯಲ್ಲಿ ಪತ್ರಕರ್ತರಿಗೆ ಕಾರ್ಯಾಗಾರ

ಹುಣಸೂರು, ಅ.7–ವನ್ಯಜೀವಿ ಸಪ್ತಾಹ ಅಂಗವಾಗಿ ವನ್ಯಜೀವಿ ಸಂರಕ್ಷಣೆ, ಮಾನವ ಹಾಗೂ ಕಾಡುಪ್ರಾಣಿಗಳ ಸಂಘರ್ಷ ಕುರಿತು ಪತ್ರಕರ್ತರಿಗೆ ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಅ.8ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಕಾರ್ಯಾಗಾರಕ್ಕೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಚಾಲನೆ ನೀಡಲಿದ್ದು, ಪ್ರೊ.ಡಾ. ತೇಜಸ್ವಿ ನವಿಲೂರು ಹಾಗೂ ಸಂಶೋಧನಾ ಪ್ರಾಧ್ಯಾಪಕಿ ಪ್ರೊ.ಡಾ.ಕವಿತಾ ರೈ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ತ್ರಿಪಾಠಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಬಿ.ಬಿದ್ದಪ್ಪ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ಕಾರ್ಯದರ್ಶಿ ನೇರಳಕುಪ್ಪೆ ಮಹದೇವ್ ಭಾಗವಹಿಸಲಿದ್ದಾರೆ ಎಂದು ನಾಗರಹೊಳೆ ಉಪಅರಣ್ಯ ಸಂರಕ್ಷಣಾಧಿಕಾರಿ ಹರ್ಷಕುಮಾರ್ ಚಿಕ್ಕನರಗುಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಚಾಲನೆ



ಕೆಆರ್.ನಗರ, ಅ.7–ಸಾರ್ವಜನಿಕರು ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಮೂಲಕ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು. ಪಟ್ಟಣದ ತಹಶೀಲ್ದಾರ್ ನ್ಯಾಯಾಲಯದಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ಇನ್ನು ಮುಂದೆ ನಾಗರಿಕರು ಅರ್ಜಿಯನ್ನು ಕೈಯಲ್ಲಿ ಹಿಡಿದು ಅಲೆದಾಡುವಂತಿಲ್ಲ. ಒಂದೇ ಕಡೆ ಅರ್ಜಿ ಸಲ್ಲಿಸುವ ಮೂಲಕ ತಮ್ಮ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಸಿ.ಎಸ್.ಪೂರ್ಣಿಮಾ, ಗ್ರೇಡ್–2 ತಹಶೀಲ್ದಾರ್ ಬಾಲಸುಬ್ರಹ್ಮಣ್ಯ, ಸಿರಸ್ತೆದಾರ್ ಅಸ್ಲಾಂಪಾಷ, ವಿಷಯ ನಿರ್ವಾಹಕ ಧ್ರುವಕುಮಾರ್, ಸಣ್ಣಸ್ವಾಮಿ, ಶಶಿಕುಮಾರ್ ಇನ್ನಿತರರು ಹಾಜರಿದ್ದರು.



ಹೆಚ್.ಡಿ.ಕೋಟೆಯ ನ್ಯಾಯಾಲಯ ಆವರಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಲಯನ್ಸ್ ಸಂಸ್ಥೆ ಹಾಗೂ ಪಟ್ಟಣದ ಸಾರ್ವಜನಿಕ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾನೂನು ಅರಿವು–ನೆರವು ಕಾರ್ಯಕ್ರಮಕ್ಕೆ ನ್ಯಾಯಾಧೀಶರಾದ ಬಿ.ಸಂದೇಶ್ ಪ್ರಭು, ಕೆ.ಜಿ.ಸತೀಶ್, ಎಸ್.ಎಸ್.ಸುರೇಶ್ ಚಾಲನೆ ನೀಡಿದರು. ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ಲಯನ್ಸ್ ಕ್ಲಬ್ ಅಧ್ಯಕ್ಷ ಈರೇಗೌಡ, ವಕೀಲರ ಸಂಘದ ಅಧ್ಯಕ್ಷ ರವಿಕುಮಾರ್, ನಾರಾಯಣಗೌಡ, ನಾಗಣ್ಣ, ವೈ.ಟಿ.ಮಹೇಶ್, ಸುರೇಂದ್ರ ಡಿ.ಗೌಡ, ನಾಗನಾಯಕ, ಡಿ.ಆರ್.ಮಹೇಶ್, ಚಂದ್ರಶೇಖರ್ ಇದ್ದರು.

ವರುಣ ಕ್ಷೇತ್ರದ ಜನತೆಯಿಂದ ಸಿದ್ದರಾಮಯ್ಯ 2ನೇ ಬಾರಿ ಸಿಎಂ

ಕುಂದುಕೊರತೆ ಸಭೆಯಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ



ನಂಜನಗೂಡು, ಅ.7– ವರುಣ ಕ್ಷೇತ್ರದ ಜನತೆ ಅಧಿಕ ಮತಗಳನ್ನು ನೀಡಿ ಗೆಲ್ಲಿಸಿದ್ದರಿಂದಾಗಿ ಸಿದ್ದರಾಮಯ್ಯ ಅವರು 2ನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಆದ್ದರಿಂದ ಕ್ಷೇತ್ರದ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಕೆಂಪಿಸಿದ್ದನಹುಂಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನಪುರ ಹಾಗೂ ಹೆಜ್ಜಿಗೆತೊರೆಮಾವು ಗ್ರಾಮದಲ್ಲಿ ನಡೆದ ಕುಂದುಕೊರತೆ ಸಭೆಯಲ್ಲಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಚುನಾವಣೆ ನಂತರ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಬೇಕಿತ್ತು. ಆದರೆ, ಸಿಎಂ ಸಿದ್ದರಾಮಯ್ಯ ಕೆಲಸದ ಒತ್ತಡದಿಂದಾಗಿ ಕ್ಷೇತ್ರದ ಬಿಳಿಗೆರೆ ಗ್ರಾಮದಲ್ಲಿ ನಡೆದ ಸಭೆಯಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ. ಅವರ ಪರವಾಗಿ ನಾನು ಪ್ರತಿ ಗ್ರಾಮಗಳಿಗೆ ತೆರಳಿ ಕೃತಜ್ಞತೆ ಸಲ್ಲಿಸಿ, ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುತ್ತಿದ್ದೇನೆ ಎಂದರು.

ಬಸವನಪುರ ಗ್ರಾಮದಲ್ಲಿ ಸುಮಾರು 100ಕ್ಕೂ ಹೆಚ್ಚು ಮತ್ತು ಗೊದ್ದನಪುರ ಗ್ರಾಪಂ ವ್ಯಾಪ್ತಿಯ ಅರ್ಜಿ ಸಲ್ಲಿಸಿರುವ 300 ಜನರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಬಂದಿಲ್ಲ ಎಂದು ಸಭೆಯಲ್ಲಿ ಸಾರ್ವಜನಿಕರು ದೂರು ನೀಡಿದರು. ಇದಕ್ಕೆ ಉತ್ತರಿಸಿದ ಯತೀಂದ್ರ, ಕೆಲ ತಾಂತ್ರಿಕ ಸಮಸ್ಯೆಗಳಿಂದಾಗಿ ಕೆಲವರಿಗೆ ಹಣ ಬಂದಿಲ್ಲ. ಇದು ನನ್ನ ಗಮನಕ್ಕೆ ಬಂದಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಸಮಸ್ಯೆ ಬಗೆಹರಿಸಿ ಹಣ ಎಲ್ಲರಿಗೂ ಸಿಗುವಂತೆ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ತಾಲೂಕಿನ ಹೆಜ್ಜಿಗೆ ಗ್ರಾಮದಲ್ಲಿ ಯುಬಿ ಕಾರ್ಖಾನೆಯ ಸಿಎಸ್ಆರ್ ಅನುದಾನದಲ್ಲಿ ನಿರ್ಮಿಸಿರುವ ಬೋರ್‌ವೆಲ್, ನೀರಿನ ಟ್ಯಾಂಕ್‌ಗಳನ್ನು ಉದ್ಘಾಟಿಸಿದರು. ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಮುಖಂಡರಾದ ಇಂಧನ್‌ಬಾಬು, ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ಹೆಜ್ಜಿಗೆ ಪ್ರಸನ್ನಕುಮಾರ್, ಕೆಂಪಿಸಿದ್ದನಹುಂಡಿ ಗ್ರಾಪಂ ಅಧ್ಯಕ್ಷ ರವಿ, ಸದಸ್ಯ ಗಿರೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಲತಾಸಿದ್ದಶೆಟ್ಟಿ, ಕೆ.ಬಿ.ಸ್ವಾಮಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಮುಖಂಡರಾದ ಶ್ರೀಕಂಠ, ಜಗದೀಶ್, ಕೆಂಪಿಸಿದ್ದನಹುಂಡಿ ರವಿ, ನಂಜಯ್ಯ, ಮಹದೇವು, ಹೊಸಕೋಟೆ ಬಸವರಾಜು, ಕುರಿಹುಂಡಿರಾಜು ಗ್ರಾಪಂ ಸದಸ್ಯರಾದ ಗಿರಿಧರ್, ಪದ್ಮಾಣಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬನ್ನೂರಿನಲ್ಲಿ ಪಂಜಿನ ಮೆರವಣಿಗೆ



ಬನ್ನೂರು, ಅ.7– ತಮಿಳುನಾಡಿಗೆ ಬಿಡುತ್ತಿರುವ ಕಾವೇರಿ ನದಿ ನೀರನ್ನು ನಿಲ್ಲಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಶುಕ್ರವಾರ ರಾತ್ರಿ ಇಲ್ಲಿನ ಸಂತೆಮಾಳದ ಮೈಸೂರು–ಮಳವಳ್ಳಿ ಮುಖ್ಯರಸ್ತೆಯಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ರಾಜ್ಯ ಸರ್ಕಾರ ಬರಗಾಲದ ಪರಿಸ್ಥಿತಿಯಲ್ಲೂ ರೈತರ ಬದುಕನ್ನು ನಾಶಮಾಡಿ ತಮಿಳುನಾಡನ್ನು ರಕ್ಷಣೆ ಮಾಡುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲು ಕಾವೇರಿ ನದಿ ನೀರು ಬಿಟ್ಟು ರಾಜ್ಯದ ರೈತರ ಮರಣ ಶಾಸನ ಬರೆದಿದೆ. ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ನಡೆಸುವ ಮೂಲಕ ಮೈಸೂರು ದಸರಾ ಆಚರಣೆಗೆ ಅಡ್ಡಿಪಡಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಮೆರವಣಿಗೆಯಲ್ಲಿ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಬನ್ನೂರು ಸೂರಿ, ಬನ್ನೂರು ಶ್ರೀನಿವಾಸ್, ಕುಂತನಹಳ್ಳಿ ಸ್ವಾಮಿ, ಅತ್ತಹಳ್ಳಿ ಸಿ.ಲಿಂಗಣ್ಣ, ಅರುಣ್ ಕುಮಾರ್, ರಾಮ, ಹನುಮನಾಳು ಲೋಕೇಶ್, ಪಿ.ಚೇತನ್, ಮಧು, ಆಟೋ ರವಿ, ಲೋಕೇಶ್, ಮಹೇಶ್, ನಟೇಶ್, 50ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಪ್ರಸಾದ್ ನಿಧನ



ಹೆಚ್.ಡಿ.ಕೋಟೆ: ಪಟ್ಟಣದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಉಪವಿಭಾಗ ಕಚೇರಿಯ ಲೈನ್‌ಮನ್ ಪ್ರಸಾದ್ (42) ಶನಿವಾರ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಇದ್ದಾರೆ. ತುರುವೇಕೆರೆ ತಾಲೂಕಿನ ಮೃತರ ಸ್ವಗ್ರಾಮ ಮಾಯಸಂದ್ರದಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

COMMERCIAL SPACE FOR RENT

Vijayanagar 4th Stage, 2nd Phase. Around 3500 Sq. Feet. per floor of 3 floors (Total 10,500 Sq.Ft) with Lift & std amenities. Call

9845178515

NEW CASTLE HALL
Available on
10th & 11th March-24
SPECTRA HALL
Available on
2nd & 3rd December-23
0821-2416419
9535491919



ಮೈಸೂರು ತಾಲ್ಲೂಕು ಸಿದ್ದಲಿಂಗಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ

ಸಿ.ನಾರಾಯಣಪ್ಪ ರವರಿಗೆ

ಹುಟ್ಟುಹಬ್ಬದ ಶುಭಾಶಯಗಳು

ಶುಭಕೋರುವವರು:
ಡಿ.ಉಮೇಶ್, ಎನ್.ಸೌಂದರ್ಯ, ಯು.ಸಿಂಚನ, ಯು.ರಿತೇಶ್ ಗೌಡ ಮತ್ತು ಕುಟುಂಬ ವರ್ಗದವರು ಹಾಗೂ ಕಾಮನಕೆರೆಹುಂಡಿ ಗ್ರಾಮಸ್ಥರು.

ಶ್ರೀ ಭಗವಾನ್ ಸಿಲ್ಕ್ಸ್
ಮ್ಯಾಚಿಂಗ್ ಸೆಂಟರ್

ನಮ್ಮಲ್ಲಿ ರೆಡಿಮೇಡ್ ಬ್ಲೌಸ್
ಡಿಸೈನರ್ ಬ್ಲೌಸ್
ಪಾರ್ಟಿವೇರ್ ಬ್ಲೌಸ್
ಶೇಪ್‌ವೇರ್ ಮತ್ತು
ಮೇಟಿರಿಯಲ್‌ಗಳು
ದೊರೆಯುತ್ತದೆ

ಕೆ.ಆರ್. ಸರ್ಕಲ್, ಮೈಸೂರು

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್

9591012944


5ನೇ ವರ್ಷದ ಸವಿನೆನಪು



ಶಾರದಮ್ಮ
(29.9.2018)

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಮನದಲ್ಲಿ.
ದುಃಖತಪ್ತರು : ರೂಪಾ, ರೇವಣ್ಣ ಮೈಸೂರು.

ನಿಧನ



ಸೌದೆ ಡಿಪೋ **ರಾಜಣ್ಣ**

ಇವರು ದಿನಾಂಕ 07–10–2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆ 8–10–2023ರಂದು ಮಾವಿನಹಳ್ಳಿ ರುದ್ರಭೂಮಿಯಲ್ಲಿ ನಡೆಯಲಿದೆ.

ದುಃಖತಪ್ತರು: ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗದವರು

MUDA LIMITS

ಹೆರಿಟೇಜ್ ಹೋಮ್ಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MEGA RESIDENTIAL TOWNSHIP ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಕೇವಲ ₹550/ ಪ್ರತಿ ಚದರ ಅಡಿ

ಸುಲಭ 4 ಕಂತುಗಳ ಸೌಲಭ್ಯವಿದೆ

ಅದ್ವಿಕಾ ವೆಂಚರ್ಸ್
9513301854 / 9071386615

Big Festival Sale Buy 2 Get Get 1 Free*

BUY 2 GET 1* FREE ON ALL IN-HOUSE BRANDS

PICK THE BEST FOR UR FEET
GENTS & LADIES FOOTWEAR
2+1 OFFER RUSH

SHOE WORLD
ESTD.1998
Best Brands at Your Feet...
*T&C Apply

Shivarampet, Opp. Mannars Market, Mysore-01. Ph: **0821-2424282**

Nammane Constructions Mysore

WE ARE HIRING NOW!

HR - Manager	1 Post (Corp Office) 4-6 yrs Experience
Sales Manager	2 Post (Interiors) 5-10 yrs Experience
Site Engineers	4 Post (Civil) 5 yrs Experience
Project Co-ordinator	2 Post (Civil) 7-10 yrs Experience
Accountants	2 Post (Corp-office) 3-5 yrs Experience
Sales Representatives	2 Post (Constructions & Interiors) 3-5 yrs Experience
Draft Designers	2 Post (Constructions) 3-5 yrs Experience

Call / Whatsapp : 99728 25343

TGMC BANK
ISO 9001-2015 Certified Bank

ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ಬಿ.ಹೆಚ್. ರಸ್ತೆ, ತುಮಕೂರು–572 103. ದೂ : 0816–4021102/03
E-mail: tgmc.ho@tgmcbank.com., Website : www.tgmcbank.com.

ನಮ್ಮ ನಿಮ್ಮೆಲ್ಲರ ನೆಚ್ಚಿನ ಬ್ಯಾಂಕ್ ಅರ್ಧ ವಾರ್ಷಿಕದ ಅಂತ್ಯಕ್ಕೆ ರೂ. 22 ಕೋಟಿಗೂ ಮೀರಿ ಲಾಭಗಳಿಸಿದೆ
(ಲೆಕ್ಕ ಪರಿಶೋಧನೆಗೆ ಒಳಪಟ್ಟು)

ರೂ. 2511 ಕೋಟಿಗೂ ಮೀರಿದ ವಹಿವಾಟು ನಡೆಸಿದೆ

ಗೌರವಾನ್ವಿತ ಸದಸ್ಯರು ಮತ್ತು ಗ್ರಾಹಕರಿಗೆ ಹೃದಯ ಪೂರ್ವಕ ಧನ್ಯವಾದಗಳು

ಠೇವಣಿಗಳ ವಾರ್ಷಿಕ ಬಡ್ಡಿದರಗಳನ್ನು ಎಂದಿನಂತೆ ಆಕರ್ಷಕವಾಗಿ ಹಾಗೂ ಗ್ರಾಹಕರ ಆರ್ಥಿಕ ಅಭಿವೃದ್ಧಿಗೆ ಉತ್ತೇಜನಕಾರಿಯಾಗಿ ನಿಗಧಿಪಡಿಸಲಾಗಿದೆ.

ಠೇವಣಿಗಳ ಮೇಲಿನ ಆತ್ಯಾಕರ್ಷಕ ಬಡ್ಡಿದರಗಳು

15 ದಿನಗಳಿಂದ	90 ದಿನಗಳವರಗೆ	4.50%
91 ದಿನಗಳಿಂದ	180 ದಿನಗಳವರಗೆ	5.00%
181 ದಿನಗಳಿಂದ	1 ವರ್ಷದವರಗೆ	6.75%
1 ವರ್ಷ ಮೇಲ್ಪಟ್ಟು	2 ವರ್ಷದವರಗೆ	7.00%
2 ವರ್ಷ ಮೇಲ್ಪಟ್ಟು	5 ವರ್ಷದವರಗೆ	7.50%

ಹಿರಿಯ ನಾಗರೀಕರ 1 ವರ್ಷ ಮೇಲ್ಪಟ್ಟ ಠೇವಣಿಗಳ ಮೇಲೆ ಶೇ. 0.50 ರಷ್ಟು ಹೆಚ್ಚಿನ ಬಡ್ಡಿದರ ನೀಡಲಾಗುವುದು.

ರೂ.50 ಲಕ್ಷ ಮೇಲ್ಪಟ್ಟ ಠೇವಣಿಗಳ ಬಡ್ಡಿದರಗಳು
(ಹಿರಿಯ ನಾಗರೀಕರ ಠೇವಣಿಗಳನ್ನು ಒಳಗೊಂಡು)

ಅವಧಿ : 1 ವರ್ಷ ಮೇಲ್ಪಟ್ಟ ಮತ್ತು 2 ವರ್ಷದವರಗೆ	7.25%
ಅವಧಿ : 2 ವರ್ಷ ಮೇಲ್ಪಟ್ಟ ಮತ್ತು 5 ವರ್ಷದವರಗೆ	7.75%

ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿದರಗಳು

ಕ್ರ.ಸಂ	ವಿವರಗಳು	ಬಡ್ಡಿದರಗಳು
1	ಗೃಹಸಾಲ ರೂ. 35,00,000/– ಗಳವರಗೆ	08.00%
	ಗೃಹಸಾಲ ರೂ. 35,00,000/– ಮೇಲ್ಪಟ್ಟು ರೂ. 1,40,00,000/– ಗಳವರಗೆ	08.25%
2	ಮನೆ ನಿರ್ಮಿಸುವ ಸಲುವಾಗಿ ನಿವೇಶನ ಖರೀದಿಸಲು ಸಾಲ ಸೌಲಭ್ಯ	08.50%
3	ಚಿನ್ನಾಭರಣ ಸಾಲ ಪ್ರತಿ ಗ್ರಾಂ ಗೆ ರೂ. ಗರಿಷ್ಠ ಸಾಲ ಸೌಲಭ್ಯ	07.60%
4	MSME Loan	10.00%
	ಸರಕು ಅಡಮಾನ ಸಾಲ ರೂ. 5 ಕೋಟಿಗಳವರಗೆ	08.50%
5	ಸರಕು ಅಡಮಾನ ಸಾಲ ರೂ. 5 ಕೋಟಿಗಳ ಮೇಲ್ಪಟ್ಟು	08.00%
6	ಆಸ್ತಿ ಅಡಮಾನ ಸಾಲ Rental Discounting Scheme	11.00%
7	ವಾಣಿಜ್ಯ ಕಟ್ಟಡ ನಿರ್ಮಿಸಲು, ಖಾಲಿ ನಿವೇಶನ ಆಧಾರದ ಮೇಲೆ ಸಾಲ Loan for Real Estate Business SSI Loan /ವಾಯಿದೆ ಸಾಲ /ಮೆಷಿನರಿ ಸಾಲ	11.50%
8	ನಗದುದ್ದರಿ/ಮೀರೆಳತೆ ಸಾಲ (Cash Credit / Over Draft)	11.50%
9	ವಾಹನಸಾಲ	
	ದ್ವಿಚಕ್ರ ವಾಹನ	11.50%
	ಹೊಸ ಕಾರು (ಸ್ವಂತ ಉಪಯೋಗಕ್ಕಾಗಿ)	08.00%
	ಹಳೆಯ ವಾಹನ (ಸ್ವಂತ ಉಪಯೋಗಕ್ಕಾಗಿ)	13.00%
	ಹೊಸ ವಾಹನ (ಟ್ಯಾಕ್ಸಿ)	08.50%
	ಹೊಸ ವಾಹನ (ವಾಣಿಜ್ಯ ಉಪಯೋಗಕ್ಕಾಗಿ)	10.00%
	ಹಳೆಯ ವಾಹನ (ವಾಣಿಜ್ಯ ಉಪಯೋಗಕ್ಕಾಗಿ)	14.50%
10	ವೇತನಾಧಾರ ಸಾಲ	12.00%
11	LIC/NSC ಆಧಾರದ ಮೇಲೆ ಸಾಲ	11.00%
12	ಗೃಹ ಉಪಯೋಗಿ ವಸ್ತುಗಳ ಆಧಾರದ ಮೇಲೆ ಸಾಲ	13.50%

ಷರತ್ತುಗಳು ಅನ್ವಯ*

ರೂ 5 ಲಕ್ಷಗಳ ವರೆಗಿನ ಠೇವಣಿಗಳಿಗೆ ವಿಮಾ ಸೌಲಭ್ಯವಿದೆ

"ನಿಮ್ಮ ಹಣದ ಭದ್ರತೆ ಸುರಕ್ಷತೆ ಮತ್ತು ಲಾಭಕ್ಕಾಗಿ ನಮ್ಮಲ್ಲೇ ತೊಡಗಿಸಿ"

ಮಾನ್ಯ ಸದಸ್ಯರು ಮತ್ತು ಗ್ರಾಹಕರು ಇದರ ಸದುಪಯೋಗ ಪಡೆಯಲು ವಿನಂತಿಸಿದೆ
ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ

ನಿಮ್ಮ ನಂಬಿಕೆಯೇ ನಮ್ಮ ಆಸ್ತಿ



ಸಿ.ಆರ್ ನಟರಾಜ್
ಉಪಾಧ್ಯಕ್ಷರು(ಪ್ರ)

ಕಾರ್ಯಕಾರಿ ಮಂಡಳಿ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ



ಹೆಚ್.ಎಂ. ದಿವ್ಯಾನಂದಮೂರ್ತಿ
ಅಧ್ಯಕ್ಷರು

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ

ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು

ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.

Call: 96111 72148, 94495 61722
Office time 11 am to 6.00 pm on all days

ವಧು–ವರರ ಅನ್ವೇಷಣೆ ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ.

http://www.hoysalakarnatakabrahmins.com

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಸುಮ ಗೋಪಾಲಕೃಷ್ಣ, ದೂರವಾಣಿ : **9886908152**

ದಸರಾ ಮಹೋತ್ಸವ 2023 – ಕುಸ್ತಿ ಉಪಸಮಿತಿ

ಅವಶ್ಯಕತೆ ಇರುವ ವಸ್ತುವಿನ ವಿವರ

		ಕ್ರಸಂ	ವಿವರ	ಪ್ರಮಾಣ
1)	ಬೆಳ್ಳಿಯ ಗದೆ	1	ಅರ್ಧ ಕೆ.ಜಿ	02
		2	ಮುಕ್ಕಾಲು ಕೆ.ಜಿ	01
		3	1 ಕೆ.ಜಿ	01
		4	1 1/4 ಕೆ.ಜಿ	01

ನಿಬಂಧನೆಗಳು: 1) ಬೆಳ್ಳಿ ಗದೆಯು ಆಕರ್ಷಣೀಯವಾಗಿ ಕೆತ್ತನೆಯನ್ನು ಹೊಂದಿರ ತಕ್ಕದ್ದು. 2) ದಿ: 09.10.2023ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಟೆಂಡರು ಫಾರಂಗಳನ್ನು ವಿತರಿಸಲಾಗುವುದು. 3) ದಿ: 11.10.2023ರ ಸಂಜೆ 4.30 ಗಂಟೆಯ ಒಳಗೆ ಟೆಂಡರನ್ನು ದಸರಾ ಉಪ ವಿಶೇಷಾಧಿಕಾರಿ, ದಸರಾ ಕುಸ್ತಿ ಉಪಸಮಿತಿ–2023 ಹಾಗೂ ಅಪರ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಜಿಲ್ಲಾ ಪೊಲೀಸ್ ಕಛೇರಿ, ಜಲಪುರಿ, ಮೈಸೂರು–570019 ಇಲ್ಲಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. 4) ಟೆಂಡರು ಹಾಕುವಾಗ ರೂ.10,000/– ಇಎಂಡಿ ಯನ್ನು ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ದಸರಾ ಕುಸ್ತಿ ಉಪಸಮಿತಿ–2023 ಇವರ ಹೆಸರಿನಲ್ಲಿ ತೆಗೆದು ಸಲ್ಲಿಸುವುದು. 5) ಟೆಂಡರ್ ಅನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ ದಸರಾ ಕುಸ್ತಿ ಉಪಸಮಿತಿ–2023 ಎಂದು ನಮೂದಿಸತಕ್ಕದ್ದು. 6) ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ದಸರಾ ಕುಸ್ತಿ ಸಮಿತಿಯು ಹೊಂದಿರುತ್ತದೆ.

ಸಹಿ/– (ಡಾ. ನಂದಿನಿ.ಬಿ.ಎನ್), ದಸರಾ ಉಪವಿಶೇಷಾಧಿಕಾರಿ, ಕುಸ್ತಿ ಉಪಸಮಿತಿ–2023 ಹಾಗೂ ಅಪರ ಪೋಲಿಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು.

DIPR/DDMYS/KSMCA/494/2023-24

Kodava Education Society (R)

COORG INSTITUTE OF TECHNOLOGY, PONNAMPET

ADMISSIONS OPEN FOR THE ACADEMIC YEAR 2023-24 - I AND II YEAR LATERAL ENTRY

COURSES OFFERED

- Artificial Intelligence and Machine Learning,
- Artificial Intelligence and Data Science,
- Computer Science and Engineering,
- Civil Engineering, • Electronics and Communication Engineering, • Mechanical Engineering,
- Computer Science and Engineering - Cyber Security.

Phone: +91 9611173724, +91 9611155457

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ/कर्मचारी भविष्य निधि संगठन
EMPLOYEES' PROVIDENT FUND ORGANISATION
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ/श्रम एवं रोजगार मंत्रालय भारत सरकार)
(Ministry of Labour & Employment, Govt. of India)
ಪ್ರಾದೇಶಿಕ ಕಚೇರಿ, ಭವಿಷ್ಯ ನಿಧಿ ಭವನ, ಗಾಯತ್ರಿಪುರಂ, ಮೈಸೂರು–19
सत्यमेव जयते
क्षेत्रीय कार्यालय. भविष्य निधि भवन. गायत्रीपरम. मैसरू – 19
Tele: 0821-2599200/222 Email: ro.mysore@epfindia.gov.in Website: www.epfindia.gov.in

सं.No.कर्नाKN/भनिPF/क्षेकाRO/मैसूरूMYS/प्रशा ADM/ 151/23-24 Dt:06.10.2023

ಬದಲಿ ಸಮನ್ಸ್

ಕಾರ್ಮಿಕ ಭವಿಷ್ಯ ನಿಧಿ ಮತ್ತು ವಿವಿಧ ನಿಬಂಧನೆಗಳ ಕಾಯಿದೆ, 1952 ರ ಸೆಕ್ಷನ್ 7A ಅಡಿಯಲ್ಲಿ ಈ ಕೆಳಗಿನ ಸಂಸ್ಥೆಗಳ ವಿರುದ್ಧ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿದೆ. ಸಮನ್ಸ್ ಅನ್ನು ಉದ್ಯೋಗದಾತ/ಸಂಸ್ಥೆಯ ಲಭ್ಯವಿರುವ ಎಲ್ಲಾ ವಿಳಾಸಗಳಿಗೆ ಕಳುಹಿಸಲಾಗಿದ್ದು, ತಲುಪದೆ ಹಿಂತಿರುಗಿರುತ್ತದೆ. ಆದ್ದರಿಂದ, ಈ ಸಂಸ್ಥೆಗಳ ಉದ್ಯೋಗದಾತರು / ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳು ತಮ್ಮ ಪ್ರಕರಣವನ್ನು ಪ್ರತಿನಿಧಿಸಲು 16.10.2023 ರಿಂದ 18.10.2023 ರ ನಡುವೆ ಕಛೇರಿ ಸಮಯದಲ್ಲಿ ಕೆಳಗೆ ಒದಗಿಸಲಾದ ವಿಳಾಸದಲ್ಲಿ ಮೌಲ್ಯಮಾಪನ ಅಧಿಕಾರಿಯ ಕಚೇರಿಗೆ ಹಾಜರಾಗಲು / ಸಂಪರ್ಕಿಸಲು ನಿರ್ದೇಶಿಸಲಾಗಿದೆ, ಹೇಳಲಾದ ದಿನಾಂಕಗಳಲ್ಲಿ ಪ್ರಾಧಿಕಾರದ ಮುಂದೆ ಹಾಜರಾಗಲು ವಿಫಲವಾದರೆ, ಯಾವುದೇ ಹೆಚ್ಚಿನ ಅವಕಾಶವನ್ನು ನೀಡದೆ ಮತ್ತು ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳೊಂದಿಗೆ ಪ್ರಾಧಿಕಾರವು 7A ವಿಚಾರಣೆಯನ್ನು ಮುಕ್ತಾಯಗೊಳಿಸುತ್ತದೆ.

ಕ್ರ ಸಂ.	ಸ್ಥಾಪನೆ ಕೋಡ್	ಸಂಸ್ಥೆಯ ಹೆಸರು ಮತ್ತು ವಿಳಾಸ	7ಎ ವಿಚಾರಣೆಯ ಅವಧಿ	ಮೌಲ್ಯಮಾಪನ ಅಧಿಕಾರಿಯ ಕಚೇರಿಯ ವಿಳಾಸ
1	KNMYS1812582000	ಮೈಸೂರು ಟ್ಯಾಕ್ಸಿ ವಾಲಾ, ಕಾರ್ಪೊರೇಟ್ ಕಚೇರಿ, 44, KHB ಕಾಲೋನಿ 5 ನೇ ಹಂತ, ಆದಿಚುಂಚನಗಿರಿ ರಸ್ತೆ, ಮೈಸೂರು – 570023	09/2018 to 03/2019	ಕಾರ್ಮಿಕ ಭವಿಷ್ಯ ನಿಧಿ ಸಂಸ್ಥೆ, ನಂ. 109–128, ಭವಿಷ್ಯನಿಧಿ ಭವನ, 2ನೇ ಹಂತ, ಗಾಯತ್ರಿಪುರಂ–570019
2	KNMYS1564600000	ಶ್ರೀ ಶರವಣ ಭವನ (ಶುದ್ಧ ವೆಜ್) ನಂ. 29, 6ನೇ ಮುಖ್ಯ ರಸ್ತೆ, ವಿ.ವಿ ಪುರಂ, ದೇವರಾಜ ಮೊಹಲ್ಲಾ, ಮೈಸೂರು – 570002	09/2018 to 06/2019	
3	KNMYS1577889000	ದಿಯಾ ಎಂಟರ್‌ಪ್ರೈಸಸ್, 4507, 17ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು – 570016	04/2017 to 08/2018	
4	KNMYS1014267000	ಯಸ್ ಏನ್ ಯಸ್ ಎಂಟರ್‌ಪ್ರೈಸಸ್, ವಿಜಿಪಿ ಕಾಂಪ್ಲೆಕ್ಸ್, ಕೆಎಲ್ 167, 3ನೇ ಮಹಡಿ, ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಸ್ತೆ, ಜಿಲ್ಲಾ ಪಂಚಾಯತ್‌ಹತ್ತಿರ, ಮಂಡ್ಯ – 571401	07/2014 to 07/2019	

ಅಕ್ಟೋಬರ್, 2023ರ 6ನೇ ಈ ದಿನದಂದು ಮೈಸೂರಿನಲ್ಲಿ ನೀಡಲಾಗಿದೆ.
ಸ್ಥಳ: ಮೈಸೂರು
ದಿನಾಂಕ: 06.10.2023

ಸಹಿ/–
ಪ್ರಾದೇಶಿಕ ಭ. ನಿ. ಆಯುಕ್ತರು – II
ಪ್ರಾದೇಶಿಕ ಕಛೇರಿ, ಮೈಸೂರು

ಕೊಡಗು ಜಿಲ್ಲಾ ಪಂಚಾಯತ್
ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ 02/2023–24

ಕ್ರ.ಸಂ.ಉನಿಕೊ/ಔಷಧ/ದ್ರಸಾರ/2023–24 ಮಡಿಕೇರಿ ದಿನಾಂಕ 7.10.2023

ಜಿಲ್ಲೆಯ 73 ಪಶು ವೈದ್ಯ ಸಂಸ್ಥೆಗಳಿಗೆ **M/s Gadag Oxygen Private Ltd, Gadag** ಇವರಿಂದ ದ್ರವಸಾರಜನಕ ಸರಬರಾಜಾಗುತ್ತಿರುವ ಪುತ್ತೂರು ತಾಲ್ಲೂಕು ಕೋಳ್ತಿಗೆ ಸೈಲೋ ಕೇಂದ್ರದಿಂದ ಅಕ್ಟೋಬರ್ 2023 ಮಾಹೆಯಿಂದ ಸೆಪ್ಟೆಂಬರ್ 2024 ರ ಮಾಹೆಯವರೆಗೆ ಪ್ರತೀ ತಿಂಗಳು ದ್ರವಸಾರಜನಕವನ್ನು **Eicher, Canter, Swaraj Mazda,** ಈ ಮಾದರಿಯಂತಹ ವಾಹನದಲ್ಲಿ ಕಿ.ಮೀ ದರದಲ್ಲಿ ಸಾಗಾಣಿಕೆ ಕೆಲಸಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

1) ದ್ರವಸಾರಜನಕ ಸಾಗಾಣಿಕೆ ಇಟ್ಟ ಅಂದಾಜು ಮೊತ್ತ ರೂ: 4.90 ಲಕ್ಷ. EMD ರೂ: **10,000.**
2) ಟೆಂಡರ್ ನಮೂನೆ ಪಡೆಯಲು ಕೊನೆಯ ದಿನಾಂಕ 19.10.2023 ಅಪರಾಹ್ನ 12.00 ಗಂಟೆ ವರೆಗೆ ಖಿಲ್ಲಾ ಟೆಂಡರ್ ಪ್ರತಿಗಳ ಬೆಲೆ ರೂ. 500.00 ಮಾತ್ರ
3) ಭರ್ತಿ ಮಾಡಿದ ಟೆಂಡರ್ ನಮೂನೆ ಸಲ್ಲಿಸಲು ಕೊನೆಯ ದಿನಾಂಕ 19.10.2023 ಅಪರಾಹ್ನ 1.00 ಗಂಟೆ.
4) ಟೆಂಡರ್ ತೆರೆಯುವ ದಿನಾಂಕ 19.10.2023 ಅಪರಾಹ್ನ 3.00 ಗಂಟೆಗೆ.
5) ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– (ಡಾ: ಲಿಂಗರಾಜ್ ಹೆಚ್ ದೊಡ್ಡಮನಿ)
ಉಪ ನಿರ್ದೇಶಕರು, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.

(ತೋಟಗಾರಿಕೆ ಇಲಾಖೆ)
ತೋಟಗಾರಿಕೆ ಉಪ ನಿರ್ದೇಶಕರು,
ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು
Ph: 08227-295185 e-mail: biocentremysuru@gmail.com

ಇ–ಟೆಂಡರ್ ಪ್ರಕಟಣೆ

ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ತಿ.ನರಸೀಪುರ, ಮೈಸೂರು ಇಲ್ಲಿನ ವಿವಿಧ ಪ್ರಯೋಗಶಾಲೆಯಲ್ಲಿ ಉತ್ಪಾದಿಸುವ ವಿವಿಧ ಉತ್ಪನ್ನಗಳ ಉತ್ಪಾದನೆಗೆ ಅವಶ್ಯವಿರುವ ಲ್ಯಾಬೊರೇಟರಿ ರಾಸಾಯನಿಕಗಳನ್ನು ಖರೀದಿಸಲು ಇ–ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ–ಟೆಂಡರ್ ಪ್ರಕಟಣೆಯ ವಿವರ ಈ ಕೆಳಕಂಡಂತಿರುತ್ತದೆ. ಇ–ಟೆಂಡರ್ ಪ್ರಕಟಣೆ ಸಂಖ್ಯೆ. ತೋಉನಿ/ಸಜೈಕೇ/ರಂ/ಮೈ/ಸತೋಅ/01/2023–24, ದಿ.05.10.2023. ಇ–ಟೆಂಡರ್ ಅಂದಾಜು ಮೊತ್ತ: ರೂ.23.00 ಲಕ್ಷಗಳು. ಇ–ಟೆಂಡರ್ ಚಾಲ್ತಿ ಆಗುವ ದಿನಾಂಕ ಮತ್ತು ಸಮಯ: 06.10.2023, ಬೆಳಿಗ್ಗೆ 11.30 ರಿಂದ ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.10.2023 ಸಂಜೆ 5.00 ಗಂಟೆಗೆ. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21.10.2023 ರ ಸಂಜೆ 5.00 ಗಂಟೆಗೆ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25.10.2023 ರ ಮಧ್ಯಾಹ್ನ 12.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು http://kppp.karnataka.gov.in ರಲ್ಲಿ ಪಡೆಯಲು ಕೋರಿದೆ.

ಸಹಿ/– ಸಹಾಯಕ ತೋಟಗಾರಿಕೆ ಅಧಿಕಾರಿ, ಸಮಗ್ರ ಜೈವಿಕ ಕೇಂದ್ರ, ರಂಗಸಮುದ್ರ, ಮೈಸೂರು

DIPR/DDMYS/KSMCA/485/2023-24